ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಬುಧವಾರ, ಫೆಬ್ರವರಿ 19, 2025

ಸಂಪುಟ : 51 ಸಂಚಿಕೆ : 278 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com

## ಅಕ್ರಮ ಬಡಾವಣೆ ತಲೆ ಎತ್ತಿದರೆ ಜಿಲ್ಲಾಧಿಕಾರಿಗಳೇ ಹೊಣೆ: ಸಿಎಂ

### ಅನಧಿಕೃತ ಮನೆ-ನಿವೇಶನಗಳಿಗೆ 'ಬಿ' ಖಾತಾ ನೀಡಲು ಆದೇಶ

ಬೆಂಗಳೂರು,ಫೆ.18- ರಾಜ್ಯದ ಯಾವುದೇ ಮೂಲೆಯಲ್ಲಿ ಅನಧಿಕೃತ ಬಡಾವಣೆ ತಲೆ ಎತ್ತಿದರೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಮತ್ತು ನಗರ ಯೋಜನಾ ಅಧಿಕಾರಿಗಳನ್ನು ಜವಾಬ್ದಾರರನ್ನಾಗಿ ಮಾಡಿ, ಮುಲಾಜಿಲ್ಲದೆ ಕಾನೂನು ಕ್ರಮ ಜರುಗಿಸುವುದಾಗಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಎಚ್ಚರಿಸಿದ್ದಾರೆ.



ನಗರ ಪ್ರದೇಶದಿಂದ ಗ್ರಾಮಗಳವರೆಗೂ ಅಕ್ರಮ ಬಡಾವಣೆ ಮತ್ತು ನಿವೇಶನಗಳು ತಲೆ ಎತ್ತಿವೆ, ಅಂತಹವುಗಳಿಗೆ ಇನ್ನು ಮೂರು ತಿಂಗಳೊಳಗಾಗಿ 'ಬಿ' ಖಾತಾ ನೀಡಿ ಎಂದು ಆದೇಶಿಸಿದ್ದಾರೆ.

ರಾಜ್ಯದ ಮಹಾನಗರ ಪಾಲಿಕೆ, ನಗರ ಸ್ಥಳೀಯ ಸಂಸ್ಥೆಗಳಲ್ಲಿ 'ಇ' ಖಾತಾ ನೀಡುವ ಕುರಿತು ಜಿಲ್ಲಾಧಿಕಾರಿಗಳು, ಯೋಜನಾ ನಿರ್ದೇಶಕರು, ಪಾಲಿಕೆ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಆಯುಕ್ತರು, ಪೌರಾಯುಕ್ತರು, ಮುಖ್ಯಾಧಿಕಾರಿ ಗಳೊಂದಿಗೆ ವಿಡಿಯೋ ಕಾನ್ಫರೆನ್ಸ್ ನಡೆಸಿ ಈ ಕಟ್ಟಾದೇಶ ಮಾಡಿದರು.

ಮೇ ತಿಂಗಳ ನಂತರ ರಾಜ್ಯದ ಯಾವುದೇ ಭಾಗ ದಲ್ಲೂ ಅನಧಿಕೃತ ಬಡಾವಣೆ ಎನ್ನುವುದೇ ಇರಬಾ ರದು ಮತ್ತು ಹೊಸ ಬಡಾವಣೆಗಳಿಗೆ ನಿಯಮಾನುಸಾರ ಅನುಮತಿ ನೀಡಬೇಕು ಎಂದು ಸೂಚಿಸಿದರು.

ರಾಜ್ಯಾದ್ಯಂತ ಸಾವಿರಾರು ಅಕ್ರಮ ಬಡಾವಣೆ ಗಳು ತಲೆ ಎತ್ತಿ ಯೋಜನಾ ಸ್ವರೂಪವನ್ನೇ ಹಾಳು ಮಾಡಿವೆ, ಇಂತಹ ಬಡಾವಣೆಗಳಿಂದ ಸರ್ಕಾರಕ್ಕೆ ಒಂದು ರೂಪಾಯಿಯೂ ಆದಾಯ ಬರುತ್ತಿಲ್ಲ.

ನಾಕರಿಕರು ಇಂತಹ ಬಡಾವಣೆಗಳಲ್ಲಿ ನಿವೇಶನ ಮತ್ತು ಮನೆಗಳನ್ನು ಪಡೆದು ನಂತರ ಮೂಲಸೌಕರ್ಯ ನೀಡಿ ಎಂದು ನಮ್ಮ ಬಳಿ ಬರುತ್ತಾರೆ, ಆದರೆ, ಇಂತಹ ಬಡಾವಣೆಗಳಿಂದ ಯಾವುದೇ ತೆರಿಗೆ ಪಾವತಿ ಆಗುತ್ತಿಲ್ಲ.

ಅಕ್ರಮ ಬಡಾವಣೆಗಳಲ್ಲಿನ ಮನೆ ಹಾಗೂ ನಿವೇಶನಗಳಿಗೆ 'ಬಿ' ಖಾತಾ ನೀಡಿ, ಕಂದಾಯ ವಸೂಲಿ ಮಾಡಿ, ಅವರುಗಳನ್ನು ತೆರಿಗೆ ವ್ಯಾಪ್ತಿಗೆ ತನ್ನಿ ಎಂದು ಅಧಿಕಾರಿಗಳಿಗೆ ಆದೇಶ ಮಾಡಿದ್ದಾರೆ.

ಯಾವುದೇ ಸ್ವರೂಪದ ಮನೆ, ನಿವೇಶನಗಳಾಗಲಿ 'ಬಿ' ಖಾತಾ ನೀಡುವ ಮೂಲಕ ತೆರಿಗೆ ವ್ಯಾಪ್ತಿಗೆ ತನ್ನಿ. ಈ ಕಾರ್ಯ ಇಂದಿನಿಂದಲೇ ಆರಂಭಿಸಿ ಎಂದು ಕಟ್ಟಾದೇಶ ಮಾಡಿದರು.

ಈ ಅಕ್ರಮ-ಸಕ್ರಮದಿಂದ ಸರ್ಕಾರ ಮತ್ತು ಸ್ಥಳೀಯ ಸಂಸ್ಥೆಗಳಿಗೆ ದೊಡ್ಡ ಪ್ರಮಾಣದಲ್ಲಿ ಆದಾಯ ಬರಲಿದೆ, ಈ ಆದಾಯವನ್ನು ಸ್ಥಳೀಯ ಅಭಿವೃದ್ಧಿಗೆ ಬಳಸಿ, ಇದರಿಂದ ಆರ್ಥಿಕ ಹೊರೆ ಕಡಿಮೆಯಾಗುತ್ತದೆ.

ಮೂರು ತಿಂಗಳೊಳಗೆ ಎಲ್ಲರಿಗೂ 'ಬಿ' ಖಾತಾ ನೀಡಿ ಕಾರ್ಯ ಮುಗಿಸಬೇಕು, ಇದರಲ್ಲಿ ಮಧ್ಯವರ್ತಿಗಳು ಹಾಗೂ ಬ್ರೋಕರ್‌ಗಳು ತಲೆ ಹಾಕದಂತೆ ಕ್ರಮ ವಹಿಸಿ, ಅವರುಗಳಿಗೆ ತಕ್ಷಣ ಗೇಟ್‌ಪಾಸ್ ಕೊಡಿ. ಕಾಯ್ದೆ (2ನೇ ಪುಟಕ್ಕೆ)

## ಕೃಷಿಗೆ 7, ಕೈಗಾರಿಕೆಗೆ 24 ತಾಸು ವಿದ್ಯುತ್

### ಸರ್ಕಾರದ ನೀತಿಗೆ ಬದ್ಧವಾಗಿ ವಿದ್ಯುತ್ ಪೂರೈಕೆ: ಇಂಧನ ಸಚಿವ ಜಾರ್ಜ್

ದಾವಣಗೆರೆ, ಫೆ. 18- ಕೃಷಿಗೆ 7 ತಾಸು ತ್ರಿಫೇಜ್ ವಿದ್ಯುತ್ ಮತ್ತು ಗೃಹ ಬಳಕೆ ಹಾಗೂ ಕೈಗಾರಿಕೆಗೆ ದಿನದ 24 ಗಂಟೆಗಳೂ ವಿದ್ಯುತ್ ಪೂರೈಕೆ ಮಾಡುವ ಸರ್ಕಾರದ ನೀತಿಗೆ ಬದ್ಧವಾಗಿ ವಿದ್ಯುತ್ ಪೂರೈಸಲಾಗುತ್ತಿದೆ ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ತಿಳಿಸಿದರು.

ಅವರು ಮಂಗಳವಾರ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಇಂಧನ ಇಲಾಖೆ ಅಧಿಕಾರಿಗಳು ಹಾಗೂ ಶಾಸಕರೊಂದಿಗೆ ನಡೆಸಿದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದರು.

ಕುಸುಮ್-ಸಿ ಯೋಜನೆಯ ಮೂಲಕ ಮುಂದಿನ ಒಂದೂವರೆ ವರ್ಷದಲ್ಲಿ ಸೋಲಾರ್‌ನಿಂದ 3 ಸಾವಿರ ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಯ ಗುರಿ ಹೊಂದಲಾಗಿದೆ. ಈಗಾಗಲೇ ಕುಸುಮ್ ಯೋಜನೆಯಡಿ ಸಂಸ್ಥೆಗಳಿಗೆ ಕಾರ್ಯಾದೇಶ ನೀಡಿದ್ದು, ಸೋಲಾರ್ ಪ್ಯಾನಲ್ ಅಳವಡಿಕೆ, ವಿದ್ಯುತ್ ಉತ್ಪಾದನೆ ಹಂತ, ಭೂಮಿ ಸಮತಟ್ಟು ಮಾಡುವ ಕೆಲಸ ಪ್ರಗತಿಯಲ್ಲಿದ್ದು ಬರುವ ಏಪ್ರಿಲ್‌ನಲ್ಲಿ 300 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾಡಿ ಗ್ರಿಡ್‌ಗೆ ಕಳುಹಿಸಲು ಕಾರ್ಯಕ್ರಮ ರೂಪಿಸಲಾಗಿದೆ ಎಂದರು.

ಸರ್ಕಾರದ ಗ್ಯಾರಂಟಿ ಯೋಜನೆಗಳಲ್ಲೊಂದಾದ ಗೃಹಜ್ಯೋತಿ ಯೋಜನೆ ಎಲ್ಲಾ ವರ್ಗದ ಜನರಿಗೂ ಅನ್ವಯಿಸಲಿದ್ದು 200 ಯುನಿಟ್ ವರೆಗೆ ವಿದ್ಯುತ್ ಬಳಕೆಗೆ ಶೂನ್ಯ ಬಿಲ್ ನೀಡಲಾಗುತ್ತದೆ. ಇದನ್ನು ಅವರು ವರ್ಷದಲ್ಲಿ (4ನೇ ಪುಟಕ್ಕೆ)



### ಶೇ.10ರಷ್ಟು ವಿದ್ಯುತ್ ಬೇಡಿಕೆ ಹೆಚ್ಚಳ

#### ಉತ್ತರ ಪ್ರದೇಶ, ಪಂಜಾಬ್‌ನಿಂದ ವಿದ್ಯುತ್ ಖರೀದಿ

ದಾವಣಗೆರೆ, ಫೆ. 18- ಕಳೆದ ವರ್ಷ ಬರಗಾಲ ಇದ್ದ ಕಾರಣ ರಾಜ್ಯದಲ್ಲಿ ಒಂದು ತಿಂಗಳು ವಿದ್ಯುತ್ ಕೊರತೆಯಾಗಿತ್ತು. ಉಳಿದ 11 ತಿಂಗಳು ಸಮರ್ಪಕವಾಗಿ ವಿದ್ಯುತ್ ಪೂರೈಸಲಾಗಿದೆ. ರಾಜ್ಯದಲ್ಲಿ ಈ ವರ್ಷ ಶೇ.10ರಷ್ಟು ಬೇಡಿಕೆ ಹೆಚ್ಚಾಗಿದೆ. ವಿದ್ಯುತ್ ಸಮಸ್ಯೆ ಇರುವುದಿಲ್ಲ ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ಹೇಳಿದರು.

ರಾಜ್ಯದಲ್ಲಿ ಪ್ರಸಕ್ತ ವರ್ಷ ಬೇಡಿಕೆಗೆ ತಕ್ಕಷ್ಟು ವಿದ್ಯುತ್ ಪೂರೈಸಲು ಇಲಾಖೆ ಸನ್ನದ್ಧವಾಗಿದೆ. ವಿದ್ಯುತ್ ಕೊರತೆ ನೀಗಿಸಲು ಉತ್ತರಪ್ರದೇಶ ಹಾಗೂ ಪಂಜಾಬ್‌ಗಳಿಂದ ವಿನಿಮಯ ಯೋಜನೆಯಡಿ 19,500 ಮೆಗಾ ವ್ಯಾಟ್ ವಿದ್ಯುತ್ ಖರೀದಿಸಲಾಗುತ್ತಿದೆ ಎಂದರು.

ವಿದ್ಯುತ್ ಪಡೆದ ರಾಜ್ಯಗಳಿಗೆ ಜೂನ್ ಬಳಿಕ ಮರಳಿ ನೀಡಲಾಗುತ್ತದೆ. ಈ ಕುರಿತು ಹಲವು ಸುತ್ತಿನ ಚರ್ಚೆಗಳು ನಡೆದಿವೆ ಎಂದು ಮಾಹಿತಿ ನೀಡಿದರು. ವಿದ್ಯುತ್ ದರ ಏರಿಕೆಗೆ ಸಂಬಂಧಿಸಿ ದಂತೆ ಎಲ್ಲ 'ಎಸ್ಕಾಂ'ಗಳು ಪ್ರತಿ ವರ್ಷ ಪ್ರಸ್ತಾವ ಸಲ್ಲಿಕೆ ಮಾಡುತ್ತವೆ. ಕೆಇಆರ್‌ಸಿ ಸಾರ್ವಜನಿಕ ಅಹವಾಲು ಆಲಿಸಿ ನಿರ್ಧಾರ ಕೈಗೊಳ್ಳುತ್ತದೆ. ಕಳೆದ ವರ್ಷ ವಿದ್ಯುತ್ ದರ ಏರಿಕೆ ಮಾಡಿಲ್ಲ. ಕೆಇಆರ್‌ಸಿ ಸೂಚನೆ ಮೇರೆಗೆ ಸರ್ಕಾರದ ನಿರ್ಧಾರ ಹೊರಬೀಳಲಿದೆ' ಎಂದು ಹೇಳಿದರು.

ಉತ್ತಮ ಮಳೆಯಾಗಿರುವುದರಿಂದ ರೈತರು ಎರಡು, ಮೂರು ಬೆಳೆ (4ನೇ ಪುಟಕ್ಕೆ)

### 3 ಸಾವಿರ ಲೈನ್‌ಮನ್ ನೇಮಕಾತಿ

**ದಾವಣಗೆರೆ, ಫೆ. 18- ರಾಜ್ಯದಲ್ಲಿ ಖಾಲಿ ಇರುವ 3,000 ಸಾವಿರ ಲೈನ್‌ಮನ್ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಏಪ್ರಿಲ್ ಅಂತ್ಯದೊಳಗಾಗಿ ಪೂರ್ಣಗೊಳ್ಳಲಿದೆ ಎಂದು ಇಂಧನ ಸಚಿವ ಕೆ.ಜೆ ಜಾರ್ಜ್ ಹೇಳಿದರು.**

**ಇಲ್ಲಿನ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಮಂಗಳವಾರ ಪ್ರಗತಿ ಪರಿಶೀಲನೆ ಸಭೆ ನಡೆಸಿ ನಂತರ ಅವರು ಪತ್ರಕರ್ತರೊಂದಿಗೆ ಮಾತನಾಡಿದರು.**

**3 ಸಾವಿರ ಲೈನ್‌ಮನ್ ಹುದ್ದೆಗಳಿಗೆ 3 ಲಕ್ಷ ಅರ್ಜಿಗಳು ಬಂದಿವೆ. ಇವುಗಳಲ್ಲಿ 1 ಲಕ್ಷ ಅರ್ಹ ಅರ್ಜಿಗಳನ್ನು ಪರಿಗಣಿಸಲಾಗಿದೆ. ಅರ್ಜಿದಾರರ ಮೆರಿಟ್ ಮತ್ತು ದೈಹಿಕ ಪರೀಕ್ಷೆಗಳ ಮೇಲೆ ಪಾರದರ್ಶಕವಾಗಿ ನೇಮಕ ಮಾಡಿಕೊಳ್ಳಲಾಗುತ್ತದೆ ಎಂದರು.**

**ಮಧ್ಯವರ್ತಿಗಳು ಕೆಲಸ ಕೊಡಿಸುವುದಾಗಿ ಹಣ ಕೇಳಿದರೆ ಯಾವ ಕಾರಣಕ್ಕೂ ನೀಡಬಾರದು. ಇಲ್ಲಿ ಅರ್ಹತೆ ಇದ್ದವರಿಗೆ ಕೆಲಸ ತಾನಾಗಿಯೇ ಸಿಗುತ್ತದೆ. ಯಾರಾದರೂ ಹಣ ಕೇಳಿದರೆ ಸಂಬಂಧಿಸಿದ ಅಧಿಕಾರಿಗಳಿಗೆ ದೂರು ನೀಡಿದರೆ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.**

## ನಾಟಿಗೆ ನೀರು ಕೊಡಿ, ಆಗದಿದ್ದರೆ ಪರಿಹಾರ ಕೊಡಿಸಿ



### ಭದ್ರಾ ಅಧೀಕ್ಷಕ ಇಂಜಿನಿಯರ್‌ಗೆ ಕೊನೆ ಭಾಗದ ರೈತರ ಆಗ್ರಹ

ಮಲೇಬೆನ್ನೂರು, ಫೆ. 18- ಭದ್ರಾ ಜಲಾಶಯದಿಂದ ನಾಲೆಗಳಿಗೆ ನೀರು ಬಿಟ್ಟು 40 ದಿನಗಳು ಕಳೆದರೂ ಅಚ್ಚುಕಟ್ಟಿನ ಕೊನೆ ಭಾಗಕ್ಕೆ ಇದುವರೆಗೂ ಸಮರ್ಪಕವಾಗಿ ನೀರು ಹರಿದು ಬಂದಿಲ್ಲ. ನಾಟಿ ಮಾಡಲು ಭತ್ತದ ಸಸಿ ಮಡಿ ಬೆಳೆಸಿದ್ದೇವೆ. 3-4 ದಿನದೊಳಗೆ ನಾಟಿ ಮಾಡಲು ನೀರು ಕೊಡಿ, ಆಗದಿದ್ದರೆ ಪರಿಹಾರ ಕೊಡಿ ಎಂದು ಹೊಳೆಸಿರಿಗೆರೆ, ಕಮಲಾಪುರ, ಕೆ.ಎನ್. ಹಳ್ಳಿ, ಭಾನುವಳ್ಳಿ, ನಂದಿತಾವರೆ, ಕುಣೆಬೆಳಕೆರೆ ರೈತರು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡ ಘಟನೆ ಮಂಗಳವಾರ ಮಲೇಬೆನ್ನೂರಿನ ನೀರಾವರಿ ಕಚೇರಿ ಬಳಿ ನಡೆಯಿತು.

ನೀರು ತಲುಪದ ಕಾರಣ ಕೊನೆ ಭಾಗದ ರೈತರು ಇನ್ನೂ ನಾಟಿ ಮಾಡಿಲ್ಲ ಎಂಬ ಕೂಗು ಕೇಳಿ ಬಂದ ಹಿನ್ನೆಲೆಯಲ್ಲಿ ಭದ್ರಾ ಅಧೀಕ್ಷಕ ಇಂಜಿನಿಯರ್ ರವಿಚಂದ್ರನ್ ಅವರು ಇಲ್ಲಿನ ನೀರಾವರಿ ಕಚೇರಿಗೆ ಆಗಮಿಸಿ ರೈತರೊಂದಿಗೆ ಸಭೆ ನಡೆಸಿದರು.

ಈ ವೇಳೆ ಮಾತನಾಡಿದ ಹೊಳೆ ಸಿರಿಗೆರೆಯ ರುದ್ರಪ್ಪ ಅವರು, ಅಕ್ರಮ ಪಂಪ್‌ಸೆಟ್‌ಗಳ ತೆರವಿಗೆ ಹೈಕೋರ್ಟ್ ಆದೇಶವಿದ್ದರೂ ನೀವು ಅವುಗಳ ತೆರವಿಗೆ ಯಾಕೆ ಕ್ರಮ ಕೈಗೊಂಡಿಲ್ಲ ಎಂದು ಪ್ರಶ್ನಿಸಿದರು.

ಅಕ್ರಮ ಪಂಪ್‌ಸೆಟ್‌ಗಳ ತೆರವಿಗೆ ಜಿಲ್ಲಾಧಿಕಾರಿಗಳು ರಚಿಸಿರುವ ಟಾಸ್ಕ್‌ಫೋರ್ಸ್ ತಂಡ ಕೆಲಸ ಮಾಡುತ್ತಿಲ್ಲ. ಹಾಗಾಗಿ ಕೊನೆ ಭಾಗಕ್ಕೆ ನೀರು ಬರುತ್ತಿಲ್ಲ ಎಂದರು.

ರೈತ ಸಂಘದ ಸಿರಿಗೆರೆ ಪಾಲಾಕ್ಷಪ್ಪ ಮಾತನಾಡಿ, ಕೊನೆ ಭಾಗಕ್ಕೆ ನೀರು ಹರಿಸದಿದ್ದರೆ ಸರ್ಕಾರಕ್ಕೆ ಪತ್ರ ಚಳುವಳಿ ನಡೆಸುವುದಾಗಿ ಎಚ್ಚರಿಸಿದರು.

ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್ ಮಾತನಾಡಿ, ಕಾನೂನು, ಪುಸ್ತಕದಲ್ಲಿ (4ನೇ ಪುಟಕ್ಕೆ)

## ಜಾತಿ ಗಣತಿ ವರದಿ ಅನುಷ್ಠಾನ ಶತಸಿದ್ಧ

### ಹಿಂದುಳಿದ ವರ್ಗಗಳ ಮುಖಂಡರ ಜೊತೆ ಸಿಎಂ ಬಜೆಟ್ ಪೂರ್ವ ಸಭೆ

ಬೆಂಗಳೂರು, ಫೆ.18- ಜಾತಿ ಗಣತಿ ವರದಿಯು ವೈಜ್ಞಾನಿಕವಾಗಿ ನಡೆದಿದ್ದು ಅದನ್ನು ನಮ್ಮ ಸರ್ಕಾರ ಖಂಡಿತವಾಗಿಯೂ ಜಾರಿಗೊಳಿಸುತ್ತದೆ. ಇದರಲ್ಲಿ ಯಾವುದೇ ಸಂಶಯ ಬೇಡ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಹಿಂದುಳಿದ ವರ್ಗಗಳ ಮುಖಂಡರು ಹಾಗೂ ಹಿಂದುಳಿದ ವರ್ಗಗಳ ಸಂಘ-ಸಂಸ್ಥೆಗಳ ಪ್ರತಿನಿಧಿಗಳೊಂದಿಗೆ ವಿಧಾನಸೌಧದಲ್ಲಿ ಇಂದು ನಡೆದ ಬಜೆಟ್ ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು.



ಜಾತಿ ಗಣತಿ ಅನುಷ್ಠಾನಕ್ಕೆ ಸಭೆಯಲ್ಲಿ ಒಕ್ಕೊರಲಿನಿಂದ ಒತ್ತಾಯ ಬಂದ ಸಂದರ್ಭದಲ್ಲಿ ಅದಕ್ಕೆ ಮುಖ್ಯಮಂತ್ರಿಗಳು ಪ್ರತಿಕ್ರಿಯೆ ನೀಡಿದರು.

ಸರ್ಕಾರ ಜಾತಿ ಗಣತಿ ಪರವಾಗಿದೆ. ನಮ್ಮ ಸರ್ಕಾರ ಜಾತಿ ಗಣತಿ ವರದಿಯನ್ನು ಸ್ವೀಕರಿಸಿದೆ. ಮುಂದಿನ ದಿನಗಳಲ್ಲಿ ಅದನ್ನು ಖಂಡಿತವಾಗಿಯೂ ಜಾರಿ ಮಾಡಲಾಗುತ್ತದೆ ಅದರ ಬಗ್ಗೆ ಅನುಮಾನ ಬೇಡ ಎಂದು ತಿಳಿಸಿದರು.

ತಮಿಳುನಾಡು ಮಾದರಿಯಲ್ಲಿ ಮೀಸಲಾತಿ ಹೆಚ್ಚಳಕ್ಕೆ ಸಭೆ (4ನೇ ಪುಟಕ್ಕೆ)

## ರಂಜಾನ್ ಅವಧಿಯಲ್ಲಿ ಮುಸ್ಲಿಂ ನೌಕರರಿಗೆ ಒಂದು ಗಂಟೆಯ ಬಿಡುವು

ಹೈದರಾಬಾದ್, ಫೆ. 18 - ರಂಜಾನ್ ಅವಧಿಯಲ್ಲಿ ಮುಸ್ಲಿಂ ಉದ್ಯೋಗಿಗಳಿಗೆ ಸಂಜೆ ಒಂದು ಗಂಟೆ ಮುಂಚೆ ಕಚೇರಿ ಬಿಡಲು ಅವಕಾಶ ನೀಡುವಂತೆ ತೆಲಂಗಾಣ ಸರ್ಕಾರ ಸುತ್ತೋಲೆ ಹೊರಡಿಸಿದೆ.

ಮುಸ್ಲಿಂ ಉದ್ಯೋಗಿಗಳು ರಂಜಾನ್ ಅವಧಿಯಾದ ಮಾರ್ಚ್ 3 ರಿಂದ 31ರ ನಡುವೆ ಸಂಜೆ 4 ಗಂಟೆಗೆ ಮನೆಗೆ ತೆರಳಬಹು ದು ಎಂದು ಸರ್ಕಾರ ಅನುಮತಿ ನೀಡಿದೆ.

ಸರ್ಕಾರದ ನಿರ್ಧಾರವನ್ನು ತರಾಟೆಗೆ ತೆಗೆದುಕೊಂಡಿರುವ ಬಿಜೆಪಿ ಶಾಸಕ ರಾಜಾ ಸಿಂಗ್, ಇದು ಮುಸ್ಲಿಮರ ಓಲೈಕೆಯ ಪರಮಾವಧಿ ಎಂದಿದ್ದಾರೆ. ಆದರೆ ಸರ್ಕಾರದ ಕ್ರಮವನ್ನು ಸಮರ್ಥಿಸಿಕೊಂಡಿರುವ ಅಲ್ಪಸಂಖ್ಯಾತರ ವ್ಯವಹಾರಗಳ ಸಚಿವ ಮೊಹಮ್ಮದ್ ಅಲಿ ಶಬ್ಬೀರ್, ಸರ್ಕಾರದ ನಿರ್ಧಾರದಲ್ಲಿ ಹೊಸದೇನು ಇಲ್ಲ ಎಂದಿದ್ದಾರೆ.

ಈ ಹಿಂದೆ ಬಿಆರ್‌ಎಸ್ ಸರ್ಕಾರದ ಆಡಳಿತ ಇದ್ದಾಗ ಇದೇ ರೀತಿಯ ಸೌಲಭ್ಯ ನೀಡಲಾಗಿತ್ತು. ಹಲವು ಬಿಜೆಪಿ ಸರ್ಕಾರ ಗಳೂ ಸಹ ಇದೇ ರೀತಿಯ ಕ್ರಮ ತೆಗೆದು ಕೊಂಡಿವೆ ಎಂದು ಹೇಳಿದ್ದಾರೆ. ಗಣೇಶ ಚತುರ್ಥಿ ಹಾಗೂ ಬೋನಲು ಹಬ್ಬದ ಸಂದರ್ಭ ದಲ್ಲಿ ಇದೇ ರೀತಿಯ ವ್ಯವಸ್ಥೆ ಇದೆ. ಹಬ್ಬದ ಸಂದರ್ಭದಲ್ಲಿ ನಾಗರಿಕರಿಗೆ ನೆರವಾಗುವುದು ಸರ್ಕಾರದ ಕರ್ತವ್ಯ ಎಂದವರು ಹೇಳಿದ್ದಾರೆ.

## ಅನ್ನಭಾಗ್ಯ, ಗೃಹಲಕ್ಷ್ಮಿ ಬಾಕಿ ಹಣ ಈ ತಿಂಗಳಲ್ಲೇ ಬಿಡುಗಡೆ: ಡಿಕೆಶಿ

**ಸರ್ಕಾರದ ಬೊಕ್ಕಸ ಖಾಲಿಯಾಗಿದೆ ಎಂಬ ವಿರೋಧ ಪಕ್ಷಗಳ ಆರೋಪ ಸುಳ್ಳು: ಡಿಕೆಶಿ**

ಬೆಂಗಳೂರು,ಫೆ.18- ಅನ್ನಭಾಗ್ಯ ಹಾಗೂ ಗೃಹಲಕ್ಷ್ಮಿ ಫಲಾನುಭವಿಗಳಿಗೆ ನೀಡಲು ಹಣದ ಕೊರತೆ ಇಲ್ಲ, ಎರಡು, ಮೂರು ತಿಂಗಳ ಬಾಕಿ ಫೆಬ್ರವರಿಯಲ್ಲಿ ಬಿಡುಗಡೆಯಾಗಲಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂದಿಲ್ಲಿ ತಿಳಿಸಿದ್ದಾರೆ. ಅನ್ನಭಾಗ್ಯ ಹಾಗೂ ಗೃಹಲಕ್ಷ್ಮಿ ಫಲಾನುಭವಿಗಳಿಗೆ ನೀಡಲು ಸರ್ಕಾರದ ಬಳಿ ಹಣವಿಲ್ಲ, ಬೊಕ್ಕಸ ಖಾಲಿಯಾಗಿದೆ ಎಂಬ ವಿರೋಧ ಪಕ್ಷಗಳ ಆರೋಪ ಸುಳ್ಳು.

ಸರ್ಕಾರದ ಸಂಪನ್ಮೂಲ ಒಂದೇ ದಿನಕ್ಕೆ ಕ್ರೋಢೀಕರಣ ಆಗುವುದಿಲ್ಲ, ಹಂತ ಹಂತವಾಗಿ ಸಂಗ್ರಹವಾಗುತ್ತದೆ, ಆರ್ಥಿಕ ವರ್ಷಾಂತ್ಯದ ವೇಳೆಗೆ ಎಲ್ಲವೂ ಸರಿಯಾಗಲಿದೆ ಎಂದರು. ರಾಜಾಸ್ತಾನ ಪ್ರವಾಸಕ್ಕೆ ಮುನ್ನ (4ನೇ ಪುಟಕ್ಕೆ)

## ಬಿಜೆಪಿ ಅಧಿಕಾರಕ್ಕಾಗಿ ಬಿವೈವಿ ಬದಲಿಸಿ

### ವರಿಷ್ಠರ ನೋಟಿಸ್‌ಗೆ ಉತ್ತರ ನೀಡಿದ ಯತ್ನಾಳ್



ಬೆಂಗಳೂರು,ಫೆ.18- ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರನ್ನು ಬದಲಾವಣೆ ಮಾಡಿ ಹೊಸಬರಿಗೆ ಅವಕಾಶ ಮಾಡಿ ಎಂದು ಪಕ್ಷದ ಹಿರಿಯ ನಾಯಕ ಹಾಗೂ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಬಿಜೆಪಿ ವರಿಷ್ಠರಲ್ಲಿ ಮನವಿ ಮಾಡಿದ್ದಾರೆ.

ಕಾಂಗ್ರೆಸ್ ಆಡಳಿತ ತೊಲಗಿಸಿ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಪಕ್ಷವನ್ನು ಅಧಿಕಾರಕ್ಕೆ ತರಲು ತಕ್ಷಣವೇ ರಾಜ್ಯ ನಾಯಕತ್ವದ ಬದಲಾವಣೆ ಮಾಡಿ ವಂಶಾಡಳಿತ ಕೊನೆಗೊಳಿಸಿ ಎಂದಿದ್ದಾರೆ.

ಪಕ್ಷದ ನಾಯಕತ್ವ ವಿರುದ್ಧ ಹೇಳಿಕೆ ನೀಡಿದ ಸಂಬಂಧ ಬಿಜೆಪಿಯ ಕೇಂದ್ರ ಶಿಸ್ತು ಸಮಿತಿ ನೀಡಿದ ನೋಟಿಸ್‌ಗೆ ಐದು ಪುಟಗಳ ಉತ್ತರ ನೀಡಿ, ಅದರಲ್ಲಿ ನಾಯಕತ್ವ ಬದಲಿಸಿ, ಸಮರ್ಥ ನಾಯಕನನ್ನು ಅಧ್ಯಕ್ಷ ಸ್ಥಾನದಲ್ಲಿ ಕೂರಿಸಿ ಎಂದಿದ್ದಾರೆ.

ನಾನು ಯಾವುದೇ ಬಣ ರಾಜಕೀಯ ಮಾಡಿಲ್ಲ, ಪಕ್ಷದ ಚೌಕಟ್ಟಿನಲ್ಲಿ ಹೋರಾಟ ಮಾಡಿದ್ದೇನೆ, ಕಾಂಗ್ರೆಸ್ ಮುಖಂಡರ ಜೊತೆ ಕೈಜೋಡಿಸಿರುವ ಪಕ್ಷದ ನಾಯಕರ ಬಣ್ಣ ಬಯಲು ಮಾಡಿದ್ದೇನೆ, ಇದು ತಪ್ಪೇ ? ಎಂದು ಪ್ರಶ್ನಿಸಿದ್ದಾರೆ. ರಾಜ್ಯಾಧ್ಯಕ್ಷ ವಿಜಯೇಂದ್ರ ಅವರು ಸ್ವಜನ ಪಕ್ಷಪಾತ ಮಾಡುತ್ತಿದ್ದಾರೆ, ಹಿರಿಯರನ್ನು, ಕಾರ್ಯ ಕರ್ತರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದ್ದರಿಂದ ಪಕ್ಷಕ್ಕೆ ವಿಧಾನಸಭಾ ಉಪಚುನಾವಣೆಯಲ್ಲಿ ಭಾರೀ ಹಿನ್ನಡೆಯಾಗಿದೆ.

ಕರ್ನಾಟಕದಲ್ಲಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಭ್ರಷ್ಟಾಚಾರ ದಲ್ಲಿ ಮುಳುಗಿದೆ, ಅಭಿವೃದ್ಧಿ ಕೆಲಸಗಳನ್ನು ಮಾಡುತ್ತಿಲ್ಲ, ಮುಖ್ಯಮಂತ್ರಿ ಯವರೇ ಹಲವು ಹಗರಣಗಳಲ್ಲಿ ಸಿಲುಕಿದ್ದಾರೆ.

ರೈತರು, ಗುತ್ತಿಗೆದಾರರು, ಅಧಿಕಾರಿಗಳ ಸರಣಿ ಆತ್ಮಹತ್ಯೆ ನಡೆಯುತ್ತಿದೆ, ಇಷ್ಟಾದರೂ ವಿಜಯೇಂದ್ರ ಸರ್ಕಾರದ ವಿರುದ್ಧ ಹೋರಾಟ ನಡೆಸದೇ (4ನೇ ಪುಟಕ್ಕೆ)

## ಮಹಿಳಾ ಕಾರ್ಮಿಕರಿಗೆ ವಿಮಾನಯಾನ

### ಜಮೀನಿನಲ್ಲಿ ಕೆಲಸ ಮಾಡುವವರಿಗೆ ವಿಮಾನಯಾನ ಉಡುಗೊರೆ ನೀಡಿದ ರೈತ

ಹರಪನಹಳ್ಳಿ, ಫೆ.18- ರೈತರೊಬ್ಬರು ತಮ್ಮ ಜಮೀನಿನಲ್ಲಿ ಕೆಲಸ ಮಾಡುವ ಮಹಿಳಾ ಕಾರ್ಮಿಕರಿಗೆ ವಿಮಾನಯಾನ ಮಾಡಿಸಿದ್ದಾರೆ. ಶಿವಮೊಗ್ಗ ಏರ್‌ಪೋರ್ಟ್ ನಿಂದ ಗೋವಾಕ್ಕೆ ವಿಮಾನ ಪ್ರಯಾಣದ ಉಡುಗೊರೆ ನೀಡಿದ್ದಾರೆ.



ವಿಜಯನಗರ ಜಿಲ್ಲೆ ಹರಪನಹಳ್ಳಿ ತಾಲ್ಲೂಕಿನ ಶಿರಗನಹಳ್ಳಿ ವಿಶ್ವನಾಥ್ ಮೂಲತಃ ಪೊಲೀಸ್ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದು ಇತ್ತೀಚಿಗೆ ಪೊಲೀಸ್ ಕೆಲಸಕ್ಕೆ ರಾಜನಾಮೇ ನೀಡಿ ಕೃಷಿಯಲ್ಲಿ ತೊಡಗಿಕೊಂಡಿದ್ದರು. ತಮ್ಮ ಜಮೀನಿಗೆ ಖಾಯಂ ಆಗಿ ಕೂಲಿ ಕೆಲಸಕ್ಕೆ ಬರುತ್ತಿದ್ದ ಮಹಿಳಾ ಕಾರ್ಮಿಕರಿಗೆ ಏನಾದರೂ ಉಡುಗೊರೆ ಕೊಡಬೇಕು ಎಂದುಕೊಂಡಿದ್ದರು. ಅದರಂತೆ ಎಂದೂ ವಿಮಾನ ಹತ್ತದ ಮಹಿಳಾ ಕಾರ್ಮಿಕರಿಗೆ ವಿಮಾನಯಾನ ಮಾಡಿಸಿದ್ದಾರೆ. ವಿಶ್ವನಾಥ್, ತಮ್ಮ ಜಮೀನಿನಲ್ಲಿ ಕೆಲಸಕ್ಕೆ ಬರುತ್ತಿದ್ದ 10 ಮಹಿಳಾ ಕಾರ್ಮಿಕರಿಗೆ ಹಾಗೂ ತಮ್ಮನ್ನು ಸೇರಿದಂತೆ 11 ಜನರಿಗೆ ವಿಮಾನದಲ್ಲಿ ಗೋವಾಗೆ ಹೋಗಲು ಟಿಕೆಟ್ ಬುಕ್ಕಿಂಗ್ ಮಾಡಿದ್ದಾರೆ. ನಂತರ, ಎಲ್ಲ (2ನೇ ಪುಟಕ್ಕೆ)

## ಎಂಸಿಸಿ 'ಬಿ' ಬ್ಲಾಕ್‌ನಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ

ದಾವಣಗೆರೆ, ಫೆ. 18 - ಬೆಂಗಳೂರು ಸೇರಿದಂತೆ ದೊಡ್ಡ, ದೊಡ್ಡ ಮಹಾನಗರಗಳ ಹೃದಯ ಭಾಗದಲ್ಲಿನ ಪ್ರದೇಶದ ಅಭಿವೃದ್ಧಿಯಂತೆ ದಾವಣಗೆರೆ ಮಹಾನಗರ ಪಾಲಿಕೆಯ 38ನೇ ವಾರ್ಡ್ ಎಂಸಿಸಿ 'ಬಿ' ಬ್ಲಾಕ್ ಅಭಿವೃದ್ಧಿಪಡಿಸ ಲಾಗಿದೆ. ಇದೊಂದು ಅತ್ಯುತ್ತಮ ಕಾರ್ಯ ಎಂದು ಮಹಾನಗರ ಪಾಲಿಕೆ ಮೇಯರ್ ಕೆ. ಚಮನ್ ಸಾಬ್ ಬಣ್ಣಿಸಿದರು.



ಎಂಸಿಸಿ 'ಬಿ' ಬ್ಲಾಕ್‌ನಲ್ಲಿ ಇಂದು ಬೆಳಿಗ್ಗೆ ವಿವಿಧ ಕಾಮಗಾರಿಗಳಿಗೆ ಗುದ್ದಲಿ ಪೂಜೆ ನೆರವೇರಿಸಿದ ಬಳಿಕ ಮಾತನಾಡಿದ ಅವರು, ಈ ವಾರ್ಡ್‌ನಲ್ಲಿ ಆದಷ್ಟು ಅಭಿವೃದ್ಧಿ ಕಾರ್ಯಗಳು ಬೇರೆ ಕಡೆ ಆಗಿಲ್ಲ ಎಂದೆನಿಸುತ್ತದೆ ಎಂದು ಹೇಳಿದರು.

**'ಮನೆ ಬಾಗಿಲಿಗೆ ನಿಮ್ಮ ಸೇವಕ' ಅಭಿಯಾನ ಶ್ಲಾಘನೀಯ**
**- ಕೆ. ಚಮನ್ ಸಾಬ್, ಮೇಯರ್**

ಈ ವಾರ್ಡ್ ಪಾಲಿಕೆ ಸದಸ್ಯ ಜಿ.ಎಸ್. ಮಂಜುನಾಥ್ ಗಡಿಗುಡಾಳ್ ಅವರು ಶಕ್ತಿಮೀರಿ ಅನುದಾನ ತಂದು ವಿವಿಧ ಅಭಿವೃದ್ಧಿ ಕಾಮಗಾರಿ ಗಳನ್ನು ನಡೆಸಿದ್ದಾರೆ. ಮನೆ ಬಾಗಿಲಿಗೆ ನಿಮ್ಮ ಸೇವಕ ಅಭಿಯಾನ ನಡೆಸಿರುವುದು ಶ್ಲಾಘನೀಯ. ಜನರ ಸಮಸ್ಯೆಗಳಿಗೆ ಸ್ಪಂದಿಸಿ ಈಡೇರಿಸುವ ಪ್ರಾಮಾಣಿಕ ಪ್ರಯತ್ನ ನಡೆಸಿದ್ದಾರೆ ಎಂದು ಚಮನ್ ಸಾಬ್ ಹೇಳಿದರು.

ಪಾಲಿಕೆ ಸದಸ್ಯ ಜಿ. ಎಸ್. ಮಂಜುನಾಥ್ ಗಡಿಗುಡಾಳ್ ಮಾತನಾಡಿ, ವಾರ್ಡ್‌ನಲ್ಲಿ (2ನೇ ಪುಟಕ್ಕೆ)

# ಕಳಪೆ ಆಹಾರ ಉತ್ಪಾದನಾ ಅಂಗಡಿ ಮಾಲೀಕರಿಗೆ ನೋಟಿಸ್ ಜಾರಿ

ಹರಿಹರ, ಫೆ. 18- ಜಿಲ್ಲಾ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆ ಅಧಿಕಾರಿಗಳು, ನಗರಸಭೆಯ ಆರೋಗ್ಯ ನಿರೀಕ್ಷಕರು ಮಂಗಳವಾರ ನಗರದ ಹೋಟೆಲ್ ಮತ್ತು ಬೇಕರಿ, ಫುಟ್‌ಪಾತ್‌ನಲ್ಲಿ ವ್ಯವಹರಿಸುತ್ತಿದ್ದ ಎಗ್‌ರೈಸ್ ಗೂಡಂಗಡಿಗಳ ಮೇಲೆ ದಿಢೀರ್ ದಾಳಿ ನಡೆಸಿ, ಕಳಪೆ ಗುಣಮಟ್ಟದ ಆಹಾರ ಉತ್ಪಾದಿಸಿ ಗ್ರಾಹಕರಿಗೆ ವಿತರಿಸುತ್ತಿದ್ದ ಅಂಗಡಿಗಳ ಮಾಲೀಕರಿಗೆ ನೋಟಿಸ್ ಜಾರಿ ಮಾಡಿದರು.

ಸರ್ಕಾರದ ಮಾರ್ಗಸೂಚಿ ಅನ್ವಯ ಕಡ್ಡಾಯವಾಗಿ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆ ಹಾಗೂ ನಗರಸಭೆ ನೀಡುವ ಅಧಿಕೃತ ಪರವಾನಗಿ ಪತ್ರ ಪಡೆಯದೇ ಹೋಟೆಲ್, ಬೇಕರಿ ಮತ್ತಿತರೆ ಆಹಾರೋತ್ಪಾದನಾ ಘಟಕಗಳನ್ನು ಪ್ರಾರಂಭಿಸುವುದು ಅಪರಾಧವಾಗಿರುತ್ತದೆ ಎಂದು ತಿಳಿಸಿದರು.

ನಗರದ ಬಿರೂರು-ಸಮ್ಮಸಗಿ ರಾಜ್ಯ ಹೆದ್ದಾರಿಯ ಪಕ್ಕದಲ್ಲಿನ ತುಳಜಾ ಭವಾನಿ



ಸಾವಜಿ ಹೋಟೆಲ್, ಸರೋವರ ಫ್ಯಾಮಿಲಿ ರೆಸ್ಟೋರೆಂಟ್, ಕೇಕ್ ಪ್ಯಾಲೇಸ್ ಬೇಕರಿ, ಜಯಶ್ರೀ ಚಿತ್ರ ಮಂದಿರದ ಎದುರಿನ ಫುಟ್‌ಪಾತ್‌ನಲ್ಲಿನ 3 ಎಗ್‌ರೈಸ್ ಗೂಡಂಗಡಿ, ಪಾನಿಪೂರಿ, ಕಬ್ಬಿನ ಹಾಲು ಮಾರುವ ಅಂಗಡಿಗಳ ಮೇಲೆ ದಾಳಿ ನಡೆಸಿದ ಅಧಿಕಾರಿಗಳು ಅಲ್ಲಿ ತಯಾರಿಸುವ ಎಗ್‌ರೈಸ್, ಪಾನಿಪೂರಿ, ಗೋಬಿ ಮಂಚೂರಿಗಳ ಗುಣಮಟ್ಟ ಪರಿಶೀಲಿಸಿದರು.

**ಹರಿಹರ**

ತುಳಜಾ ಭವಾನಿ ಸಾವಜಿ ಹೋಟೆಲ್, ಸರೋವರ ಫ್ಯಾಮಿಲಿ ರೆಸ್ಟೋರೆಂಟ್, ಕೇಕ್ ಪ್ಯಾಲೇಸ್ ಬೇಕರಿ ಆಹಾರ ಉತ್ಪಾದನೆಗಾಗಿ ಬಳಸುತ್ತಿದ್ದ ಮಸಾಲ ಪದಾರ್ಥಗಳನ್ನು, ಚಿಕನ್, ಎಗ್, ಫಿಷ್‌ಗಳನ್ನು ಪರಿಶೀಲಿಸಿ. ಆಹಾರ ತಯಾರಿಸಲು ಬಳಸುವ ಕಚ್ಚಾ ಪದಾರ್ಥಗಳ ಪಾಕೆಟ್‌ಗಳ ಮೇಲೆ ಅವಧಿ ಮುಗಿದ ದಿನದ ಕಚ್ಚಾ ಪದಾರ್ಥಗಳನ್ನು ಕಂಡು ಬಂದ ಕಾರಣ ಹೋಟೆಲ್ ಮಾಲಿಕರಿಗೆ 7 ದಿನದೊಳಗಾಗಿ ಉತ್ತರಿಸಲು ಅಧಿಕಾರಿಗಳು ನೋಟಿಸ್ ನೀಡಿದರು.

ಆಹಾರ ಸುರಕ್ಷತೆ ಅಧಿಕಾರಿ ನವೀನ್‌ಕುಮಾರ್ ಆರ್, ನಗರಸಭೆಯ ಹಿರಿಯ ಆರೋಗ್ಯ ನಿರೀಕ್ಷಕ ರವಿಪ್ರಕಾಶ್ ಮಾತನಾಡಿ, ಈಗ ಬೇಸಿಗೆ ಕಾಲ ಆರಂಭಗೊಳ್ಳುತ್ತಿದ್ದು, ಗ್ರಾಹಕರಿಗೆ ಶುದ್ಧೀಕರಿಸಿದ ನೀರನ್ನು ವಿತರಿಸಬೇಕು. ಹೋಟೆಲ್, ಬೇಕರಿ ಮತ್ತಿತರೆ ಉದ್ಯಮಗಳ ಮಾಲೀಕರು ತಮ್ಮಲ್ಲಿ ಕೆಲಸ ನಿರ್ವಹಿಸುವ ಕಾರ್ಮಿಕರುಗಳಿಗೆ ವೈದ್ಯಕೀಯ ತಪಾಸಣೆ, ಆಹಾರೋತ್ಪಾದನೆಯಲ್ಲಿ ಸ್ವಚ್ಛತೆ, ಕಾರ್ಮಿಕರ ವೈಯಕ್ತಿಕ ಸ್ವಚ್ಛತೆಯ ಕಡೆಗೆ ನಿತ್ಯ ಗಮನಿಸಬೇಕು. ಅವಧಿ ಮೀರಿದ ಆಹಾರ ಪದಾರ್ಥಗಳು ಕಂಡು ಬಂದಲ್ಲಿ ಕಾನೂನು ಪ್ರಕಾರ ಕ್ರಮಕೈಗೊಳ್ಳಲಾಗುವುದೆಂದು ಎಚ್ಚರಿಕೆ ನೀಡಿದರು. ನಗರಸಭೆಯ ಸಿಬ್ಬಂದಿಗಳು ಇದ್ದರು.

# ಜೋಳದ ಬೆಳೆ ನೆಲ ಸಮಗೊಳಿಸಿದ ದುಷ್ಕರ್ಮಿಗಳು



ಹರಪನಹಳ್ಳಿ, ಫೆ.18- ತಾಲ್ಲೂಕಿನ ಕುಂಚೂರು ಗ್ರಾಮದ ಬಾಣದ ಬಸವರಾಜ್ ಎಂಬ ರೈತನ ಎರಡೂವರೆ ಎಕರೆ ಭೂಮಿಯಲ್ಲಿ ಒಂದೂವರೆ ಎಕರೆಗೂ ಅಧಿಕ ಊಟದ ಜೋಳದ ಸೊಪ್ಪೆಯನ್ನು ನೆಲಕ್ಕೆ ಉರುಳಿಸಿ ಅಮಾನವೀಯ ಕೃತ್ಯವನ್ನು ದುಷ್ಕರ್ಮಿಗಳು ಎಸಗಿದ್ದಾರೆ.

ಮಳೆಗಾಲದಲ್ಲಿ ಅತಿಯಾದ ಮಳೆಯಿಂದಾಗಿ ಬೆಳೆ ನಾಶವಾದ ಪರಿಣಾಮ ಇರುವ ಸ್ವಲ್ಪ ನೀರಾವರಿ ಭೂಮಿಯಲ್ಲೇ ಜೀವನ ನಿರ್ವಹಣೆಗಾಗಿ ಊಟದ ಜೋಳವನ್ನು ಹಾಕಿದ್ದೆ. ಈ ಬಾರಿಯ ಬೆಳೆಯು ತುಂಬಾ ಹಸನಾಗಿ ಬಂದಿತ್ತು ಎಂದು.

ಇನ್ನು ಒಂದೂವರೆ ತಿಂಗಳಿನಲ್ಲಿ ಕೊಯ್ಲು ಮಾಡುತ್ತಿದ್ದೆ. ಆದರೆ ಕಳೆದ ಎರಡು ದಿನಗಳ ಹಿಂದೆ ರಾತ್ರಿ ವೇಳೆಯಲ್ಲಿ ಯಾರೋ ದುಷ್ಕರ್ಮಿಗಳು ಕೈಗೆ ಬಂದ ಹಸಿ ಜೋಳದ ಸೊಪ್ಪೆಯನ್ನು ಕರುಣೆಯಿಲ್ಲದೆ ಬುಡ ಸಮೇತ ನೆಲಕ್ಕೆ ಉರುಳಿಸಿ ಕೈಗೆ ಬಂದ ತುತ್ತು ಬಾಯಿಗೆ ಸಿಗದಂತೆ ಮಾಡಿದ್ದಾರೆ ಎಂದು ದೂರಿದ್ದಾರೆ.

ನನ್ನ ಅನ್ನವನ್ನು ಕಸಿದ ಕ್ರೂರಿಗಳಿಗೆ ದೇವರು ಅವರಿಗೆ ಎಂದೂ ಒಳ್ಳೆಯದನ್ನು ಮಾಡದಿರಲಿ ಎಂದು ದುಷ್ಕರ್ಮಿಗಳಿಗೆ ಹಿಡಿ ಶಾಪ ಹಾಕುತ್ತಾ, ತನ್ನ ನೋವನ್ನು ತೋಡಿಕೊಂಡು ಸಂಬಂಧಿಸಿದ ಅಧಿಕಾರಿಗಳಿಗೆ ಪರಿಹಾರ ಒದಗಿಸುವಂತೆ ಪತ್ರಿಕಾ ಪ್ರಕಟಣೆಯಲ್ಲಿ ರೈತ ಬಾಣದ ಬಸವರಾಜ್ ತಿಳಿಸಿದ್ದಾರೆ.

# ಅಕ್ರಮ ಬಡಾವಣೆ ತಲೆ ಎತ್ತಿದರೆ ಜಿಲ್ಲಾಧಿಕಾರಿಗಳೇ ಹೊಣೆ

(1ನೇ ಪುಟದಿಂದ) ಮೂಲಕ ಅನಧಿಕೃತ ಬಡಾವಣೆಗಳಿಗೆ ಅಂತ್ಯ ಹಾಡಲಾಗಿದೆ ಎಂಬುದನ್ನು ಅಧಿಕಾರಿಗಳು ಸ್ಪಷ್ಟವಾಗಿ ಅರ್ಥ ಮಾಡಿಕೊಂಡು ಕೆಲಸ ಮಾಡಬೇಕು, ನಿಮಗೆ 3 ತಿಂಗಳು ಮಾತ್ರ ಕಾಲಾವಕಾಶ ಕೊಟ್ಟಿದ್ದು, ಅಷ್ಟರೊಳಗೆ ಅಭಿಯಾನ ಪೂರ್ಣಗೊಳಿಸಬೇಕು, ಇದರಲ್ಲಿ ಯಾವುದೇ ರಾಜಿ ಇಲ್ಲ, ಅಧಿಕಾರಿಗಳು ರಾಜೀ ಮಾಡಿಕೊಂಡರೆ ಸಹಿಸುವುದಿಲ್ಲ. ಅಧಿಕಾರಿಗಳು ಕಾಯ್ದೆಯ ದೂರದೃಷ್ಟಿಯನ್ನು ಸ್ಪಷ್ಟ ಮತ್ತು ಖಚಿತವಾಗಿ ಅರ್ಥ ಮಾಡಿಕೊಳ್ಳಬೇಕು, ರಾಜ್ಯದಲ್ಲಿ ಇನ್ನೆಲ್ಲೂ ಅನಧಿಕೃತ ಬಡಾವಣೆಗಳು, ರೆವಿನ್ಯೂ ಬಡಾವಣೆಗಳು ತಲೆ ಎತ್ತಬಾರದು.

ಅನಧಿಕೃತ ರೆವಿನ್ಯೂ ಬಡಾವಣೆಗಳಲ್ಲಿ ನಿವೇಶನ ಹೊಂದಿರುವವರಿಗೆ, ಮನೆ ಕಟ್ಟಿರುವವರಿಗೆ ತೊಂದರೆ ನೀಡಬಾರದು, ಬಡವರು, ಮಧ್ಯಮ ವರ್ಗದವರಿಗೆ ಅನುಕೂಲ ಮಾಡಿಕೊಡಲು ಒಂದು ಬಾರಿಯ ಪರಿಹಾರಕ್ಕೆ ಮುಂದಾಗಿದ್ದೇವೆ. ಸಂಬಂಧಪಟ್ಟ ಎಲ್ಲಾ ಸಚಿವರೂ ಈ ಕುರಿತು ಸ್ಪಷ್ಟಪಡಿಸಿದ್ದು, ಹೊಸ ಗೊಂದಲಗಳಿಗೆ ಅವಕಾಶ ಮಾಡಿಕೊಡಬಾರದು ಎಂದು ಎಚ್ಚರಿಸಿದರು.

# ಹೊನ್ನಾಳಿ ತಾಲ್ಲೂಕು ಪಂಚಮಸಾಲಿ ನೌಕರ ಸಂಘದ ಅಧ್ಯಕ್ಷರಾಗಿ ಅಶೋಕ ಆಯ್ಕೆ



ಹೊನ್ನಾಳಿ, ಫೆ.18- ತಾಲ್ಲೂಕಿನ ಪಂಚಮಸಾಲಿ ಸಮಾಜದ ನೌಕರರ ಘಟಕದ ಅಧ್ಯಕ್ಷರಾಗಿ ಒಡೆಯರ ಹತ್ತೂರ ಹೆಚ್.ಬಿ. ಅಶೋಕ ಆಯ್ಕೆಯಾಗಿದ್ದಾರೆ.

ಜಿ.ದೊಡ್ಡಪ್ಪ ಇವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಪಟ್ಟಣದ ವೀರಭದ್ರೇಶ್ವರ ದೇವಸ್ಥಾನದಲ್ಲಿ ಪಂಚಮಸಾಲಿ ಸಮಾಜದ ಅಧ್ಯಕ್ಷ ಬೆನಕನಹಳ್ಳಿ ವೀರಣ್ಣ ಇವರ ಅಧ್ಯಕ್ಷತೆಯಲ್ಲಿ ನಡೆದ ಪಂಚಮಸಾಲಿ ಸಮಾಜದ ಹಾಗೂ ನೌಕರರ ಸಂಘದ ಪದಾಧಿಕಾರಿಗಳ ಸಭೆಯಲ್ಲಿ ಆಯ್ಕೆ ಮಾಡಲಾಗಿದೆ.

ಈ ಸಂದರ್ಭದಲ್ಲಿ ಹರಿಹರ ಪೀಠದ ಆಡಳಿತಾಧಿಕಾರಿ ಡಾ.ರಾಜಕುಮಾರ, ಜಿಲ್ಲಾ ನೌಕರರ ಸಂಘದ ಅಧ್ಯಕ್ಷ ಶ್ರೀಧರ, ದಾವಣಗೆರೆ ಸಮಾಜದ ಮುಖಂಡರಾದ ಮಲ್ಲಿನಾಥ, ವಿಶ್ವನಾಥ, ನಿಂಗಪ್ಪ, ಬಾದಾಮಿ ಚಂದ್ರಶೇಖರ, ಹೊನ್ನಾಳಿ ನೌಕರರ ಸಂಘದ ಪದಾಧಿಕಾರಿಗಳಾದ ಜಿ.ದೊಪ್ಪಪ್ಪ, ವೀರೇಶಪ್ಪ, ದೀಪಕ್, ಹಾಲಸ್ವಾಮಿ, ಪ್ರಸನ್ನ, ರಮೇಶ, ಮಹಂತೇಶ, ಪ್ರಭು, ಸತೀಶ, ವಿಜಯ ಸೇರಿದಂತೆ, ಇನ್ನಿತರರಿದ್ದರು.

# ಜೈನ ದಂಪತಿಗೆ ಹಿಂದೂ ಕಾಯ್ದೆಯಡಿ ವಿಚ್ಛೇದನ

## ಮ.ಪ್ರ.ಹೈಕೋರ್ಟ್ ವಿಚಾರಣೆ

ಇಂದೋರ್,ಫೆ.18 - ಜೈನ ವ್ಯಕ್ತಿಯೊಬ್ಬರು ಹಿಂದೂ ವಿವಾಹ ಕಾಯ್ದೆಯಡಿ ವೈವಾಹಿಕ ಪ್ರಕರಣ ಇತ್ಯರ್ಥ ಪಡಿಸಿಕೊಳ್ಳಬಹುದೇ ಎಂಬ ಬಗ್ಗೆ ಮಧ್ಯಪ್ರದೇಶ ಹೈಕೋರ್ಟ್ ನಿರ್ಧರಿಸಲಿದೆ.

37 ವರ್ಷದ ಜೈನ ಸಮುದಾಯದ ಸಾಫ್ಟ್‌ವೇರ್ ಇಂಜಿನಿಯರ್ ಒಬ್ಬರು ಹಿಂದೂ ವಿವಾಹ ಕಾಯ್ದೆಯ ಸೆಕ್ಷನ್ 13ಬಿ ಅನ್ವಯ ಪತ್ನಿಯೊಂದಿಗೆ ಸಹಮತದ ವಿಚ್ಛೇದನ ಪಡೆಯಲು ಬಯಸಿದ್ದರು.

ಆದರೆ 2014ರಲ್ಲಿ ಜೈನ ಸಮುದಾಯಕ್ಕೆ ಅಲ್ಪಸಂಖ್ಯಾತ ಸ್ಥಾನಮಾನ ನೀಡಲಾಗಿದೆ. ಹೀಗಾಗಿ ದಂಪತಿಗೆ ಹಿಂದೂ ವಿವಾಹ ಕಾಯ್ದೆಯಡಿ ವಿಚ್ಛೇದನ ನೀಡಲು ಬರುವುದಿಲ್ಲ ಎಂದು ಕೌಟುಂಬಿಕ ನ್ಯಾಯಾಲಯ ತೀರ್ಪು ನೀಡಿತ್ತು. ಕೌಟುಂಬಿಕ ನ್ಯಾಯಾಲಯದ ತೀರ್ಪು ಪ್ರಶ್ನಿಸಿ ಪತಿ ಹೈಕೋರ್ಟ್ ಮೆಟ್ಟಿಲೇರಿದ್ದಾರೆ.

ಜೈನ ಸಮುದಾಯಕ್ಕೆ ಹಿಂದೂ ವಿವಾಹ ಕಾಯ್ದೆಯ ಅನ್ವಯ ವಿಚ್ಛೇದನ ನೀಡುವ ಕುರಿತ ವಿಷಯ ಇನ್ನೂ ಯಾವುದೇ ನ್ಯಾಯಾಲಯದಲ್ಲಿ ನಿರ್ಧಾರವಾಗಿಲ್ಲ ಎಂದು ಉಭಯ ಕಡೆಯವರ ವಕೀಲರು ಹೇಳಿದ್ದಾರೆ. ಹೈಕೋರ್ಟ್ ಈ ಬಗ್ಗೆ ನಿರ್ಧಾರ ತೆಗೆದುಕೊಳ್ಳಲಿದೆ. ಅಲ್ಲಿಯವರೆಗೆ ಕೌಟುಂಬಿಕ ನ್ಯಾಯಾಲಯಗಳು ಈ ಬಗ್ಗೆ ಯಾವುದೇ ಆದೇಶ ಹೊರಡಿಸಬಾರದು ಎಂದು ನ್ಯಾಯಮೂರ್ತಿಗಳಾದ ವಿವೇಕ್ ರುಸಿಯ ಹಾಗೂ ಗಜೇಂದ್ರ ಸಿಂಗ್ ಅವರನ್ನು ಒಳಗೊಂಡ ಹೈಕೋರ್ಟ್ ಪೀಠ ತಿಳಿಸಿದೆ.

# ಕಾರ್ಮಿಕರಿಗೆ ವಿಮಾನಯಾನ

(1ನೇ ಪುಟದಿಂದ) ಕಾರ್ಮಿಕರನ್ನು ತನ್ನೊಂದಿಗೆ ಹತ್ತಿರದ ವಿಮಾನ ನಿಲ್ದಾಣವಾದ ಶಿವಮೊಗ್ಗಕ್ಕೆ ಕರೆದುಕೊಂಡು ಹೋಗಿ, ಗೋವಾ ಪ್ರಯಾಣ ಮಾಡಿಸಿದ್ದಾರೆ.

# ಎಂಸಿಸಿ 'ಬಿ' ಬ್ಲಾಕ್‌ನಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ

(1ನೇ ಪುಟದಿಂದ) ಇಷ್ಟೊಂದು ಅಭಿವೃದ್ಧಿ ಕಾರ್ಯ ನಡೆಸಲು ಸಾಧ್ಯವಾಗಿದ್ದು ಜನರು ತೋರಿಸಿದ ಪ್ರೀತಿ, ಕೊಟ್ಟ ಧೈರ್ಯವೇ ಕಾರಣ. ಏನೇ ಸಮಸ್ಯೆಗಳಿದ್ದರೂ ಹೇಳುವ ಜನರು ಅಭಿವೃದ್ಧಿ ಕಾರ್ಯಗಳಿಗೆ ಕೈಜೋಡಿಸಿದ್ದಾರೆ. ಜನರಿಗೆ ಕೃತಜ್ಞತೆ ಸಲ್ಲಿಸುತ್ತೇನೆ ಎಂದರು.

ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ, ಸಚಿವ ಎಸ್. ಎಸ್. ಮಲ್ಲಿಕಾರ್ಜುನ್, ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ಸಾಕಷ್ಟು ಅನುದಾನ ನೀಡಿದ್ದಾರೆ. ಈ ಅನುದಾನ ದಲ್ಲಿಯೇ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ನಡೆಸಲಾಗಿದೆ ಎಂದು ಅವರು ತಿಳಿಸಿದರು.

ಸ್ವಚ್ಛತೆಯಲ್ಲಿ ಪ್ರಥಮ ಸ್ಥಾನದಲ್ಲಿ ನಮ್ಮ ವಾರ್ಡ್ ಇದೆ ಎಂಬುದೇ ಖುಷಿಯ ವಿಚಾರ. ಜನರೂ ಸಹ ಅಷ್ಟೇ ಕಾಳಜಿ ವಹಿಸಿ, ವಾರ್ಡ್ ಸ್ವಚ್ಛವಾಗಿಟ್ಟುಕೊಂಡಿದ್ದಾರೆ. ಒಣ ಕಸ, ಹಸಿ ಕಸ ಬೇರ್ಪಡಿಸಿ ನೀಡುವ ಮೂಲಕ ಸಹಕಾರ ನೀಡಿದ್ದಾರೆ. ಐದು ವರ್ಷಗಳ ಅವಧಿಯಲ್ಲಿ ಜನರ ಬಲದಿಂದಾಗಿಯೇ ಇಷ್ಟೊಂದು ಕಾರ್ಯಗಳನ್ನು ಮಾಡಲು ಸಾಧ್ಯವಾಗಿದೆ ಎಂದು ಅವರು ತಿಳಿಸಿದರು.

ನಗರ ಯೋಜನೆ ಮತ್ತು ಸುಧಾರಣೆ ಸ್ಥಾಯಿ ಸಮಿತಿ ಅಧ್ಯಕ್ಷೆ ಸವಿತಾ ಗಣೇಶ್ ಹುಲ್ಲುಮನೆ, ಆರೋಗ್ಯ, ಶಿಕ್ಷಣ, ಸಾಮಾಜಿಕ ನ್ಯಾಯ ಸಮಿತಿ ಅಧ್ಯಕ್ಷೆ ಆಶಾ ಉಮೇಶ್, ಲೆಕ್ಕಪತ್ರ ಸ್ಥಾಯಿ ಸಮಿತಿ ಅಧ್ಯಕ್ಷೆ ಸುಧಾ ಮಂಜುನಾಥ ಇಟ್ಟಿಗುಡಿ, ನಾಮನಿರ್ದೇಶಿತ ಸದಸ್ಯ ಸುರಭಿ ಶಿವಮೂರ್ತಿ, ತೆರಿಗೆ ಹಾಗೂ ಹಣಕಾಸು ಸ್ಥಾಯಿ ಸಮಿತಿ ಅಧ್ಯಕ್ಷೆ ಉರ್ ಬಾನು ಪಂಡಿತ್, ಅಂದನೂರು ಮುಪ್ಪಣ್ಣ, ಬಿ.ಹೆಚ್. ಪರಶುರಾಮಪ್ಪ, ಜಾವೀದ್ ಸಾಬ್, ಜಬ್ಬರ್ ಸಾಬ್, ಕುಶಾಲ್ ಶೆಟ್ರು, ಕಬ್ಬೂರು ಪ್ರಕಾಶ್, ಬೆಳ್ಳೂಡಿ ವೀರಣ್ಣ, ಮೇಕಾ ಸತ್ಯನಾರಾಯಣ್, ಪ್ರಕಾಶ್, ನಿಂಗನಗೌಡ, ವೀರೇಶ್ ಪಾಟೀಲ್, ರುದ್ರೇಶ್, ದೊಗ್ಗಳ್ಳಿ ಶಿವಕುಮಾರ್, ಹೇಮಂತ್ ಆರಾಧ್ಯ, ರವಿಯಣ್ಣ, ಗುರುಮೂರ್ತಿ, ಮುರುಗೇಶ್ ಮಂತ್ರಿ, ಶೌಕತ್ ಆಲಿ, ವಿಶ್ವನಾಥ್ ಬುಳ್ಳಾಪುರ, ಶ್ರೀಕಾಂತ್, ಮಂಜುನಾಥ್ ಮತ್ತು ಇತರರು ಕಾರ್ಯಕ್ರಮದಲ್ಲಿ ಹಾಜರಿದ್ದರು.

# ಐದು ವರ್ಷಗಳಲ್ಲಿ ವ್ಯಾಪಾರ ದುಪ್ಪಟ್ಟು ಗೊಳಿಸಲು ಭಾರತ - ಕತಾರ್ ಗುರಿ

ನವದೆಹಲಿ, ಫೆ. 18 - ಮುಂದಿನ ಐದು ವರ್ಷಗಳಲ್ಲಿ ದ್ವಿಪಕ್ಷೀಯ ವ್ಯಾಪಾರವನ್ನು ಎರಡು ಪಟ್ಟು ಹೆಚ್ಚಿಸಿ 28 ಶತಕೋಟಿ ಡಾಲರ್‌ಗಳಿಗೆ ತಲುಪಿಸಲು ಭಾರತ ಮತ್ತು ಕತಾರ್ ಸಮ್ಮತಿಸಿವೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಹಾಗೂ ಕತಾರ್‌ನ ಅಮೀರ್ ಶೇಕ್ ತಮೀನ್ ಬಿನ್ ಅಹ್ಮದ್ ಥಾನಿ ಅವರ ಭೇಟಿಯ ವೇಳೆ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಮತ್ತು ವ್ಯೂಹಾತ್ಮಕ ಸಹಭಾಗಿತ್ವವನ್ನು ಮುಂದಿನ ಹಂತಕ್ಕೆ ತೆಗೆದುಕೊಂಡು ಹೋಗಲು ನಿರ್ಧರಿಸಲಾಗಿದೆ.

ವ್ಯೂಹಾತ್ಮಕ ಸಹಭಾಗಿತ್ವ ಹಾಗೂ ಪರಿವರ್ತಿತ ದುಪ್ಪಟ್ಟು ತೆರಿಗೆ ತಪ್ಪಿಸುವ ಒಪ್ಪಂದಕ್ಕೆ ಉಭಯರು ಸಹಿ ಹಾಕಿದ್ದಾರೆ.

# ಹೊಳಲ್ಕೆರೆ : ಅಪರಿಚಿತನ ಶವ ಪತ್ತೆ

ದಾವಣಗೆರೆ, ಫೆ.18- ರಾಮಗಿರಿ ಮತ್ತು ಹೊಳಲ್ಕೆರೆ ರೈಲ್ವೆ ನಿಲ್ದಾಣದ ಮಧ್ಯೆ ಅಪರಿಚಿತ ಗಂಡಸಿನ ಮೃತ ದೇಹ ಪತ್ತೆಯಾಗಿದೆ. ಅಂದಾಜು 25 ರಿಂದ 30 ವರ್ಷದ ಈತ, ಗೋಧಿ ಮೈ ಬಣ್ಣ, ಸಾಧಾರಣ ಮೈ ಕಟ್ಟು, ದುಂಡು ಮುಖ ಹಾಗೂ ಬಿಳಿ ಮಿಶ್ರಿತ ಕಪ್ಪು ಕೂದಲು ಇರುವ ತುಂಬು ತೋಳಿನ ಕಪ್ಪು ಶರ್ಟ್ ಹಾಗೂ ನೀಲಿ ಜೀನ್ಸ್ ಪ್ಯಾಂಟ್ ಧರಿಸಿದ್ದಾನೆ. ಸಂಬಂಧಪಟ್ಟವರು ದಾವಣಗೆರೆ ರೈಲ್ವೆ ಪೊಲೀಸ್ ಠಾಣೆಯಲ್ಲಿ (08192-259643, 9480802123) ಸಂಪರ್ಕಿಸಬಹುದು.

# ಹೊನ್ನಾಳಿಯಲ್ಲಿ ಮಟ್ಕಾ : ಬಂಧನ

ಹೊನ್ನಾಳಿ, ಫೆ.18- ಇಲ್ಲಿನ ವಡ್ಡಿನಕೆರೆ ಹಳ್ಳದಿಂದ ಟಿ.ಬಿ ವೃತ್ತದ ಕಡೆಗೆ ಹೋಗುವ ರಸ್ತೆಯ ಸಾರ್ವಜನಿಕ ಸ್ಥಳದಲ್ಲಿನ ಮಟ್ಕಾ ಜೂಜಾಟದ ಅಡ್ಡೆಯ ಮೇಲೆ ದಾಳಿ ನಡೆಸಿದ ಪೊಲೀಸರು ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ.

ತಾಲ್ಲೂಕಿನ ಸುನೀಲ್ ಮತ್ತು ಚನ್ನಪ್ಪ ಬಂಧಿತ ಆರೋಪಿಗಳಾಗಿದ್ದು, ಮಟ್ಕಾ ಜೂಜಾಟದಲ್ಲಿ ತೊಡಗಿಸಿದ್ದ 89,250 ನಗದು ಮತ್ತು 12 ಮಟ್ಕಾ ಚೀಟಿ ವಶಕ್ಕೆ ಪಡೆಯಲಾಗಿದೆ. ಸಿಇಎನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಟಿ.ಎಂ. ವಸಂತಕುಮಾರಿ ನಿಧನ



ದಾವಣಗೆರೆ ಸಿಟಿ ನಿಟ್ಟುವಳ್ಳಿ (ಶಾಮ್ ಕಾಂಪ್ಲೆಕ್ಸ್) ವಾಸಿ
ದಿ. ಟಿ.ಎಂ. ಪಂಚಾಕ್ಷರಯ್ಯ ಅವರ ಧರ್ಮಪತ್ನಿ

**ಟಿ.ಎಂ. ವಸಂತಕುಮಾರಿ** (84 ವರ್ಷ)

ಇವರು ದಿನಾಂಕ 18.02.2025ರ ಮಂಗಳವಾರ ರಾತ್ರಿ 11.45ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇಬ್ಬರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 19.02.2025ರ ಬುಧವಾರ ಮಧ್ಯಾಹ್ನ 2 ಗಂಟೆಗೆ ಎಸ್.ಎಸ್. ಆಸ್ಪತ್ರೆ ಹಿಂಭಾಗದ ರಾಮನಗರ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ, ಮೊ. : 98800 98921, 90367 42532


**ಜಾಗ ಮಾರಾಟಕ್ಕಿದೆ**
ಶಿರಮಗೊಂಡನಹಳ್ಳಿ ಹತ್ತಿರ 10,000 ಅಡಿ ಕಮರ್ಷಿಯಲ್ ಜಾಗ ಮಾರಾಟಕ್ಕೆ ಇದೆ. ಕುಂದುವಾಡದಲ್ಲಿ ಇನ್‌ವೆಸ್ಟ್‌ಮೆಂಟ್ ಸೈಟ್ 30x40 ಪೂರ್ವ - ಪಶ್ಚಿಮ
97315 12365
99862 34416

**ಕೆಲಸಕ್ಕೆ ಬೇಕಾಗಿದ್ದಾರೆ**
ಶ್ರೀ ಸಾಯಿ ಎಗ್ ಸೆಂಟರ್‌ನಲ್ಲಿ ಆಟೋ ಡ್ರೈವರ್, ಟಾಟಾ ACE ಡ್ರೈವರ್ ಮತ್ತು ಅಂಗಡಿಯ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC ಉತ್ತೀರ್ಣ ಶಿವಪ್ಪ ಸರ್ಕಲ್, ದಾವಣಗೆರೆ.
96860 22969

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಮಹಿಳಾ ಮತ್ತು ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ಪುರುಷ ಅಭ್ಯರ್ಥಿಗಳಿಗೆ ಊಟ ಮತ್ತು ವಸತಿ ಸೌಲಭ್ಯವಿದೆ. ಸಂಪರ್ಕಿಸಿ :
98442 94446

**KHB ಸೈಟ್ ಮಾರಾಟಕ್ಕೆ**
ದಾವಣಗೆರೆಯಿಂದ ಮೊದಲ ಭಾಗದ ಟ್ಯಾಂಕ್ ಪಾರ್ಕ್ ಎದುರು 30x40 ಸೌತ್ (33 ಲಕ್ಷ) 30x40 ಸೌತ್ (32.5 ಲಕ್ಷ)
ಕಿರಣ್ ಬೂಸ್ನೂರ್ (ಏಜೆಂಟ್)
94824 63409
98440 63409, 97315 63409

**ಸೈಟುಗಳು ಮಾರಾಟಕ್ಕಿವೆ**
ಕರ್ನಾಟಕ ಗೃಹ ಮಂಡಳಿಯಲ್ಲಿ 50x80 East, Rate - 2800/- 40x60, 40x60 South ಅಕ್ಕ-ಪಕ್ಕ, 80 ಅಡಿ ರೋಡಿಗಿದೆ. 50x80 North, 120 ಅಡಿ ರೋಡಿಗಿದೆ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಮನೆ ಬಾಡಿಗೆಗೆ / ಲೀಸ್‌ಗೆ ಇವೆ**
ಆಂಜನೇಯ ಬಡಾವಣೆಯಲ್ಲಿ ಮೊದಲನೇ ಮಹಡಿ ದಕ್ಷಿಣಕ್ಕೆ 2 ಬೆಡ್ ರೂಂ (ಸಸ್ಯಹಾರಿಗಳಿಗೆ ಮಾತ್ರ). ವಿನಾಯಕ ಬಡಾವಣೆಯಲ್ಲಿ, ಶಿವಕುಮಾರ ಸ್ವಾಮಿ ಬಡಾವಣೆಯಲ್ಲಿ 3 ಬೆಡ್ ರೂಂ ಮನೆಗಳು.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಸೈಟುಗಳು ಮಾರಾಟಕ್ಕಿವೆ**
ಕೆಹೆಚ್‌ಬಿ 30x50 ಪೂರ್ವ ಸರ್ಕಾರಿ ನೌಕರರ ಬಡಾವಣೆ 2ನೇ ಹಂತ, ಜಿಎಂಐಟಿ ಹತ್ತಿರ, ಪೂರ್ವ 30x50
90361 89699
72592 69940

**CARS FOR SALE**
Alto Lxi
Hyundai I20 New
Swift Dzire yellow board
Maruthi Celerio Automatic
Contact : Daivik Iynahalli
99456 43223

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಕಾರ್ ಡ್ರೈವರ್ ಕಮ್ ಸೆಕ್ಯೂರಿಟಿ, ಆಟೋಮೆಟಿಕ್ ಗೇರ್ ಅನುಭವ ಇರಬೇಕು. ಸಂಬಳ 16,000/- OT ಸಿಗುತ್ತದೆ. ವಸತಿ ಸೌಲಭ್ಯವಿದೆ.
97400 98047

**ಮಹಿಳೆಯರು ಕೆಲಸಕ್ಕೆ ಬೇಕಾಗಿದ್ದಾರೆ**
SAI SRI INDUSTRIES
Near Sub Register Office, Behind MRF Tyres Showroom.
98862 55308, 96111 14244

**ಬೇಕಾಗಿದ್ದಾರೆ**
ನಮ್ಮ ಶೋರೂಂನಲ್ಲಿ ಸೇಲ್ಸ್ ಮಾಡಲು ಸೇಲ್ಸ್ ಎಕ್ಸಿಕ್ಯೂಟಿವ್ ಮತ್ತು ಹೆಲ್ಪರ್ ಬೇಕಾಗಿದ್ದಾರೆ. ಪರಿಚಯದೊಂದಿಗೆ ಸಂಪರ್ಕಿಸಿ :
ಗಂಗಾವತಿ ಸಿಲ್ಕ್ ಸ್ಯಾರಿ ಸೆಂಟರ್
ಬಿನ್ನಿ ಕಂಪನಿ ರೋಡ್
ದಾವಣಗೆರೆ 577001

**ಮನೆ ಬಾಡಿಗೆಗೆ ಅಥವಾ ಲೀಸ್‌ಗೆ ಬೇಕಾಗಿದೆ**
ಮೂರು ಅಥವಾ ನಾಲ್ಕು ಬೆಡ್‌ರೂಂ ಇರುವ ಸುಸಜ್ಜಿತವಾದ ಇಂಡಿಪೆಂಡೆಂಟ್ ಮನೆ ಬಾಡಿಗೆಗೆ ಅಥವಾ ಲೀಸಿಗೆ ಬೇಕಾಗಿದೆ. (ಎಂಸಿಸಿ ಎ ಬ್ಲಾಕ್, ಬಿ ಬ್ಲಾಕ್, ಎಸ್ ಎಸ್ ಲೇಔಟ್, ನಿಜಲಿಂಗಪ್ಪ ಬಡಾವಣೆ, ಪಿ.ಜಿ Extn, ಬಸವೇಶ್ವರ ನಗರ) (ಮಧ್ಯವರ್ತಿಗಳಿಗೆ ಪ್ರವೇಶವಿಲ್ಲ)
81239 71393

**ಬೇಕಾಗಿದ್ದಾರೆ**
ಕಾರ್ ವಾಟರ್ ವಾಶ್ ಸರ್ವೀಸ್ ಸ್ಟೇಷನ್‌ನಲ್ಲಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಆಸಕ್ತರು ಸಂಪರ್ಕಿಸಿ : **ಕಾರ್ ಹೆಲ್ತ್ ವಾಟರ್ ಸರ್ವೀಸ್ ಸ್ಟೇಷನ್**, ಮಾಗನೂರು ಬಸಪ್ಪ ಪೆಟ್ರೋಲ್ ಬಂಕ್ ಹಿಂಭಾಗ, ಹದಡಿ ರಸ್ತೆ, ದಾವಣಗೆರೆ.
99009 30270, 81057 00885

**ಕೆಲಸಕ್ಕೆ ಬೇಕಾಗಿದ್ದಾರೆ**
ದಾವಣಗೆರೆಯಲ್ಲಿರುವ ಸಣ್ಣ ಪ್ರಮಾಣದ ಕಂಪನಿಗೆ ವೆಲ್ಡಿಂಗ್ ಮಷಿನ್ & ಫ್ಯಾಬ್ರಿಕೇಷನ್ ಕೆಲಸ ಗೊತ್ತಿರುವ ಹುಡುಗರು ಬೇಕಾಗಿದ್ದಾರೆ.
78998 72391, 77951 19074

**ಹೋಟೆಲ್ ಕೆಲಸಕ್ಕೆ ಬೇಕಾಗಿದ್ದಾರೆ**
ಸೂಪರ್‌ವೈಸರ್, ರೋಟಿ, ಗ್ರೇವಿ ಮಾಡುವವರು ಬೇಕಾಗಿದ್ದಾರೆ.
swift disel, CNG ಕಾರ್ ಸೇಲ್‌ಗೆ.
94812 47552

**ಇಂಡಸ್ಟ್ರೀಯಲ್ ಜಾಗ ಮಾರಾಟಕ್ಕಿದೆ**
ಹಾಲಿ ಬಾಡಿಗೆ ಬರುತ್ತಿರುವ ಅಂದಾಜು 19000 Sqft ಜಾಗ ಮತ್ತು ಶೆಡ್ಡ್ ಮಾರಾಟಕ್ಕಿದೆ. ಲಾಡ್ಜ್, ಗೋಡೋನ್, ಶೋರೂಂ, ನರ್ಸಿಂಗ್ ಹೋಂ ಹಲವಾರು ಉದ್ದೇಶಕ್ಕೆ ಉಪಯುಕ್ತವಾಗಿರುವ, ಪಿ.ಬಿ. ರಸ್ತೆಗೆ, ಹತ್ತಿರದಲ್ಲಿ 40 ಅಡಿ ರಸ್ತೆಗೆ ಪೂರ್ವಕ್ಕೆ ರಸ್ತೆ ಇರುವ 180x110 ಅಡಿ ಜಾಗ ಮಾರಾಟಕ್ಕಿದೆ. ಸಂಪರ್ಕಿಸಿ :
94481 80019

**ಸೈಟ್‌ಗಳು ಮಾರಾಟಕ್ಕಿವೆ**
ಕುಂದವಾಡ ಕೆರೆ ಕಾಸಲ್ ಅಮರನಾಥ್. ಹಳೆಯ ಪಟ್ಟಿ ಪಶ್ಚಿಮಕ್ಕೆ 4 ಸೈಟುಗಳು ಪೂರ್ವಕ್ಕೆ 1 ಸೈಟ್ ಮಾರಾಟಕ್ಕಿವೆ
99807 28487

**ಮಾರಾಟಕ್ಕಿದೆ**
ಸಿಮೆಂಟ್ ಇಟ್ಟಿಗೆ ಮಿಷನ್ ಮಾರಾಟಕ್ಕಿದೆ
94489 24273

**ಬೇಕಾಗಿದ್ದಾರೆ**
PUC ಆದ ಮಹಿಳೆಯರು ಸ್ಟಾಕ್ ತೆಗೆಯಲು, ಹೋಲ್ ಸೇಲ್ ಫಾರ್ಮಾ ದಲ್ಲಿ ಬಿಲ್ಲಿಂಗ್ ಮಾಡಿರುವ ಅನುಭವವುಳ್ಳ ಮಹಿಳೆಯರು ಬೇಕಾಗಿದ್ದಾರೆ. ಭೇಟಿಯ ಸಮಯ ಸಂಜೆ 6:30 ರ ನಂತರ
ಶ್ರೀ ಗುರು ಎಂಟರ್ ಪ್ರೈಸಸ್
#579, 6ನೇ ಮುಖ್ಯ ರಸ್ತೆ, ಪಿಜೆ ಬಡಾವಣೆ ದಾವಣಗೆರೆ.

**ಕಮರ್ಷಿಯಲ್ ಸೈಟುಗಳು ಮಾರಾಟಕ್ಕಿವೆ**
ವಿದ್ಯಾನಗರದಲ್ಲಿ ಮೇನ್ ರೋಡಿಗೆ 29x28 East-South Corner ಭಗೀರಥ ಸರ್ಕಲ್ ಹತ್ತಿರ, 22.50x40, 22.50x40 South ಅಕ್ಕ-ಪಕ್ಕ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಮಾರಾಟಕ್ಕಿವೆ**
400 ಅಡಿಗಳಷ್ಟು ಅಲ್ಯುಮಿನಿಯಂ, ಗ್ಲಾಸ್ ಪಾರ್ಟಿಷಿಯನ್ ಮತ್ತು ಗ್ಲಾಸ್ ಡೋರ್‌ಗಳು ಮಾರಾಟಕ್ಕಿವೆ. ಸಂಪರ್ಕಿಸಿ :
ಅಂದನೂರು ಚಿಟ್ಸ್
ರಾಮ್ & ಕೋ ಹತ್ತಿರ, ದಾವಣಗೆರೆ.

**KHB ಬಂಗ್ಲೆ ಸೈಟ್ ಮಾರಾಟಕ್ಕೆ**
ಕಮರ್ಷಿಯಲ್ ಆಗುವಂತಹ 100 ಅಡಿ ರಸ್ತೆಗೆ 80X60 ಸೌತ್ 40x60 ಉತ್ತರ 40x60 ಉತ್ತರ 50x80 ಉತ್ತರ40x60 ಉತ್ತರ 50x80 ಸರ್ಕಲ್ ಪಕ್ಕ (GOOD LOCATION)
ಕಿರಣ್ ಬೂಸ್ನೂರ್ (ಏಜೆಂಟ್)
94824 63409
98440 63409, 97315 63409

**ಮನೆಗಳು ಮಾರಾಟಕ್ಕಿವೆ**
ಭಗೀರಥ ಸರ್ಕಲ್, ನಿಟ್ಟುವಳ್ಳಿ, ದಾವಣಗೆರೆ ಹತ್ತಿರ ಇರುವ 20x30 ಸೈಜಿನ ಮನೆಗಳು ಮಾರಾಟಕ್ಕಿವೆ. ಸಂಪರ್ಕಿಸಿ :
94484 39639

**ಸೈಟುಗಳು ಮಾರಾಟಕ್ಕಿವೆ**
ನೂತನ ಕಾಲೇಜು ಹಿಂಭಾಗ LIC ಕಾಲೋನಿಯಲ್ಲಿ 30x46 ಪೂರ್ವ, ವಿನಾಯಕ ಬಡಾವಣೆಯಲ್ಲಿ 30x50 ದಕ್ಷಿಣ ಅಕ್ಕ-ಪಕ್ಕ, ಆಂಜನೇಯ ಬಡಾವಣೆಯಲ್ಲಿ 30x50 ಉತ್ತರ, 30x47 ದಕ್ಷಿಣ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಶ್ರೀದೇವಿ ಗ್ರೂಪ್ ಆಫ್ ಎಜುಕೇಷನ್ (ರಿ)**
REG. No DVG-F105-2024-25
MA ಕನ್ನಡ ಮೇಜರ್ B.Ed ವಿದ್ಯಾಭ್ಯಾಸ ಹೊಂದಿರುವ ಪರಿಶಿಷ್ಟ ಜಾತಿಗೆ ಸೇರಿದ ಅಭ್ಯರ್ಥಿ ಸರ್ಕಾರದ ಮಾನ್ಯತೆ ಪಡೆದ ಕಾಲೇಜಿಗೆ ಉಪನ್ಯಾಸಕರ ಹುದ್ದೆಗೆ ಬೇಕಾಗಿದ್ದಾರೆ. UGC SCALE. ಆಸಕ್ತರು ಸಂಪರ್ಕಿಸಿ :
95917 25892

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**ಸ್ನೂಕರ್ ಕ್ಲಬ್‌ಗೆ ಕೆಲಸಕ್ಕೆ ಬೇಕಾಗಿದೆ**
ಸ್ಥಳ: ಕೋರ್‌ನರ್ ಪಾಕೆಟ್, ಎಂಸಿಸಿ ಬಿ ಬ್ಲಾಕ್, ದಾವಣಗೆರೆ
ಸಮಯ: ಬೆಳಗ್ಗೆ 10 ರಿಂದ ರಾತ್ರಿ 9ರವರೆಗೆ
ಸಂಬಳ: 9,000 - 10,000
ಸಂಪರ್ಕಿಸಿ: 89710-39110

**CRASH COURSE FOR CLASS 10 CBSE / STATE**
* End of March to Mid of May,
* 5 1/2 hrs. of effective teaching each day, * Maths & Science
Pi Academy, DVG-04
Sri S. Nijalingappa Layout.
99642 29344, 89513 67178
95911 27363

**ಸೈಟುಗಳು ಮಾರಾಟಕ್ಕಿವೆ**
ಯರಗುಂಟೆಯ ಹೊಸ ಲೇಔಟ್‌ನಲ್ಲಿ 30x40 ಮತ್ತು 30x45 ಸೈಜ್ ಸೈಟುಗಳು ಮಾರಾಟಕ್ಕಿವೆ.
92414 62457

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**CHANGE OF NAME**
I RITIKA MANJUNATH KURDEKAR, D/o Manjunath R. Kurdekar resident of #2623/2, Padma Ganga, 8th Main, Ist Cross, Opp : Water Tank Park, MCC B Block, Davangere -04. That in my Educational Records my name is Mentioned RITHIKA MANJUNATH KURDERKAR I have changed my name as RITIKA MANJUNATH KURDEKAR vide affidavit dated 17.02.2025 sworn before Notary Davangere. Henceforth all my transactions & dealings will be in my new name RITIKA MANJUNATH KURDEKAR

**FLAT FOR LEASE**
3 BHK, Sqft :1888
AM Apartment
Nainika Prime Rose
Vidyanagar last city bus stop Davanagere.
89519 38228, 80502 22181

**ಶ್ರೀ ಸಾಯಿಬಾಬ ಬೋರ್‌ವೆಲ್**
ಮನೆ ಒಳಗಡೆ ಹಾಗೂ ಹೊರಗಡೆ ಸ್ಟ್ಯಾಂಡ್ ಬೋರ್ 300 ಅಡಿಯಿಂದ 450 ಅಡಿ ವರೆಗೂ ಕೊರೆಯಲಾಗುವುದು.
99640 78484
95906 15776

**AdBlue / DEF**
available with Best Quality & Price for All BS6 Diesel
Commercial & Passanger Vehicles
Visit: Best Lubricants
Opp. to New Pvt Bus Stand
PB Road, Davangere.
73380 33337

**ಟ್ಯಾಂಕರ್ ಲಾರಿ ಡ್ರೈವರ್ ಬೇಕಾಗಿದ್ದಾರೆ**
ಆನಗೋಡು ಸಮೀಪ NH-48 ನಲ್ಲಿ ಇರುವ BPCL ಪೆಟ್ರೋಲ್ ಬಂಕ್‌ನ 20KL ಟ್ಯಾಂಕರ್ ಲಾರಿಗೆ HAZARD ಇರುವ ಟ್ಯಾಂಕರ್ ಲಾರಿ ಚಾಲಕರು ಬೇಕಾಗಿದ್ದಾರೆ. ಸೂಕ್ತ ದಾಖಲೆಗಳೊಂದಿಗೆ ಸಂಪರ್ಕಿಸಿ :
90082 28222, 99001 42052

**TUITIONS**
CBSE / ICSE Boards
Class 8th, 9th, 10th
CRASH COURSES FOR
NEET / CET / IIT - JEE
PUC I / PUC II / PCMB
NEET Long Term / Supplementary Exams
97398 65711, 94822 44114

**ಶ್ರೀ ಮಾತಾ ಟ್ರಸ್ಟ್**
(Old Age Care Center)
ಶಾಸ್ತ್ರಿಹಳ್ಳಿ ತುಂಬಿಗೆರೆ ಅಂಚೆ
ಸೀನಿಯರ್ ಸಿಟಿಜನ್ ಕೇರ್ ಸೆಂಟರ್
ನಮ್ಮಲ್ಲಿ 40 ವರ್ಷ ಮೇಲ್ಪಟ್ಟ ವಯೋವೃದ್ದರು/ವೃದ್ದೆಯರು ನಿವೃತ್ತಿ ಹೊಂದಿದವರು ಹಾಗೂ ಖಾಸಗಿ ಜೀವನ ನಡೆಸಲು ಇಚ್ಛೆ ಇರುವವರು, ನಮ್ಮ ಆರೈಕೆ ಕೇಂದ್ರಕ್ಕೆ ಸೇರಬಹುದು.
97319 93770, 99001 42052

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
ದಾವಣಗೆರೆ, ಶಿವಮೊಗ್ಗ, ಸಾಗರ, ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 94481 59303, 80509 52637

**ಲಿಂಗಾಯತ ವಧು ಬೇಕಾಗಿದೆ**
ನನಗೆ 60 ವರ್ಷ, ಎರಡನೇ ಮದುವೆಗೆ ಲಿಂಗಾಯತ ಅಥವಾ ಸಸ್ಯಹಾರಿ ವಧು ಬೇಕು. ನನಗೆ ಗೌರ್ನಮೆಂಟ್ 35,000/- ಪೆನ್ಷನ್ ಬರುತ್ತದೆ. ಮಕ್ಕಳು ಇಲ್ಲದ ವಿಧವೆಯರು, ಡೈವರ್ಸ್ ಆದವರು ನಡೆಯುತ್ತದೆ. ಫೋಟೋ, ಬಯೋಡೇಟಾ ಕಳುಹಿಸಿ
99457 21565

**ಗಾಂಧಿ ಸರ್ಕಲ್‌ನಲ್ಲಿರುವ ಕಾವೇರಿ ಉಪಹಾರ ದರ್ಶಿನಿ ಹೋಟೆಲ್ ಕೆಲಸದ ನಿಮಿತ್ತ ದಿ. 19ರ ಬುಧವಾರ ಮತ್ತು ದಿ. 20 ರ ಗುರುವಾರ ರಜಾ ಇರುತ್ತದೆ. ಎಂದಿನಂತೆ ಗ್ರಾಹಕರು ಸಹಕರಿಸಬೇಕಾಗಿ ವಿನಂತಿ.**

**ಡ್ರೈವರ್ಸ್ ಮತ್ತು ಸೆಕ್ಯೂರಿಟಿ ಗಾರ್ಡ್ಸ್ ಬೇಕಾಗಿದ್ದಾರೆ**
ಆಕರ್ಷಕ ಸಂಬಳವಿರುತ್ತದೆ.
81056 99985
89715 04492

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7 ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ವಾಟರ್ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**ಅಧಿಕೃತ ಚೀಟಿ ಸಂಸ್ಥೆ**
ರೂ. 5 ಲಕ್ಷ ಚೀಟಿ ಪ್ರಾರಂಭ 50 ಸದಸ್ಯರು 6,500/- ರಿಂದ 10,000 /- ರೂ ವರೆಗೆ,
ಸ್ಕಂದ ಚಿಟ್ ಫಂಡ್ಸ್- (ರಿ)
ದಾವಣಗೆರೆ.
78997 75159

# ಕೊಟ್ಟೂರು ತೇರು ಕಟ್ಟುವ ಕಾರ್ಯ ಪ್ರಾರಂಭ



ಕೊಟ್ಟೂರು, ಫೆ. 18 - ಶ್ರೀ ಗುರು ಬಸವೇಶ್ವರ ಸ್ವಾಮಿಯ ತೇರು ಕಟ್ಟುವ ಕಾರ್ಯವನ್ನು ಇಂದಿನಿಂದ ಶುರು ಮಾಡಲಾಯಿತು.

ದಿ. 22 ರಂದು ನಡೆಯಲಿರುವ ಶ್ರೀ ಕೊಟ್ಟೂರು ಗುರು ಬಸವೇಶ್ವರ ಮಹಾರಥೋ ತ್ಸವದ ನಿಮಿತ್ತ ಆಯಾಗಾರ ಬಳಗದದವರು ತೇರು ಕಟ್ಟುವ ಕಾರ್ಯ ಪ್ರಾರಂಭಿಸಿದ್ದಾರೆ.

# ಹರಿಹರ: ಕೊಟ್ಟೂರು ಪಾದಯಾತ್ರಿಗಳಿಗೆ ಬೀಳ್ಕೊಡುಗೆ



ಹರಿಹರ,ಫೆ. 18- ಇದೇ ದಿನಾಂಕ 22 ರಂದು ಜರುಗಲಿರುವ ಶ್ರೀ ಕೊಟ್ಟೂರು ಗುರುಬಸವೇಶ್ವರ ರಥೋತ್ಸವದ ಅಂಗವಾಗಿ ನಗರದ ಶ್ರೀ ಗುರು ಕೊಟ್ಟೂರು ಗುರುಬಸವೇಶ್ವರ ದೇವಸ್ಥಾನ ನಿರ್ಮಾಣ ಸಮಿತಿ ಹಾಗೂ ಶ್ರೀ ಗುರು ಕೊಟ್ಟೂರೇಶ್ವರ ಪಾದಯಾತ್ರೆ ಸೇವಾ ಸಮಿತಿ ಇವರ ಸಂಯುಕ್ತ ಆಶ್ರಯದಲ್ಲಿ 9ನೇ ವರ್ಷದ ಕೊಟ್ಟೂರು ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ.

ನಾಳೆ 19ರ ಬುಧವಾರ ನಗರದ ಹರಿಹರೇಶ್ವರ ದೇವಸ್ಥಾನದ ರಸ್ತೆಯಲ್ಲಿರುವ ಶ್ರೀ ರೇಣುಕ ಮಂದಿರದಿಂದ ಪಾದಯಾತ್ರೆಗೆ ಚಾಲನೆ ನೀಡಲಾಗುವುದು. ಮಧ್ಯಾಹ್ನ 12ರಿಂದ ಜೀಜಾ ಮಾತಾ ಕಾಲೋನಿಯಲ್ಲಿರುವ ಶ್ರೀ ಗುರು ಕೊಟ್ಟೂರೇಶ್ವರ ದೇವಸ್ಥಾನದಲ್ಲಿ ಪಾದಯಾತ್ರಿ ಗಳಿಗೆ ಬೀಳ್ಕೊಡುಗೆ ಸಮಾ ರಂಭ ಹಮ್ಮಿಕ್ಕೊಳ್ಳಲಾಗಿದೆ. ಕಾರ್ಯಕ್ರಮದ ಸಾನ್ನಿಧ್ಯ ವನ್ನು ಆವರಗೊಳ್ಳ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ, ನೀಲಗುಂದ ಜಂಗಮಪೀಠ ಗುಡ್ಡದ ಸಂಸ್ಥಾನದ ಶ್ರೀ ಚನ್ನಬಸವ ಶಿವಯೋಗಿ ಸ್ವಾಮೀಜಿ ವಹಿಸಲಿ ದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಮಿತಿ ಗೌರವಾಧ್ಯಕ್ಷ ವೀರಯ್ಯ ಗಜಾಪುರ ವಹಿಸುವರು.

ಅಧ್ಯಕ್ಷ ಜಿ. ಮಂಜುನಾಥ, ಶಾಸಕ ಬಿ. ಪಿ. ಹರೀಶ್, ಮಾಜಿ ಶಾಸಕ ಹೆಚ್. ಎಸ್. ಶಿವಶಂಕರ್, ಎಸ್. ರಾಮಪ್ಪ, ಎಸ್. ಎಂ. ವೀರೇಶ್, ಎಂ. ನಾಗೇಂದ್ರಪ್ಪ, ಚಂದ್ರಶೇಖರ ಪೂಜಾರ, ಎನ್.ಹೆಚ್.ಶ್ರೀನಿವಾಸ, ಮಹೇಶ್ವರಪ್ಪ ದೀಟೂರು, ನಗರಸಭೆ ಉಪಾಧ್ಯಕ್ಷ ಜಂಬಣ್ಣ. ಸದಸ್ಯರಾದ ಶಂಕರ್ ಖಟಾವ್‌ಕರ್, ಸಿದ್ದೇಶ್ ಕೆ.ಜಿ, ಆಟೋ ಹನುಮಂತ. ರಜನಿಕಾಂತ್ ಎನ್. ಡಿ.ಜಿ. ರಘುನಾಥ, ಎಂ. ವಿಲಾಸ ಗೌಡ್ರು, ನಿಟ್ಟೂರು.ಭಾಗವಹಿಸಲಿದ್ದಾರೆ.

## ಕೊಟ್ಟೂರು ಪಾದಯಾತ್ರಿಗಳಿಗೆ ಶಾಮನೂರು ಪ್ರಕಾಶ್‌ರಿಂದ ನೀರಿನ ವ್ಯವಸ್ಥೆ

ಕೊಟ್ಟೂರಿನಲ್ಲಿ ದಿನಾಂಕ 22ರಂದು ನಡೆಯಲಿರುವ ಶ್ರೀ ಗುರು ಬಸವೇಶ್ವರ ಸ್ವಾಮಿ ರಥೋತ್ಸವಕ್ಕೆ ತೆರಳುವ ಪಾದಯಾತ್ರಿಗಳಿಗೆ ಶಾಮನೂರಿನ ಪ್ರಕಾಶ್ ಅವರು ಶಾಮನೂರು ಮತ್ತು ಮಾಗಾನಹಳ್ಳಿ ಕೋಡಿ ಕ್ಯಾಂಪ್‌ನಲ್ಲಿ ಇಂದು ಕುಡಿಯುವ ನೀರಿನ ವ್ಯವಸ್ಥೆ ಮಾಡಿದ್ದಾರೆ.

# ಬಿದ್ದಹನುಮಪ್ಪನಮಟ್ಟಿ : ಕೊಟ್ಟೂರು ಪಾದಯಾತ್ರಿಗಳಿಗೆ ಪ್ರಸಾದ ವ್ಯವಸ್ಥೆ



ದಾವಣಗೆರೆ, ಫೆ. 18- ನಾಳೆ ದಿನಾಂಕ 19 ಮತ್ತು 20 ರಂದು ಕೊಟ್ಟೂರಿಗೆ ತೆರಳುವ ಶ್ರೀ ಗುರು ಕೊಟ್ಟೂರೇಶ್ವರ ಸ್ವಾಮಿಯ ಪಾದಯಾತ್ರಿಗಳಿಗೆ ಹರಪನಹಳ್ಳಿ ತಾಲ್ಲೂಕು ಕಂಚಿಕೆರೆ - ಅರಸಿಕೆರೆ ಬಳಿ ಇರುವ ಶ್ರೀಕ್ಷೇತ್ರ ಬಿದ್ದಹನುಮಪ್ಪನಮಟ್ಟಿ ಶ್ರೀ ವೀರಾಂಜ ನೇಯ ಮಹಾಸ್ವಾಮಿ ದೇವಾಲಯದ ಆವರಣದಲ್ಲಿ ದೇವಸ್ಥಾನ ಸಮಿತಿ ಹಾಗೂ ಶ್ರೀ ಬಸವರಾಜ ಗುರೂಜಿಯವರ ಭಕ್ತಾದಿಗಳ ವತಿಯಿಂದ ಪ್ರಸಾದ ವ್ಯವಸ್ಥೆ ಮಾಡಲಾಗಿದೆ.

# ಅಪ್ರಾಪ್ತ ಬಾಲಕ ವಾಹನ ಚಾಲನೆ ಮಾಲೀಕರಿಗೆ 25 ಸಾವಿರ ದಂಡ



ದಾವಣಗೆರೆ, ಫೆ.18- ಅಪ್ರಾಪ್ತ ಬಾಲಕ ಬೈಕ್ ಚಲಾಯಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ವಾಹನದ ಮಾಲೀಕರಿಗೆ ಇಲ್ಲಿನ 3ನೇ ಎಎಸ್‌ಸಿಜೆ ಮತ್ತು ಜೆಎಂಎಫ್‌ಸಿ ನ್ಯಾಯಾಲಯವು 25 ಸಾವಿರ ರೂ.ಗಳ ದಂಡ ವಿಧಿಸಿದೆ.

ದಾವಣಗೆರೆ ದಕ್ಷಿಣ ಸಂಚಾರ ಠಾಣೆ ಪಿಎಸ್‌ಐ ನಿರ್ಮಲ ಡಿ.ಹೆಚ್ ಅವರು ಇದೇ ದಿನಾಂಕ 13ರಂದು ನಗರದ ಡೆಂಟಲ್ ಕಾಲೇಜು ರಸ್ತೆಯಲ್ಲಿ ಕಾರ್ಯಾಚರಣೆ ನಡೆಸುವ ವೇಳೆ ಶಿರಸ್ತ್ರಾಣ ಇಲ್ಲದ ಬೈಕ್ ಸವಾರನ್ನು ನಿಲ್ಲಿಸಿ ತಪಾಸಣೆ ಮಾಡಿದ ವೇಳೆ ಅಪ್ರಾಪ್ತ ವಯಸ್ಸಿನ ಬಾಲಕನೆಂದು ತಿಳಿದು ಬಂದಿರುತ್ತದೆ.

ಸರಸ್ವತಿ ನಗರದ ಪ್ರದೀಪ್ ಎಂಬುವವರಿಗೆ ಸೇರಿದ್ದ ಹೀರೋ ಹೊಂಡಾ ಸ್ಪ್ಲೆಂಡರ್ ಬೈಕನ್ನು ವಶ ಪಡಿಸಿಕೊಂಡಿದ್ದು, ಈ ಬಗ್ಗೆ ದಕ್ಷಿಣ ಸಂಚಾರ ಠಾಣೆಯಲ್ಲಿ ಬೈಕ್ ಮಾಲೀಕರ ವಿರುದ್ಧ ಪ್ರಕರಣ ದಾಖಲಾಗಲಿ, ನ್ಯಾಯಾಲಯಕ್ಕೆ ದೋಷಾರೋಪಣೆ ಸಲ್ಲಿಸಿದ್ದರು.

ಈ ಕುರಿತು ನ್ಯಾಯಾಧೀಶರು ದಂಡ ವಿಧಿಸಿ ಆದೇಶಿಸಿದ್ದಾರೆ. ಈ ಮೂಲಕ ನ್ಯಾಯಾಲಯವು ಅಪ್ರಾಪ್ತರಿಗೆ ವಾಹನ ನೀಡದಂತೆ ಪೋಷಕರಿಗೆ ಎಚ್ಚರಿಕೆ ನೀಡಿದೆ.

## ಆಟೋ ಚಾಲಕನ ಪ್ರಾಮಾಣಿಕತೆಗೆ ಶ್ಲಾಘನೆ



ದಾವಣಗೆರೆ, ಫೆ.18- ನಗರದ ಆಟೋರಿಕ್ಷಾವೊಂದರಲ್ಲಿ ಪ್ರಯಾಣಿಕನೊಬ್ಬ ಬಿಟ್ಟು ಹೋಗಿದ್ದ ಬ್ಯಾಗನ್ನು, ಆಟೋ ಚಾಲಕ ಪ್ರಾಮಾಣಿಕತೆಯಿಂದ ಪೊಲೀಸರ ಮುಖೇನ ವಾರಸುದಾರರಿಗೆ ತಲುಪಿಸಿದ್ದಾನೆ.

ಇದೇ ದಿನಾಂಕ 15ರಂದು ಕಕ್ಕರಗೊಳ್ಳದ ಸುನೀಲ್ ಎಂಬುವವರು, ಆವರಗೆರೆಯ ಮಂಜುನಾಥ್ ಅವರ ಆಟೋದಲ್ಲಿ ಪ್ರಯಾಣಿಸಿ, ಬ್ಯಾಗನ್ನು ಆಟೋದಲ್ಲೇ ಮರೆತು ಹೋಗಿರುತ್ತಾರೆ. ಇದನ್ನರಿತ ಆಟೋ ಚಾಲಕ ಮಂಜುನಾಥ್ ಅವರು, ಇಲ್ಲಿನ ಆಜಾದ್ ನಗರ ಪೊಲೀಸ್ ಠಾಣೆಗೆ ತಂದು ಕೊಟ್ಟು ಪ್ರಾಮಾಣಿಕತೆ ಮೆರೆದಿದ್ದಾನೆ.

ಪಿಎಸ್‌ಐ ಇಮ್ತಿಯಾಜ್, ಮಹಮ್ಮದ್ ಅಲ್ತಾಫ್ ಹಾಗೂ ಸಿಬ್ಬಂದಿ ಆಟೋ ಚಾಲಕನ ಪ್ರಾಮಾಣಿಕತೆಯನ್ನು ಶ್ಲಾಘಿಸಿದ್ದಾರೆ.

## ರಸ್ತೆ ಸುರಕ್ಷತಾ ಜಾಗೃತಿ ಮಾಸಾಚರಣೆ



ದಾವಣಗೆರೆ, ಫೆ.18- ನಿಟ್ಟುವಳ್ಳಿ ಸರ್ಕಾರಿ ಪ್ರೌಢ ಶಾಲೆಯಲ್ಲಿ ರಸ್ತೆ ಸುರಕ್ಷತಾ ಜಾಗೃತಿ ಮಾಸಾಚರಣೆ ಸಮಾರೋಪದ ನಿಮಿತ್ತ ಶಾಲೆಯ ಮಕ್ಕಳಿಗೆ ಈಚೆಗೆ ಚಿತ್ರಕಲೆ ಸ್ಪರ್ಧೆ ಏರ್ಪಡಿಸಲಾಗಿತ್ತು. ಇದೇ ವೇಳೆ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಪ್ರಾದೇಶಿಕ ಸಾರಿಗೆ ಅಧಿಕಾರಿ ಸಿ.ಎಸ್. ಪ್ರಮುತೇಶ್, ಸುರೇಶ್, ಹಿರಿಯ ಮೋಟಾರ್ ವಾಹನ ನಿರೀಕ್ಷಕ ಸಿ. ಸುನೀಲ್, ಆರ್.ಟಿ.ಓ ಕಚೇರಿಯ ರಮೇಶ್ ಕುಮಾರ್, ಅಧೀಕ್ಷಕ ಶಶಿಧರ್, ಎಸ್.ಡಿ.ಎಂ.ಸಿ ಸದಸ್ಯ ವೆಂಕಟೇಶ್ ಇದ್ದರು.

# ಜಿಲ್ಲೆಯಲ್ಲಿ ಬೇಸಿಗೆ ಭತ್ತದ ಬೆಳೆ ನಾಟಿ ಆರಂಭ ಬೆಳೆಯಲ್ಲಿ ಗುಣಿಗಳ ಸಂಖ್ಯೆ, ನಾಟಿ ಅಂತರ ಎಷ್ಟಿರಬೇಕು ?

ದಾವಣಗೆರೆ,ಫೆ.18- ಜಿಲ್ಲೆಯಾದ್ಯಂತ ಪ್ರಸಕ್ತ ಬೇಸಿಗೆ ಹಂಗಾಮಿನ ಭತ್ತದ ನಾಟಿ ಕಾರ್ಯ ಪ್ರಾರಂಭವಾಗಿದ್ದು, ಗುಣಿಗಳ ಸಂಖ್ಯೆ ಮತ್ತು ನಾಟಿ ಅಂತರ ಹೆಚ್ಚು ಕಡಿಮೆಯಾದರೆ ಇಳುವರಿಯೂ ಹೆಚ್ಚು ಕಡಿಮೆಯಾಗುತ್ತದೆ. ಇದು ತಳಿಯ ಅವಧಿ ಹಾಗೂ ತೆಂಡೆಯೊಡೆಯುವ ಶಕ್ತಿ ಮತ್ತು ಮಣ್ಣಿನ ಫಲವತ್ತತೆ, ಮುಂತಾದ ಅಂಶಗಳನ್ನು ಅವಲಂಬಿಸಿರುತ್ತದೆ.

ಗುಣಿಗಳ ಸಂಖ್ಯೆ ಫಲವತ್ತತೆ ಹೆಚ್ಚಾಗಿರುವ ಭೂಮಿಯಲ್ಲಿ ಒಂದು ಗುಣಿಗೆ 2 ಪೈರುಗಳಂತೆ, ಫಲವತ್ತತೆ ಸಾಧಾರಣವಾಗಿದ್ದರೆ 2 ರಿಂದ 4 ಪೈರುಗಳನ್ನು ಪ್ರತಿ ಗುಣಿಗೆ 5 ಸೆಂ. ಮೀ. ಆಳಕ್ಕಿಂತ ಹೆಚ್ಚಾಗದಂತೆ ಸಸಿಗಳನ್ನು ನಾಟಿ ಮಾಡಬೇಕು.

ವಯಸ್ಸಾದ ಪೈರನ್ನು ನಾಟಿ ಮಾಡುವುದು ಅನಿವಾರ್ಯವಾದಾಗ ಮತ್ತು ಕ್ಷಾರಯುಕ್ತ ಮಣ್ಣಿನಲ್ಲಿ ನಾಟಿ ಮಾಡುವಾಗ ಸಾಧಾರಣವಾಗಿ

ರೈತರಿಗೆ ಕೃಷಿ ಇಲಾಖೆ ಸಲಹೆ



ನಾಟಿ ಮಾಡುವುದಕ್ಕಿಂತ ಹೆಚ್ಚು ಸಾಂದ್ರತೆಯಲ್ಲಿ ಅಂದರೆ 4 ರಿಂದ 5 ಸಸಿಗಳನ್ನು ಒಂದು ಗುಣಿಗೆ 5 ಸೆಂ. ಮೀ. ಆಳಕ್ಕಿಂತ ಹೆಚ್ಚಾಗದಂತೆ ಸಸಿಗಳನ್ನು ನಾಟಿ ಮಾಡಬೇಕು. ಹೀಗೆ ನಾಟಿ ಮಾಡುವುದರಿಂದ ಇಳುವರಿ ಕುಗ್ಗುವುದನ್ನು ಕನಿಷ್ಠ ಮಟ್ಟಕ್ಕೆ ಇಳಿಸಬಹುದು.

**ನಾಟಿಯ ಅಂತರ:** ದೀರ್ಘಾವಧಿ ಹಾಗೂ ಮಧ್ಯಮಾವಧಿ ತಳಿಗಳಲ್ಲಿ ಸಾಲಿನಿಂದ ಸಾಲಿಗೆ 20 ಸೆಂ. ಮೀ. ಹಾಗೂ ಗಿಡದಿಂದ ಗಿಡಕ್ಕೆ 10 ಸೆಂ. ಮೀ. ಅಂತರದಲ್ಲಿ ಪ್ರತಿ ಚದರ ಮೀಟರ್ ಪ್ರದೇಶಕ್ಕೆ 45 ರಿಂದ 50 ಗುಣಿಗಳು ಬರುವಂತೆ ನಾಟಿ ಮಾಡಬೇಕು. ಕಡಿಮೆ ಅವಧಿ ತಳಿಗಳಲ್ಲಿ ತೆಂಡೆಯೊಡೆಯುವ ಶಕ್ತಿ ಕಡಿಮೆಯಿರುವುದರಿಂದ ಹೆಚ್ಚು ಸಾಂದ್ರತೆಯಲ್ಲಿ ಅಂದರೆ ಸಾಲಿನಿಂದ ಸಾಲಿಗೆ 15 ಸೆಂ. ಮೀ. ಹಾಗೂ ಗಿಡದಿಂದ ಗಿಡಕ್ಕೆ 10 ಸೆಂ. ಮೀ. ಅಂತರದಲ್ಲಿ ಪ್ರತಿ ಚದರ ಮೀಟರ್ ಪ್ರದೇಶಕ್ಕೆ 65 ರಿಂದ 68 ಗುಣಿಗಳು ಬರುವಂತೆ ನಾಟಿ ಮಾಡಬೇಕು.

ಯಂತ್ರಚಾಲಿತ ನಾಟಿ, ಕೂರಿಗೆ ಬಿತ್ತನೆಯಿಂದ ಕೃಷಿ ವೆಚ್ಚಗಳನ್ನು ಗಣನೀಯವಾಗಿ ಕಡಿಮೆ ಮಾಡಬಹುದಾಗಿ ರುವುದರಿಂದ ತಮ್ಮ ತಮ್ಮ ರೈತರನ್ನು ಸಂಪರ್ಕ ಕೇಂದ್ರ ಅಥವಾ ಸಹಾಯಕ ಕೃಷಿ ನಿರ್ದೇಶಕರ ಕಛೇರಿಗೆ ಭೇಟಿ ನೀಡಿ ಮಾಹಿತಿ ಪಡೆಯುವಂತೆ ಜಂಟಿ ಕೃಷಿ ನಿರ್ದೇಶಕರು ತಿಳಿಸಿದ್ದಾರೆ.

# ಕುರುವತ್ತಿ ಬಸವೇಶ್ವರ ದೇವಸ್ಥಾನದ ಕಳಸಾರೋಹಣ



ದಾವಣಗೆರೆ, ಫೆ.18- ಇಲ್ಲಿನ ಕೆಟಿಜೆ ನಗರದ 1ನೇ ಮುಖ್ಯ ರಸ್ತೆ, 12ನೇ ತಿರುವಿನಲ್ಲಿರುವ ಕುರುವತ್ತಿ ಬಸವೇಶ್ವರ ಸ್ವಾಮಿ ದೇವಸ್ಥಾನದ ಕಳಸಾರೋಹಣವು ಹಿರೇಕುರುವತ್ತಿ ಹಿರೇಮಠದ ಶ್ರೀ ಸಿದ್ಧನಂದೀಶ್ವರ ಶಿವಾಚಾರ್ಯ ಶ್ರೀಗಳ ಸಾನ್ನಿಧ್ಯದಲ್ಲಿ ಸೋಮವಾರ ನೆರವೇರಿತು.

ಈ ವೇಳೆ ಕುರುವತ್ತಿ ಬಸವೇಶ್ವರ ದೇವಸ್ಥಾನ ಸಮಿತಿಯ ಪದಾಧಿಕಾರಿಗಳು ಹಾಗೂ ಪ್ರಧಾನ ಅರ್ಚಕ ಎಂ.ಸಿ. ಚಂದ್ರಶೇಖರ್ ಇದ್ದರು.

# ಶಿರಾ-ಬಡವನಹಳ್ಳಿ ಬಳಿಯ ರಾಷ್ಟ್ರೀಯ ಹೆದ್ದಾರಿ-59 ಅಭಿವೃದ್ಧಿಗೆ ಹಸಿರು ನಿಶಾನೆ

ಚಿತ್ರದುರ್ಗ, ಫೆ.18- ಶಿರಾ-ಬಡವನಹಳ್ಳಿ ಬಳಿಯ ರಾಷ್ಟ್ರೀಯ ಹೆದ್ದಾರಿ-59 ಅನ್ನು ಅಭಿವೃದ್ಧಿ ಪಡಿಸಲು 562 ಕೋಟಿ ಅನುದಾನ ಕೋರಿ ಸಮಗ್ರ ಯೋಜನಾ ವರದಿಯನ್ನು ಹೆದ್ದಾರಿ ವಿಭಾಗದವರು, ಹೆದ್ದಾರಿ ಸಚಿವಾಲಯಕ್ಕೆ ಸಲ್ಲಿಸಿದ್ದಾರೆ.

ದೆಹಲಿಯಲ್ಲಿ ಈಚೆಗೆ ನಡೆದ ಹಣಕಾಸು ಸ್ಥಾಯಿ ಸಮಿತಿ ಸಭೆಯಲ್ಲಿ ಚಿತ್ರದುರ್ಗ ಲೋಕಸಭಾ ಕ್ಷೇತ್ರ ವ್ಯಾಪ್ತಿಗೊಳಪಡುವ ಈ ಪ್ರಸ್ತಾವನೆಗೆ ಸಮ್ಮತಿ ನೀಡಲಾಗಿದೆ. ಶೀಘ್ರದಲ್ಲೇ ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರು ಆಡಳಿತಾತ್ಮಕ ಅನುಮೋದನೆ ನೀಡಲಿದ್ದಾರೆ. ಅಭಿವೃದ್ಧಿ ಕಾರ್ಯಕ್ಕೆ ಸಮ್ಮತಿಸಿದ ಹಣಕಾಸು ಸ್ಥಾಯಿ ಸಮಿತಿ ಅಧ್ಯಕ್ಷರು, ನೀತಿ ಆಯೋಗದ ಸಲಹೆಗಾರರಿಗೆ, ಹೆದ್ದಾರಿ ಸಚಿವಾಲಯದ ಅಧಿಕಾರಿಗಳಿಗೆ ಹಾಗೂ ಇಲಾಖೆಯ ಕೇಂದ್ರ ಮತ್ತು ರಾಜ್ಯ ಮಟ್ಟದ ಅಧಿಕಾರಿಗಳಿಗೆ ಸಂಸದ ಗೋವಿಂದ ಕಾರಜೋಳ ಧನ್ಯವಾದ ತಿಳಿಸಿದ್ದಾರೆ.

## ಹಂದಿ ಸಾಕಾಣಿಕೆ ತರಬೇತಿ

ದಾವಣಗೆರೆ, ಫೆ. 18 - ಪಶುಪಾಲನ ಮತ್ತು ವೈದ್ಯಕೀಯ ಸೇವಾ ಇಲಾಖೆಯ ವತಿಯಿಂದ ನಗರದ ಪಶು ಆಸ್ಪತ್ರೆ ಆವರಣದಲ್ಲಿರುವ ಪಶು ವೈದ್ಯಕೀಯ ತರಬೇತಿ ಕೇಂದ್ರದಲ್ಲಿ ಇದೇ ದಿನಾಂಕ 20 ಮತ್ತು 21 ರಂದು ಹಂದಿ ಸಾಕಾಣಿಕೆ ತರಬೇತಿಯನ್ನು ನೀಡಲಾಗುವುದು. ವಿವರಕ್ಕೆ ಸಂಪರ್ಕಿಸಿ : ದೂರವಾಣಿ 08192 233787.

# ಸಂಚಾರ ನಿಯಮ ಉಲ್ಲಂಘನೆ : 4.5 ಲಕ್ಷ ರೂ.ಗಳ ದಂಡ ವಸೂಲಿ

ದಾವಣಗೆರೆ, ಫೆ.18- ಸಂಚಾರ ನಿಯಮ ಉಲ್ಲಂಘಿಸಿದ ಒಟ್ಟು 750 ಪ್ರಕರಣಗಳಿಗೆ ಸಂಬಂಧಿಸಿದಂತೆ ದಕ್ಷಿಣ ಹಾಗೂ ಉತ್ತರ ಸಂಚಾರ ಪೊಲೀಸ್ ಠಾಣೆಯ ಅಧಿಕಾರಿಗಳು ಬಾಕಿ ಉಳಿಸಿಕೊಂಡಿದ್ದ 4.5 ಲಕ್ಷ ರೂ.ಗಳ ದಂಡವನ್ನು ಕಟ್ಟಿಸಿರುತ್ತಾರೆ.

**2025ರ ಜ.1ರಿಂದ ಫೆ.17ರ ವರೆಗೆ ಕ್ಯಾಮೆರಾಗಳಲ್ಲಿ ಸೆರೆಯಾದ ಒಟ್ಟು 1,433 ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳಲ್ಲಿ ಒಟ್ಟು 8,28,000 ರೂ.ಗಳ ದಂಡ ಕಟ್ಟಿಸಲಾಗಿದೆ.**

ನಗರದ ಪ್ರಮುಖ ರಸ್ತೆಗಳಲ್ಲಿ ಸಂಚಾರಿ ನಿಯಮ ಉಲ್ಲಂಘಿಸಿದ ದೃಶ್ಯ ಸಿ.ಸಿ ಕ್ಯಾಮೆರಾಗಳಲ್ಲಿ ಸೆರೆ ಆಗಿ ಇ-ಚಲನ್ ಹೊರಡಿಸಿದ್ದರೂ ದಂಡ ಪಾವತಿಸದೇ ಇರುವ ಪ್ರಕರಣಗಳ ಪೈಕಿ 10 ಮತ್ತು 10ಕ್ಕಿಂತ ಹೆಚ್ಚು ಚಲನ್ ಉಳಿಸಿಕೊಂಡ 50 ವಾಹನ ಮಾಲೀಕ ಮತ್ತು ಚಾಲಕರನ್ನು ಪತ್ತೆ ಹಚ್ಚಿ ಬಾಕಿ ಇರುವ ದಂಡ ವಸೂಲಿ ಮಾಡಿದ್ದಾರೆ.

ದಕ್ಷಿಣ ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಒಂದೇ ಬೈಕ್ ಮೇಲಿರುವ 38 ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳ ಪೈಕಿ ಒಟ್ಟು 19 ಸಾವಿರ ರೂ.ಗಳ ದಂಡ ಹಾಗೂ ಆಟೋ ವಾಹನದ ಮೇಲಿರುವ 31 ಪ್ರಕರಣಗಳ ಪೈಕಿ 17,500 ರೂ.ದಂಡ ವಸೂಲಿ ಮಾಡಲಾಗಿದೆ.

ಉತ್ತರ ಸಂಚಾರ ಪೊಲೀಸ್ ಠಾಣೆಯಲ್ಲಿ ಒಂದೇ ಬೈಕ್ ಮೇಲಿರುವ 31 ಪ್ರಕರಣಗಳ ಪೈಕಿ ಒಟ್ಟು 16,500 ರೂ.ಗಳ ದಂಡ ಕಟ್ಟಿಸಲಾಗಿರುತ್ತದೆ.

ಈ ವಿಶೇಷ ಕಾರ್ಯಾಚರಣೆಯು ಹೀಗೆ ಮುಂದುವರೆಯಲಿದ್ದು, ಸಂಚಾರ ನಿಯಮ ಉಲ್ಲಂಘಿಸಿ ಇ-ಚಲನ್ ಬಾಕಿ ಉಳಿಸಿಕೊಂಡ ವಾಹನ ಚಾಲಕರು ದಕ್ಷಿಣ ಸಂಚಾರ ಠಾಣೆ ಮತ್ತು ಹೆಡ್ ಪೋಸ್ಟ್ ಆಫೀಸ್‌ನಲ್ಲಿ ಬಂದು ದಂಡ ಪಾವತಿಸಬಹುದಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಮತಿ ಉಮಾ ಪ್ರಶಾಂತ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಭಾರತದ ಇ.ವಿ. ಮಾರುಕಟ್ಟೆಗೆ ಟೆಸ್ಲಾ ಪ್ರವೇಶ

ನವದೆಹಲಿ, ಫೆ. 18 - ಅಮೆರಿಕದ ಎಲೆಕ್ಟ್ರಿಕ್ ಕಾರು ಉತ್ಪಾದನಾ ಕಂಪನಿಯಾದ ಟೆಸ್ಲಾ ಭಾರತದಲ್ಲಿ ಉದ್ಯಮ ನಿರ್ವಹಣೆ ಹಾಗೂ ಗ್ರಾಹಕರ ಸೇವೆ ಸೇರಿದಂತೆ ಹಲವಾರು ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆ ಆರಂಭಿಸಿದೆ. ಇದು ಭಾರತದ ಮಾರುಕಟ್ಟೆಗೆ ಟೆಸ್ಲಾ ಪ್ರವೇಶಿಸುವ ಸಂಕೇತವಾಗಿದೆ.

ಮುಂಬೈ ವಲಯದಲ್ಲಿ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳಲಾಗುವುದು ಎಂದು ಕಂಪನಿಯ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಟೆಸ್ಲಾ ಕಂಪನಿಯ ಸ್ಥಾಪಕ ಹಾಗೂ ಉದ್ಯಮಿ ಎಲಾನ್ ಮಸ್ಕ್ ಅವರನ್ನು ಪ್ರಧಾನ ಮಂತ್ರಿ ನರೇಂದ್ರ ಮೋದಿ ಇತ್ತೀಚೆಗೆ ಅಮೆರಿಕದಲ್ಲಿ ಭೇಟಿ ಮಾಡಿದ್ದರು.

ಕಳೆದ ವರ್ಷ ಏಪ್ರಿಲ್ ತಿಂಗಳಲ್ಲಿ ಭಾರತಕ್ಕೆ ಮಸ್ಕ್ ಭೇಟಿ ನೀಡಬೇಕಿತ್ತು. ಆದರೆ ಕೊನೆ ಕ್ಷಣದಲ್ಲಿ ಭೇಟಿಯನ್ನು ಮುಂದೂಡಲಾಗಿತ್ತು.

ಇತ್ತೀಚೆಗಷ್ಟೇ ಕೇಂದ್ರ ಸರ್ಕಾರ ಹೊಸ ಎಲೆಕ್ಟ್ರಿಕ್ ವಾಹನ ನೀತಿಯನ್ನು ರೂಪಿಸಿತ್ತು. ಆ ಮೂಲಕ ಭಾರತದಲ್ಲಿ 500 ದಶಲಕ್ಷ ಡಾಲರ್ ಹೂಡಿಕೆ ಮಾಡುವ ಉದ್ಯಮಗಳಿಗೆ ಆಮದು ತೆರಿಗೆಯಲ್ಲಿ ವಿನಾಯಿತಿ ನೀಡಲಾಗುವುದು ಎಂದು ತಿಳಿಸಲಾಗಿತ್ತು. ನೂತನ ನೀತಿಗೆ ಸಂಬಂಧಿಸಿದಂತೆ ನಡೆಸಲಾದ ಸಮಾಲೋಚನೆಯಲ್ಲಿ ಟೆಸ್ಲಾ ಪ್ರತಿನಿಧಿ ಸಹ ಪಾಲ್ಗೊಂಡಿದ್ದರು. ಭಾರತದಲ್ಲಿ ತನ್ನ ವಾಹನಗಳನ್ನು ಮಾರಲು ಆಮದು ತೆರಿಗೆ ಕಡಿಮೆ ಮಾಡುವಂತೆ 2022 ರಲ್ಲಿ ಮಸ್ಕ್ ಒತ್ತಾಯಿಸಿದ್ದರು. ಟೆಸ್ಲಾ ಕಾರುಗಳ ಮಾರಾಟ ಹಾಗೂ ಸೇವೆಗೆ ಅನುಮತಿ ನೀಡದ ಹೊರತು ಭಾರತದಲ್ಲಿ ಕಾರುಗಳ ಉತ್ಪಾದನೆ ಮಾಡುವುದಿಲ್ಲ ಎಂದು ಮಸ್ಕ್ ಹೇಳಿದ್ದರು. ಪ್ರಸಕ್ತ ವಿದೇಶದಲ್ಲಿ ನಿರ್ಮಿತವಾದ ಕಾರುಗಳ ಮೇಲಿನ ಆಮದು ತೆರಿಗೆ ಶೇಕಡಾ 70ರಿಂದ 100ರವರೆಗೆ ಇದೆ.

# 5 ವರ್ಷದ ಮಗಳ ಚಿತ್ರದಿಂದ ತಾಯಿ ಹತ್ಯೆ ಬಯಲು

ಝಾನ್ಸಿ,ಫೆ. 18 - ಉತ್ತರ ಪ್ರದೇಶದ ಝಾನ್ಸಿಯ ಶಿವ ಪರಿವಾರ್ ಕಾಲೋನಿಯಲ್ಲಿ ಪತಿಯೋರ್ವ ತನ್ನ ಪತ್ನಿ ಹತ್ಯೆ ಮಾಡಿದ್ದು ಐದು ವರ್ಷದ ಮಗಳು ಬಿಡಿಸಿದ ಚಿತ್ರದಿಂದ ಬಯಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮಹಿಳೆ ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ಗಂಡನ ಮನೆಯವರು ಹೇಳಿಕೆ ನೀಡಿದ್ದರು. ಆದರೆ ಕತ್ತು ಹಿಸುಕಿ ಹತ್ಯೆ ಮಾಡಲಾಗಿದೆ ಎಂದು ಐದು ವರ್ಷದ ಮಗಳು ಹೇಳಿರುವುದಲ್ಲದೆ ಘಟನೆಯನ್ನು ಚಿತ್ರ ಬಿಡಿಸಿ ತೋರಿಸಿರುವುದಾಗಿ ಪೊಲೀಸರು ಹೇಳಿದ್ದಾರೆ.

ಸೋಮವಾರ ಸಂಜೆ ಈ ಘಟನೆ ನಡೆದಿತ್ತು. ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಳ್ಳಲಾಗಿದೆ ಎಂದು ಪ್ರಕರಣ ದಾಖಲಿಸಲಾಗಿತ್ತು. ಆದರೆ ಮಹಿಳೆಯ ಕುಟುಂಬದವರು ಹತ್ಯೆ ನಡೆದಿದೆ ಎಂದು ಆರೋಪಿಸಿದ್ದರು ಎಂದು ಪೊಲೀಸ್ ವರಿಷ್ಠಾಧಿಕಾರಿ ಜ್ಞಾನೇಂದ್ರ ಕುಮಾರ್ ಸಿಂಗ್ ತಿಳಿಸಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಗಂಡನ ಕಡೆಯವರನ್ನು ಬಂಧಿಸುವವರೆಗೆ ಮರಣೋತ್ತರ ಪರೀಕ್ಷೆಗೆ ಅವಕಾಶ ನೀಡುವುದಿಲ್ಲ ಎಂದು ಮಹಿಳೆಯ ಕುಟುಂಬದವರು ಪಟ್ಟು ಹಿಡಿದಿದ್ದರು.

ಈ ಬಗ್ಗೆ ಮಾಹಿತಿ ದೊರೆತಾಗ ಪೊಲೀಸರು ಮಧ್ಯ ಪ್ರವೇಶಿಸಿದರು. ಎರಡು ಕಡೆಯವರನ್ನು ಸಮಾಧಾನಗೊಳಿಸಿ ಮೃತ ದೇಹವನ್ನು ಅಂತ್ಯಕ್ರಿಯೆಗೆ ಕಳಿಸಿದರು. ದೂರಿನ ನಂತರ ಪ್ರಕರಣ ದಾಖಲಿಸಿ ಪ್ರಾಥಮಿಕ ಆರೋಪಿಯಾದ ಪತಿ ಸಂದೀಪ್ ಬುಧೋಲಿಯ ಎಂಬಾತನನ್ನು ಬಂಧಿಸಲಾಗಿದೆ ಎಂದು ಸಿಂಗ್ ತಿಳಿಸಿದ್ದಾರೆ.

28 ವರ್ಷದ ಸೋನಾಲಿ ಅವರು ಆರು ವರ್ಷಗಳ ಹಿಂದೆ ಸಂದೀಪ್ ಬುಧೋಲಿಯ ಜೊತೆ ಮದುವೆಯಾಗಿದ್ದರು.

ಮದುವೆಯ ನಂತರದಿಂದಲೇ ವರದಕ್ಷಿಣೆ ಕಿರುಕುಳ ಆರಂಭವಾಗಿತ್ತು. ಈ ಬಗ್ಗೆ ಗಂಡನ ಮನೆಯವರ ವಿರುದ್ಧ ಪ್ರಕರಣ ಸಹ ದಾಖಲಿಸಲಾಗಿತ್ತು. ಎರಡು ವರ್ಷಗಳಿಂದ ಸೋನಾಲಿ ತಮ್ಮ ತವರು ಮನೆಯಲ್ಲಿ ನೆಲೆಸಿದ್ದರು. ಸಂಧಾನದ ನಂತರ ಅವರನ್ನು ಮತ್ತೆ ಝಾನ್ಸಿಗೆ ಕರೆದೊಯ್ಯಲಾಗಿತ್ತು ಎಂದು ಮಧ್ಯಪ್ರದೇಶದ ನಿವಾಸಿಯಾಗಿರುವ ಸೋನಾಲಿ ತಂದೆ ಸಂಜೀವ್ ತ್ರಿಪಾಠಿ ತಿಳಿಸಿದ್ದಾರೆ.

ಸೋನಾಲಿ ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ಸೋಮವಾರ ತಮಗೆ ತಿಳಿಸಲಾಗಿತ್ತು. ನಾವು ಸ್ಥಳಕ್ಕೆ ಬಂದಾಗ 5 ವರ್ಷದ ಮೊಮ್ಮಗಳು ದರ್ಶಿಕ ಕಣ್ಣೀರಿಡುತ್ತಾ ತಂದೆಯೇ ತನ್ನ ತಾಯಿಯ ಬಡಿದು ಕತ್ತು ಹಿಸುಕಿರುವುದಾಗಿ ತಿಳಿಸಿದಳು. ತಂದೆಯ ಕೃತ್ಯವನ್ನು ಚಿತ್ರ ಬಿಡಿಸಿ ತೋರಿಸಿದಳು ಎಂದು ತಿಪಾಠಿ ಹೇಳಿದ್ದಾರೆ. ಈ ಘಟನೆಗೆ ಸಂಬಂಧಿಸಿದಂತೆ ಸಂದೀಪ್ ಬುಧೋಲಿಯ ತಾಯಿ ವಿನಿತ ಮತ್ತಿತರೆ ವಿರುದ್ಧ ಪ್ರಕರಣ ದಾಖಲಿಸಲಾಗಿದ್ದು ತನಿಖೆ ಮುಂದುವರೆದಿದೆ.

## ನಗರದಲ್ಲಿ ಇಂದು ಸಾಂಸ್ಕೃತಿಕ ಸ್ಪರ್ಧೆ

ವನಿತಾ ಸಮಾಜದ ವತಿಯಿಂದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ವನಿತಾ ಸಮಾಜದಲ್ಲಿ ಇಂದಿನಿಂದ ಇದೇ ದಿನಾಂಕ 22ರ ವರೆಗೆ ವಿವಿಧ ಸಾಂಸ್ಕೃತಿಕ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ ಎಂದು ಪದ್ಮಪ್ರಕಾಶ್ ತಿಳಿಸಿದ್ದಾರೆ.

ಇಂದು ಮಧ್ಯಾಹ್ನ 2.30ಕ್ಕೆ 'ಪ್ರಸ್ತುತ ಸ್ಥಿತಿಯಲ್ಲಿ ಹೆಣ್ಣು ಮದುವೆ ಮತ್ತು ಮಗು' ಎಂಬ ವಿಷಯಕ್ಕೆ ಸಂಬಂಧಿಸಿದಂತೆ ಕನ್ನಡ ಭಾಷಣ ಸ್ಪರ್ಧೆ ನಡೆಯಲಿದೆ. ನಾಳೆ ಗುರುವಾರ ಸಂಜೆ 4.30ಕ್ಕೆ ಪುರಂದರ ದಾಸರ ಪದಗಳ ಸ್ಪರ್ಧೆ ನಡೆಯಲಿದೆ ದಿನಾಂಕ 21ರ ಶುಕ್ರವಾರ ಬೆಳಗ್ಗೆ 11ಕ್ಕೆ ಯೋಗಾಸನ ಸ್ಪರ್ಧೆ ನಡೆಯಲಿದೆ ಮತ್ತು ದಿನಾಂಕ 22ರ ಶನಿವಾರ ಮಧ್ಯಾಹ್ನ 2.30ಕ್ಕೆ ರಸ ಪ್ರಶ್ನೆ ಸ್ಪರ್ಧೆ ನಡೆಯಲಿದೆ. ವಿವರಕ್ಕೆ ಸಂಪರ್ಕಿಸಿ : 9449811407.

# ಜಗಳೂರು : ಬೀದಿಬದಿ ವ್ಯಾಪಾರಿಗಳ ಪ್ರತಿಭಟನೆ



ಜಗಳೂರು, ಫೆ.18 - ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಆಗ್ರಹಿಸಿ ಸ್ಥಿರ ಹಾಗೂ ಸಂಚಾರಿ ಬೀದಿಬದಿ ಚಿಲ್ಲರೆ ವ್ಯಾಪಾರಸ್ಥರ ಸಂಘದ ತಾಲ್ಲೂಕು ಸಮಿತಿ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಮಂಗಳವಾರ ಪಟ್ಟಣದ ಪ್ರವಾಸಿ ಮಂದಿರದಿಂದ ಹೊರಟ ಪ್ರತಿಭಟನಾಕಾರರು, ಮಹಾತ್ಮಗಾಂಧಿ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿ, ಧಿಕ್ಕಾರದ ಘೋಷಣೆ ಕೂಗುತ್ತಾ ತಾಲ್ಲೂಕು ಕಛೇರಿ ಮುಂಭಾಗ ಜಮಾಯಿಸಿ ತಹಶೀಲ್ದಾರ್ ಸೈಯದ್ ಕಲೀಂ ಉಲ್ಲಾ ಅವರಿಗೆ ಲಿಖಿತ ಮನವಿ ಸಲ್ಲಿಸಿದರು.

ಸಂಘಟನೆ ಜಿಲ್ಲಾಧ್ಯಕ್ಷ ಇಸ್ಮಾಯಿಲ್ ಮಾತನಾಡಿ, 2014 ರ ಬೀದಿಬದಿ ವ್ಯಾಪಾರಸ್ಥರ ನಿಯಂತ್ರಣ ಹಾಗೂ ಸಂರಕ್ಷಣಾ ಕಾಯ್ದೆಯನ್ನು ಸಮರ್ಪಕವಾಗಿ ಜಾರಿಗೊಳಿಸಬೇಕು. ಬೀದಿ ಬದಿ ವ್ಯಾಪಾರಸ್ಥರಿಗೆ ಸ್ಮಾರ್ಟ್ ಕಾರ್ಡ್ ನೀಡಬೇಕು. ಯಾವುದೇ ಕಾರಣಕ್ಕೂ ಒಕ್ಕಲೆಬ್ಬಿಸಬಾರದು, ಪಟ್ಟಣದ ಮಧ್ಯಭಾಗದಲ್ಲಿ ಮಾರುಕಟ್ಟೆ ಸ್ಥಾಪಿಸಬೇಕು. ಜಕಾತಿ ಹಣವನ್ನು ಪಟ್ಟಣ ಪಂಚಾಯಿತಿಯೇ ಪಡೆಯಬೇಕು. ವ್ಯಾಪಾರಸ್ಥರ ಸಂಖ್ಯೆಗೆ ಅನುಗುಣವಾಗಿ ಜಕಾತಿ ಮೊತ್ತವನ್ನು ನಿಯಂತ್ರಿಸಬೇಕು. ಜಕಾತಿ ಹಣ ಪಾವತಿಗೆ ರಸೀದಿ ನೀಡಬೇಕು ಎಂದು ಆಗ್ರಹ ಪಡಿಸಿದರು.

ಮಳಿಗೆ ಸಂಕೀರ್ಣದಲ್ಲಿ ವ್ಯಾಪಾರಸ್ಥರಿಗೆ ಶೌಚಾಲಯ, ಬೆಳಕಿನ ವ್ಯವಸ್ಥೆ, ಕುಡಿಯುವ ನೀರು ಅಗತ್ಯ ಮೂಲ ಸೌಕರ್ಯ ಒದಗಿಸಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಸಂಘಟನೆ ಜಿಲ್ಲಾ ಕಾರ್ಯದರ್ಶಿ ಕೆ. ಭಾರತಿ, ತಾಲ್ಲೂಕು ಅಧ್ಯಕ್ಷೆ ಮಂಜಮ್ಮ, ಪದಾಧಿಕಾರಿಗಳಾದ ತಿಪ್ಪಮ್ಮ, ಜಯ್ಯಣ್ಣ, ಎರ್ರಿಸ್ವಾಮಿ, ಕೃಷ್ಣಪ್ಪ, ಮೆಹಬೂಬ್ ಸಾಬ್, ಅನ್ವರ್, ಜಗದೀಶ್, ತಿಪ್ಪೇಸ್ವಾಮಿ ಸೇರಿದಂತೆ, ನೂರಾರು ಜನ ಬೀದಿಬದಿ ವ್ಯಾಪಾರಿಗಳು ಭಾಗವಹಿಸಿದ್ದರು.

# ಹೊನ್ನಾಳಿ, ಶಾಲೆ-ಕಾಲೇಜು ಬಳಿ ಗುಟ್ಕಾ-ತಂಬಾಕು ಮಾರಾಟ : ಪ್ರಕರಣ ದಾಖಲು

ಹೊನ್ನಾಳಿ, ಫೆ.18- ಪಟ್ಟಣದ ಶಾಲಾ-ಕಾಲೇಜು ಆವರಣದ 100 ಮೀಟರ್ ವಿಸ್ತೀರ್ಣ ವ್ಯಾಪ್ತಿಯ ಅಂಗಡಿಗಳಲ್ಲಿ ಗುಟ್ಕಾ ಮತ್ತು ತಂಬಾಕು ಮಾರಾಟ ಮಾಡುವವರ ಮೇಲೆ ಪೊಲೀಸ್ ನಿರೀಕ್ಷಕ ಸುನೀಲ್‌ಕುಮಾರ್ ಅವರು ಸೋಮವಾರ ದಾಳಿ ಮಾಡಿ 45 ಪ್ರಕರಣಗಳನ್ನು ದಾಖಲಿಸಿ, 4500/- ರೂ.ಗಳ ದಂಡ ವಿಧಿಸಿದ್ದಾರೆ. ಈ ಸಂದರ್ಭದಲ್ಲಿ ಪಿಎಸ್‌ಐ ಮೊಹಮ್ಮದ್ ಸೈಫುದ್ದೀನ್, ನಿರ್ಮಲ ಮತ್ತು ಸಿಬ್ಬಂದಿ ವರ್ಗದವರಿದ್ದರು.

# ವೃದ್ಧೆಯ ಸರಗಳ್ಳತನ : ಬಂಧನ

ಮಲೇಬೆನ್ನೂರು, ಫೆ.18- ಕೊಕ್ಕನೂರು ಗ್ರಾಮದ ವೃದ್ಧೆಯ ಕೊರಳಲ್ಲಿದ್ದ ಮಾಂಗಲ್ಯ ಸರ ಕಿತ್ತೊಯ್ದಿದ್ದ ಆರೋಪಿಯನ್ನು ಮಲೇಬೆನ್ನೂರು ಪೊಲೀಸರು ಬಂಧಿಸಿದ್ದಾರೆ.

ಕೊಕ್ಕನೂರು ಗ್ರಾಮದ ವೀರೇಶಾಚಾರಿ ಬಂಧಿತ ಆರೋಪಿಯಾಗಿದ್ದು, 2 ಲಕ್ಷ ಮೌಲ್ಯದ ಬಂಗಾರದ ಮಾಂಗಲ್ಯ ಸರ ವಶಕ್ಕೆ ಪಡೆಯುವ ಜತೆಗೆ ಈತನನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ.

**ಇ-ಟೆಂಡರ್ ಪ್ರಕಟಣೆ**

15 ನೇ ಹಣಕಾಸು ಯೋಜನೆಯಡಿ 2024-25 ನೇ ಸಾಲಿನ ಹೊನ್ನಾಳಿ ತಾಲ್ಲೂಕಿನ ಯಕ್ಕನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬೀದಿ ದೀಪ ಖರೀದಿ ಮತ್ತು ಕುಡಿಯುವ ನೀರಿನ ಸಾಮಗ್ರಿ ಕೋಡ್-1 RDPR 2024-25/IND 7665 ಮತ್ತು RDPR 2024-25/IND 7671 ಖರೀದಿಸಲು ಕೆಪಿಟಿಟಿ ಕಾಯ್ದೆ 1999-2000 ಇ- ಟೆಂಡರ್ ಮೂಲಕ ಆಹ್ವಾನಿಸಲಾಗಿದ್ದು, ಆಸಕ್ತಿಯುಳ್ಳ ಸರಬರಾಜುದಾರರು ದಿನಾಂಕ: 27-02-2025ರ ಸಂಜೆ 5.00 ರೊಳಗಾಗಿ ವೆಬ್ ಸೈಟ್ ವಿಳಾಸ-https://kppp.karnataka.gov.in/ ಮೂಲಕ ಪಡೆದುಕೊಳ್ಳಬಹುದು, ಹೆಚ್ಚಿನ ವಿವರಗಳಿಗಾಗಿ ಈ ಕಛೇರಿ ಕೆಲಸದ ಅವಧಿಯಲ್ಲಿ ಸಂಪರ್ಕಿಸಬಹುದು.

ಸಹಿ/-
ಅಧ್ಯಕ್ಷರು ಅಧಿಕಾರಿ
ಯಕ್ಕನಹಳ್ಳಿ ಗ್ರಾಮ ಪಂಚಾಯಿತಿ

ಪಂಚಾಯಿತಿ ಅಭಿವೃದ್ಧಿ ಅಧಿಕಾರಿ
ಯಕ್ಕನಹಳ್ಳಿ ಗ್ರಾಮ ಪಂಚಾಯಿತಿ

**AVAILABLE FOR RENT**
**1st Floor Building (2715 Sqft.)**
**N.R. Road, Mandipete, Davangere.**
*Contact Us :*
**M/S R. HANUMANTHAPPA & SON**
Hanumanthappa Buildings,
Poona-Bangalore Road, Davangere - 577 002.
**Ph : 258834/258836 Mob : 94498 28834**

## ಸಿಂಗ್ರಿಹಳ್ಳಿ : ಶ್ರೀ ಸಂತ ಸೇವಾಲಾಲ್ ಜಯಂತಿ




ಹರಪನಹಳ್ಳಿ, ಫೆ. 18- ತಾಲ್ಲೂಕಿನ ಸಿಂಗ್ರಿಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಬಂಜಾರ ಸಮುದಾಯದ ಕುಲದೈವ ಶ್ರೀ ಸಂತ ಸೇವಾಲಾಲ್ ಜಯಂತಿ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಎಸ್‌ಡಿಎಂಸಿ ಅಧ್ಯಕ್ಷ ಸಿ. ಹಾಲೇಶ್, ಸದಸ್ಯರಾದ ಜಿ. ವೆಂಕಟೇಶ್, ಈ. ರಾಮಪ್ಪ, ಮುಖ್ಯೋಪಾಧ್ಯಾಯ ಕೃಷ್ಣಮೂರ್ತಿ, ಶಿಕ್ಷಕ - ಶಿಕ್ಷಕಿಯರಾದ ಸಿ. ನೀಲಪ್ಪ, ಸಿ. ಶಿವರಾಜ್ ಅರಸು, ಮಂಜು ನಾಯ್ಕ್, ಮೋಹನ್ ಕುಮಾರ್, ಪ್ರೇಮ ಲೀಲಾ, ಹೇಮಾವತಿ, ಶಂಶಾದ್, ಅತಿಥಿ ಶಿಕ್ಷಕಿಯರಾದ ಸಿ. ನೇತ್ರಮ್ಮ, ರುಕ್ಮಿಣಿ, ಸಲ್ಮಾ, ಅಂಗನವಾಡಿ ಕಾರ್ಯಕರ್ತೆಯರಾದ ಸಿ.ಎಲ್. ದೇವಕ್ಕ, ಬಿ. ನೇತ್ರಮ್ಮ, ಬಿಸಿ ಊಟದ ಮಾತೆಯರು, ಸಿಬ್ಬಂದಿಯಾದ ದ್ರಾಕ್ಷಾಯಿಣಿ ಹಾಗೂ ಗ್ರಾ.ಪಂ. ಸದಸ್ಯರಾದ ಎಸ್. ಎನ್. ಮಂಜುನಾಥ್, ಕೆ.ಹೆಚ್. ಕುಬೇಂದ್ರಪ್ಪ, ಕಾರಬಾರಿ ರಾಜ ನಾಯ್ಕ್, ಊರಿನ ಮುಖಂಡರಾದ ಟಿ. ಶೇಖರಪ್ಪ, ಜಿ. ಕುಮಾರ ನಾಯ್ಕ್, ಟಿ. ಶಿವಪ್ಪ ಚನ್ನಾಪುರ, ಬಸವರಾಜ್ ಹಳ್ಳಿಯಾರ್, ನಾಗರಾಜ್, ಟಿ.ಪಿ. ಹನುಮಂತಪ್ಪ, ಅಶೋಕ್ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.

## ಬಿಜೆಪಿ ಅಧಿಕಾರಕ್ಕಾಗಿ ಬಿವಿವೈ ಬದಲಿಸಿ

(1ನೇ ಪುಟದಿಂದ) ತಮ್ಮ ಅಸಮರ್ಥತೆ ತೋರಿಸಿದ್ದಾರೆ. ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಪಕ್ಷ ಅಧಿಕಾರಕ್ಕೆ ಬರಬೇಕೆಂದಿದ್ದರೆ, ತಕ್ಷಣವೇ ವಿಜಯೇಂದ್ರ ಅವರ ಸ್ಥಾನಕ್ಕೆ ಸಮರ್ಥರೊಬ್ಬರನ್ನು ನೇಮಕ ಮಾಡಿ ಎಂದು ತಮ್ಮ ಪತ್ರದಲ್ಲಿ ತಿಳಿಸಿದ್ದಾರೆ.

## ಜಾತಿ ಗಣತಿ ವರದಿ ಅನುಷ್ಠಾನ ಶತಸಿದ್ಧ

(1ನೇ ಪುಟದಿಂದ) ಆಗ್ರಹಿಸಿದಾಗ 1992 ರ ಇಂದಿರಾ ಸಹಾನಿ ಕೇಸನ್ನು ಉಲ್ಲೇಖಿಸಿ ಮೀಸಲಾತಿ ಶೇಕಡ 50ರಷ್ಟು ಮೀರಬಾರದು ಎನ್ನುವ ಅಂಶವನ್ನು ಸಭೆಗೆ ತಿಳಿಸುತ್ತಾ, ಕಳೆದ ಸರ್ಕಾರದಲ್ಲಿ ಆರ್ಥಿಕವಾಗಿ ಹಿಂದುಳಿದವರಿಗೆ ಎಂದು ಮೀಸಲಾತಿ ಕಲ್ಪಿಸಿದ್ದು ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿದೆ. ಸಂವಿಧಾನದ ಆರ್ಟಿಕಲ್ (15)(16)ರ ಪ್ರಕಾರ ಮೀಸಲಾತಿ ನೀಡಬೇಕಾಗಿರುವುದು ಸಾಮಾಜಿಕವಾಗಿ ಶೈಕ್ಷಣಿಕವಾಗಿ ಹಿಂದುಳಿದವರಿಗೆ ಮಾತ್ರ ನೀಡಬೇಕು ಎಂದಿದ.

ಜಾತಿ ಗಣತಿಯ ವರದಿ ವೈಜ್ಞಾನಿಕವಾಗಿ ತಯಾರಾಗಿದ್ದು ಸಮಾಜದ ಎಲ್ಲಾ ವರ್ಗಗಳ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸ್ಥಿತಿಗತಿ ತಿಳಿಯಲು ಅನುಕೂಲ ವಾಗಿದೆ. ಆ ಪ್ರಕಾರ ಸರ್ಕಾರದ ಕಾರ್ಯಕ್ರಮಗಳನ್ನು ರೂಪಿಸಲು ಸಹಕಾರಿಯಾಗುತ್ತದೆ ಎಂದರು.


# ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿ.,

**ಆಡಳಿತ ಕಛೇರಿ, ನಂ.120, ಹರ್ಡೇಕರ್ ಮಂಜಪ್ಪ ರಸ್ತೆ, ದಾವಣಗೆರೆ-577 001**

## ಸ್ಥಿರಾಸ್ತಿ ಸ್ವತ್ತಿನ ಮಾರಾಟ ಸೂಚನೆ

ಸೆಕ್ಯೂರಿಟೈಜೇಶನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆ್ಯಕ್ಟ್ ನ 2002 ನಿಯಮ 8(6) ರ ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಪೋರ್ಸ್‌ಮೆಂಟ್) ನಿಯಮ 2002 ರ ಪ್ರಕಾರ ಕೆಳಗೆ ಸೂಚಿಸಿರುವ ಸಾಲಗಾರರು ಬ್ಯಾಂಕಿಗೆ ಬರಬೇಕಾದ ಬಾಕಿಯನ್ನು ಪಾವತಿಸುವಲ್ಲಿ ವಿಫಲರಾಗಿರುವುದರಿಂದ ಈ ನೋಟೀಸನ್ನು ನೀಡಲಾಗಿದೆ. ಸೆಕ್ಯೂರಿಟೈಜೇಶನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆ್ಯಕ್ಟ್ 2002 ರ ಕಾಯ್ದೆಯಲ್ಲಿ ಸೆಕ್ಷನ್ 13(4) ರ ಅನ್ವಯ ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿ., ದಾವಣಗೆರೆ-577 001 ಅಧಿಕೃತ ಅಧಿಕಾರಿಯವರಿಂದ ಮೇಲ್ಕಂಡ ಕಾಯ್ದೆಯ ಅನ್ವಯ ಬ್ಯಾಂಕು ತನ್ನ ಅಧಿಕಾರಗಳನ್ನು ಚಲಾಯಿಸಿ, ಬ್ಯಾಂಕು ತನಗೆ ಬರಬೇಕಾದ ಬಾಕಿ ವಸೂಲಿಗಾಗಿ ಷೆಡ್ಯೂಲ್-1, ಭಾಗ-ಬಿ ಮತ್ತು ಷೆಡ್ಯೂಲ್ -1, ಭಾಗ-ಎ ಯಲ್ಲಿರುವ ಸೂಚಿಸಿರುವಂತೆ ಕೆಳಕಂಡ ನಿಯಮ ಮತ್ತು ಷರತ್ತುಗಳಿಗೆ ಅನುಗುಣವಾಗಿ ಮಾರಾಟ ಮಾಡಲಾಗುತ್ತದೆ.

| | |
|---|---|
| ಮಾರಾಟದ ದಿನಾಂಕ | 24-03-2025 |
| ಮಾರಾಟದ ಸಮಯ | ಷೆಡ್ಯೂಲ್ -1 ಭಾಗ-ಎ, ಕಲಂ-5 ನ್ನು ಆಧಾರ ಮಾಡಿ |
| ಮಾರಾಟದ ಸ್ಥಳ | ಆಧಾರವಾಗಿರುವ ಸೊತ್ತಿನ ಮುಂಭಾಗದಲ್ಲಿ |
| ಸ್ಥಿರಪಡಿಸಿದ ಮೀಸಲು ಬೆಲೆ | ಷೆಡ್ಯೂಲ್-1 ಭಾಗ-ಎ, ಕಲಂ-3 ನ್ನು ಆಧಾರ ಮಾಡಿ |
| ಮುಂಗಡ ಹಣ ಠೇವಣಿ | ಷೆಡ್ಯೂಲ್-1 ಭಾಗ-ಎ, ಕಲಂ-4ನ್ನು ಆಧಾರ ಮಾಡಿ |

**ಷೆಡ್ಯೂಲ್-1, ಭಾಗ-ಎ**

| ಕ್ರ. ಸಂ. | ಸಾಲಗಾರರು/ಸಹ ಸಾಲಗಾರರ ಹೆಸರು | ಆಸ್ತಿಯ ವಿವರಣೆ | ಮೀಸಲು ಬೆಲೆ ರೂಗಳಲ್ಲಿ | ಮುಂಗಡ ಠೇವಣಿ ರೂ.ಗಳಲ್ಲಿ | ಮಾರಾಟದ ಸಮಯ |
|---|---|---|---|---|---|
| | 1 | 2 | 3 | 4 | 5 |
| | ಮೆ॥ ಎಸ್.ಪಿ. ರಾಕ್ಸ್ ಅಂಡ್ ಗ್ರಾನೈಟ್ಸ್ ಡೋರ್ ನಂ.1962, ಎಂ.ಸಿ.ಸಿ. ಬಿ ಬ್ಲಾಕ್, ವಾಟರ್ ಟ್ಯಾಂಕ್ ಎದುರು, ದಾವಣಗೆರೆ. ಮಾಲೀಕರು: ಪುಷ್ಪ. ಜಿ.ಎಸ್. ಕೋಂ ಲೇಟ್ ಸಿದ್ದೇಶ್ ಮತ್ತು ಮಕ್ಕಳು. ಜಾಮೀನುದಾರರು: 1)ಡಾ. ವಿ. ಭಾಗ್ಯ ಸಿ/ಆಫ್ ವಿರುಪಾಕ್ಷಪ್ಪ, ಚಂದ್ರಗಿರಿ ಅಪಾರ್ಟ್‌ಮೆಂಟ್, ಆಂಜನೇಯ ಬಡಾವಣೆ, ದಾವಣಗೆರೆ. 2)ಡಾ. ಅನೀಲ್‌ಕುಮಾರ್ ನೆಲ್ವಿಗಿ ಬಿನ್ ಎಸ್.ಆರ್. ನೆಲ್ವಿಗಿ, ಡೋರ್ ನಂ.2007/18, 2ನೇ ತಿರುವು, ಸಿದ್ದವೀರಪ್ಪ ಬಡಾವಣೆ, ದಾವಣಗೆರೆ. | ದಾವಣಗೆರೆ ನಗರದ 6ನೇ ಮುಖ್ಯರಸ್ತೆ, ಎಂ.ಸಿ.ಸಿ. ಎ ಬ್ಲಾಕ್, ದಾವಣಗೆರೆ, ಸೈಟ್ ನಂ.9, ಹಳೇ ಡೋರ್ ನಂ.827, ಚಾಲ್ತಿ ಮಹಾನಗರಪಾಲಿಕೆ ಡೋರ್ ನಂ.1962, ಅಳತೆ ಪೂರ್ವ-ಪಶ್ಚಿಮ 95 ಅಡಿಗಳು, ಉತ್ತರ-ದಕ್ಷಿಣ 95 ಅಡಿಗಳು, (95X95 ಅಡಿಗಳು) ಇದರ ಚೆಕ್ಕುಬಂದಿ:- ಪೂರ್ವಕ್ಕೆ : ಸೈಟ್ ನಂ.8, ಪಶ್ಚಿಮಕ್ಕೆ : 6ನೇ ಮುಖ್ಯರಸ್ತೆ, ಉತ್ತರಕ್ಕೆ : ಇದೇ ಸೈಟ್ ಪೈಕಿ ಬಾಕಿ ಉಳಿದಿರುವ ಸೈಟ್, ದಕ್ಷಿಣಕ್ಕೆ : ರಸ್ತೆ. | ರೂ.6,43,60,258-00 | ರೂ.64,36,000-00 | ಬೆಳಗ್ಗೆ 12.00 ಗಂಟೆಗೆ |

**ಷೆಡ್ಯೂಲ್-1, ಭಾಗ-ಬಿ**

| ಸಾಲಗಾರರು/ಸಹ ಸಾಲಗಾರರ ಹೆಸರು | ಸಾಲ ಸೌಲಭ್ಯದ ಸ್ವರೂಪ | ಸಾಲದ ಬಾಕಿ (ಮೊಬಲಗು ರೂ.ಗಳಲ್ಲಿ) |
|---|---|---|
| ಮೆ॥ ಎಸ್.ಪಿ.ರಾಕ್ಸ್ ಅಂಡ್ ಗ್ರಾನೈಟ್ಸ್ ಮಾಲೀಕರು: ಪುಷ್ಪ. ಜಿ.ಎಸ್. ಕೋಂ ಲೇಟ್ ಸಿದ್ದೇಶ್ ಮತ್ತು ಮಕ್ಕಳು | ಎಂಟಿಎಲ್-132 Business (Working Capital) | ರೂ.6,43,60,258-00 + ಇತರೆ ಖರ್ಚು, (ದಿನಾಂಕ 26-01-2025 ರ ವರೆಗೆ) ತಗಲುವ ವೆಚ್ಚ, ಬಡ್ಡಿ ಮತ್ತು ಇತ್ಯಾದಿ |

**ಈ ಮೊದಲು ಯಾವುದೇ ಮೊತ್ತವನ್ನು ಪಾವತಿಸಿದಲ್ಲಿ ಅದನ್ನು ಒಟ್ಟು ಬಾಕಿಯೊಂದಿಗೆ ಹೊಂದಿಸಿಕೊಳ್ಳಲಾಗುವುದು.**

ಷೆಡ್ಯೂಲ್-1, ಭಾಗ-ಬಿ ಯಲ್ಲಿರುವಂತೆ ಸಾಲಗಳು ಮತ್ತು ವೆಚ್ಚಗಳನ್ನು ದಿನಾಂಕ 21-03-2025 ರಂದು ಸಂಜೆ 4.30 ಗಂಟೆಗೆ ಅಥವಾ ಮುಂಚಿತವಾಗಿ ಪಾವತಿಸಿದ್ದಲ್ಲಿ ಅಧಿಕೃತ ಅಧಿಕಾರಿಯವರು ಮಾರಾಟ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಬಹುದು, ಮಾರಾಟ ಪ್ರಕ್ರಿಯೆ ಪೂರ್ಣಗೊಂಡ ನಂತರ ಮಾಹಿತಿಗಳು ಅಥವಾ ಆಫರ್‌ಗಳನ್ನು ನಿಮ್ಮಿಂದ ಸ್ವೀಕರಿಸಲಾಗುವುದಿಲ್ಲ. ಈ ಮೂಲಕ ಸೂಚಿಸುವುದೇನೆಂದರೆ ಷೆಡ್ಯೂಲ್ -1, ಭಾಗ-ಎ ಯಲ್ಲಿ ಆಸ್ತಿಯು ಹಾಗೂ ಷೆಡ್ಯೂಲ್-1 ಭಾಗ-ಬಿ ಯಲ್ಲಿ ನಮೂದಿಸಿರುವ ಸಾಲಗಳಿಗಿಂತ ಕಡಿಮೆ ಇದ್ದಲ್ಲಿ ಬರಬೇಕಾದ ಬಾಕಿ ವಸೂಲಾತಿಗಾಗಿ ಕಾನೂನಿನನ್ವಯ ಬ್ಯಾಂಕು ಕ್ರಮ ಕೈಗೊಳ್ಳುತ್ತದೆ.

**ಮಾರಾಟದ ನಿಯಮಗಳು:-**

1) ಮಾರಾಟವನ್ನು ಎಲ್ಲಿ ಹೇಗಿದೆಯೋ ಹಾಗೆ ಮತ್ತು ಯಾವುದೇ ಆಧಾರವನ್ನು ಪಡೆಯದೆ ಮತ್ತು ಯಾವುದೇ ಸ್ಥಿತಿಯಲ್ಲಿ ಅಥವಾ ಇತರೆ ಯಾವುದೇ ಕಾರಣಗಳು ಆಸ್ತಿಗೆ ಧಕ್ಕೆಯಾಗದಂತೆ ಮಾರಾಟ ಮಾಡಲಾಗುವುದು. ಬ್ಯಾಂಕು ಆಸ್ತಿಗೆ ಧಕ್ಕೆ ಬರಬಹುದಾದ ಯಾವುದೇ ಸ್ಥಿತಿಗೆ ಅಥವಾ ಯಾವುದೇ ಹಕ್ಕುಗಳಿಗೆ ಜವಾಬ್ದಾರರಾಗಿರುವುದಿಲ್ಲ. 2) ಷೆಡ್ಯೂಲ್-1, ಭಾಗ-ಬಿ ರಲ್ಲಿ ನಿರ್ದಿಷ್ಟವಾಗಿ ನಮೂದಿಸಲಾಗಿರುವ ವಿವರಗಳು ಬ್ಯಾಂಕಿಗೆ ತಿಳಿದಿರುವ ನಿಖರವಾದ ವಿವರಗಳಾಗಿರುತ್ತವೆ ಮತ್ತು ಇದರಲ್ಲಿನ ಯಾವುದೇ ತಪ್ಪುಗಳಿಗೆ, ತಪ್ಪು ಹೇಳಿಕೆ ಅಥವಾ ತೆಗೆದು ಹಾಕಿರುವ ವಿವರಗಳಿಗೆ ಬ್ಯಾಂಕು ಉತ್ತರದಾಯಿತ್ವವಲ್ಲ. 3) ದಾಖಲಾದ ಕಾರಣಗಳಿಗೆ ಮಾರಾಟವನ್ನು ರದ್ದುಗೊಳಿಸುವ/ಮುಂದೂಡುವ ಮತ್ತು ಸಲ್ಲಿಸಲಾದ ಬಿಡ್‌ಗಳನ್ನು ವಾಪಾಸ್ಸು ಮಾಡುವ ಹಕ್ಕನ್ನು ಅಧಿಕೃತ ಅಧಿಕಾರಿಯವರ ನಿರ್ಣಯಕ್ಕೆ ಬಿಟ್ಟದ್ದು ಮತ್ತು ಈ ಕುರಿತು ಬಿಡ್‌ದಾರರಿಂದ ಯಾವುದೇ ಕ್ಲೈಮನ್ನು ಅಥವಾ ಯಾವುದೇ ಪ್ರತಿನಿಧಿಗೆ ಬ್ಯಾಂಕ್ ಅವಕಾಶ ನೀಡುವುದಿಲ್ಲ. 4) ಸ್ಥಿರಾಸ್ತಿಯ ಮಾರಾಟದಲ್ಲಿ ಯಶಸ್ವಿ ಬಿಡ್‌ದಾರರೆಂದು ನಿಗದಿಯಾದ ವ್ಯಕ್ತಿಯು 25% ಮೊತ್ತವನ್ನು ಸ್ಥಳದಲ್ಲೇ ಕೂಡಲೇ ಪಾವತಿಸಬೇಕು ಮತ್ತು ಬಾಕಿ ಮೊತ್ತವನ್ನು ಬ್ಯಾಂಕಿನಿಂದ ಮಾರಾಟವು ದೃಢೀಕರಣಗೊಳಿಸಿ, 15 ದಿನಗಳೊಳಗೆ ಪಾವತಿಸಬೇಕು. ಸದರಿ ಮೊತ್ತವನ್ನು ನಿಗಧಿಪಡಿಸಿದ ದಿನಾಂಕದ ಒಳಗೆ ಪಾವತಿಸಲು ವಿಫಲರಾದಲ್ಲಿ ಖರೀದಿದಾರರೆಂದು ನಿರ್ಧರಿಸಿದ ವ್ಯಕ್ತಿಯು ಈವರೆಗೆ ಪಾವತಿಸಿದ ಇಎಂಡಿಯೂ ಒಳಗೊಂಡಂತೆ ಪೂರ್ತಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಮತ್ತು ಆಸ್ತಿಯನ್ನು ಮರು ಮಾರಾಟ ಮಾಡಲಾಗುವುದು ಹಾಗೂ ಈ ಸುಸ್ತಿದಾರರಿಂದ ಖರೀದಿದಾರರಿಗೆ ಆಸ್ತಿಯ ಮೇಲೆ ಯಾವುದೇ ಮೊತ್ತದ ಮೇಲೆ ಯಾವುದೇ ಕ್ಲೈಮುಗಳು ಇರುವುದಿಲ್ಲ. 5) ಮಾರಾಟ ಪತ್ರವನ್ನು ನೀಡಿದ ನಂತರ ಮಾರಾಟವನ್ನು ಪೂರ್ಣಗೊಳಿಸಲಾಗುವುದು ಮತ್ತು ಆ ಕುರಿತು ಯಾವುದೇ ಕ್ಲೈಮುಗಳಿಗೆ ಬ್ಯಾಂಕು ಅವಕಾಶ ನೀಡುವುದಿಲ್ಲ. 6) ಆಸ್ತಿಯನ್ನು ಮಾರಾಟ ಮಾಡಲು ಬ್ಯಾಂಕು ಯಾರನ್ನೂ ನಿಯೋಜಿಸುವುದಿಲ್ಲ ಅಥವಾ ನಿಯೋಜಿಸುವ ಒಪ್ಪಂದವಾಗಲಿ ಪ್ರತಿನಿಧಿಯನ್ನಾಗಲಿ ಸೂಚಿಸುವುದಿಲ್ಲ. ಮಾರಾಟವನ್ನು ಯಾವುದೇ ಸೂಕ್ತ ಕಾರಣಗಳಿಂದ ರದ್ದುಗೊಳಿಸುವ/ಮುಂದೂಡುವ ಅಥವಾ ಯಾವುದೇ ಕಾರಣಗಳನ್ನು ನೀಡದೇ ರದ್ದುಗೊಳಿಸುವ ಅಧಿಕಾರವನ್ನು, ಬ್ಯಾಂಕು ಹೊಂದಿದ್ದು ಇದನ್ನು ಯಾವುದೇ ಬಿಡ್‌ದಾರರು ಪ್ರಶ್ನಿಸುವಂತಿಲ್ಲ. 7) ಬ್ಯಾಂಕ್ ಬಿಡ್ಡುಗಳನ್ನು ಯಾವುದೇ ಹಂತದಲ್ಲಿ ಅಂಗೀಕರಿಸುವ/ತಿರಸ್ಕರಿಸುವ /ಬದಲಾಯಿಸುವ/ಮಾರ್ಪಡಿಸುವ ಯಾವುದೇ ಮಾರಾಟದ ನಿಯಮವನ್ನು ಮನ್ನಾ ಮಾಡುವ ಅಧಿಕಾರವನ್ನು ಬ್ಯಾಂಕ್ ಕಾಯ್ದಿರಿಸಿಕೊಂಡಿದೆ. 8) ಶಾಸನಬದ್ಧ ಬಾಕಿಗಳಾದ ಆಸ್ತಿ ತೆರಿಗೆಗಳು/ಖಾತ/ಸೆಸ್ ಮತ್ತು /ಅಥವಾ ಬಿಲ್ಡರ್/ಸೊಸೈಟಿ ಅಸೋಸಿಯೇಷನ್/ ಅಪಾರ್ಟ್‌ಮೆಂಟ್ ಅಭಿವೃದ್ಧಿ ಬಾಕಿಗಳು, ಸಂಘದ ನಿಧಿಗಳಿಗೆ ಕೊಡುಗೆ, ವರ್ಗಾವಣೆ ಚಾರ್ಜ್‌ಗಳು, ವಿದ್ಯುತ್ ಬಾಕಿಗಳು ನೀರಿನ ಚಾರ್ಜ್‌ಗಳ ಬಾಕಿಗಳನ್ನು ಬಿಡ್ಡುದಾರರು/ಆಫರ್‌ಗಳು/ಭಾವಿ ಖರೀದಿದಾರರು ಮೊದಲೇ ಖಚಿತ ಪಡಿಸಿಕೊಳ್ಳಬೇಕು ಮತ್ತು ಅದನ್ನು ಖರೀದಿದಾರನು ಮಾರಾಟ ಪ್ರಮಾಣ ಪತ್ರವನ್ನು ಬರೆದುಕೊಡುವ ಮುಂಚೆ ಪಾವತಿ ಮಾಡತಕ್ಕದ್ದು ಮತ್ತು ಮಾರಾಟಕ್ಕೆ ಪ್ರಾಸಂಗಿಕವಾದ ಎಲ್ಲಾ ವೆಚ್ಚಗಳನ್ನು ಖರೀದಿದಾರನೇ ಭರಿಸತಕ್ಕದ್ದು. 9) ಬ್ಯಾಂಕಿಗೆ ಆಧಾರವಾಗಿರುವ ಆಸ್ತಿಯನ್ನು ಅಧಿಕೃತ ಅಧಿಕಾರಿಯವರು ಎಲ್ಲಿ ಹೇಗಿದೆಯೋ ಹಾಗೆ ಮಾರಾಟ ಮಾಡುತ್ತಾರೆ ಮಾರಾಟ ಪ್ರಕ್ರಿಯೆ ಮುಗಿದ ನಂತರ ಯಶಸ್ವಿ ಬಿಡ್‌ದಾರರಿಂದ ಮಾರಾಟವಾಗಿರುವ ಆಸ್ತಿಯ ಬಗ್ಗೆ ಯಾವುದೇ ಸಮಸ್ಯೆ ತಂಟೆ/ತಕರಾರು ಬಂದಲ್ಲಿ ಅದಕ್ಕೆ ಅಧಿಕೃತ ಅಧಿಕಾರಿಯವರು ಜವಾಬ್ದಾರರಾಗಿರುವುದಿಲ್ಲ, ಆಸ್ತಿಯನ್ನು ತೆರವು ಮಾಡಿಸುವುದಕ್ಕಾಗಲೀ/ಸ್ವಾಧೀನಕ್ಕೆ ತೆಗೆದುಕೊಳ್ಳುವುದಕ್ಕಾಗಲೀ ಅಥವಾ ಯಾವುದೇ ತಖರಾರುಗಳನ್ನು ಪರಿಹರಿಸಿಕೊಳ್ಳಲು ಯಶಸ್ವಿ ಬಿಡ್‌ದಾರರೇ ಏರ್ಪಾಡು ಮಾಡಿಕೊಳ್ಳಬೇಕು. ಮಾರಾಟ ಪ್ರಕ್ರಿಯೆ ಮುಗಿದ ನಂತರ ಯಶಸ್ವಿ ಬಿಡ್‌ದಾರರು ಯಾವುದೇ ಕ್ಲೈಮುಗಳು/ತಗಾದೆಯನ್ನುಅಧಿಕೃತ ಅಧಿಕಾರಿಯವರ ಗಮನಕ್ಕೆ ತರುವಂತಿಲ್ಲ

**ಮೇಲೆ ತಿಳಿಸಿರುವ ಮಾರಾಟದ ನಿಯಮ ನಿಬಂಧನೆಗಳಿಗೆ ಅನುಗುಣವಾಗಿ ಷೆಡ್ಯೂಲ್ -1, ಭಾಗ-ಎ ನಲ್ಲಿರುವ ಆಸ್ತಿಯನ್ನು ಖರೀದಿಸಲು ಆಸಕ್ತಿಯುಳ್ಳ ವ್ಯಕ್ತಿಗಳಿಂದ ಮೊಹರಾದ ಟೆಂಡರ್ ಗಳನ್ನು ಆಹ್ವಾನಿಸಲಾಗಿದೆ.**

● ಮೊಹರಾದ ಟೆಂಡರ್‌ಗಳನ್ನು ಮೇಲೆ ತಿಳಿಸಿರುವ ಬ್ಯಾಂಕಿನ ವಿಳಾಸಕ್ಕೆ ದಿನಾಂಕ 21-03-2025 ರಂದು ಸಂಜೆ 4-30 ಗಂಟೆಯ ಒಳಗೆ ಭರ್ತಿ ಮಾಡಿದ ಅರ್ಜಿಯ ಜೊತೆ ಪಾವತಿಸಬೇಕು. ಡಿ.ಡಿ/ಆರ್.ಟಿ.ಜಿ.ಎಸ್. ಅನ್ನು ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿ., ದಾವಣಗೆರೆ-577 001, ಇವರ ಹೆಸರಿನಲ್ಲಿ ದಾವಣಗೆರೆಯಲ್ಲಿ ಪಾವತಿಯಾಗುವಂತೆ ಪಡೆಯಬೇಕು ಬಿಡ್ ಅರ್ಜಿಗಳನ್ನು ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿ., ದಾವಣಗೆರೆ-577 001, ಆಫೀಸಿನಿಂದ ಪಡೆಯಬಹುದು. ಚೆಕ್ ಮೂಲಕ ಸ್ವೀಕರಿಸಲಾಗುವುದಿಲ್ಲ. ಚೆಕ್‌ಗಳ ಜೊತೆಗೆ ಕಳುಹಿಸಲಾಗುವ ಬಿಡ್‌ಗಳನ್ನು ಅನರ್ಹಗೊಳಿಸಲಾಗುವುದು. ಬಿಡ್‌ಗಳು ತೆರೆಯುವ ದಿನಾಂಕ:24-03-2025 ರಂದು ಬೆಳಿಗ್ಗೆ 11-00 ಗಂಟೆಗೆ ಅಧಿಕೃತ ಅಧಿಕಾರಿಯವರ ಉಪಸ್ಥಿತಿಯಲ್ಲಿ ಮತ್ತು ಪ್ರಸ್ತುತ ಬಿಡ್‌ದಾರರ ಸಮ್ಮುಖದಲ್ಲಿ ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿ., ದಾವಣಗೆರೆ-577 001, ಇವರ ಸಮ್ಮುಖದಲ್ಲಿ ತೆರೆಯಲಾಗುವುದು.

● ಬಿಡ್ ಷರತ್ತು ರಹಿತವಾಗಿರುತ್ತದೆ ಮತ್ತು ಷರತ್ತುಗಳಿಗೆ ಬಿಡ್‌ಗಳನ್ನು ತಿರಸ್ಕರಿಸಲಾಗುವುದು.

● ಒಂದು ವೇಳೆ ಒಂದಕ್ಕಿಂತ ಹೆಚ್ಚು ಗರಿಷ್ಠ ಬಿಡ್‌ಗಳು ಇದ್ದು, ಒಂದೇ ಆಫರ್ ಬೆಲೆಯನ್ನು ಹೊಂದಿದ್ದರೆ, ಒಂದೇ ಮೊತ್ತದ ಆಫರ್‌ಗಳನ್ನು ಹೊಂದಿರುವ ಬಿಡ್‌ಗಳನ್ನು ಮತ್ತೊಮ್ಮೆ ತೆರೆಯುವ ನಿರ್ಧಾರವನ್ನು ಅಧಿಕೃತ ಅಧಿಕಾರಿಯವರ ನಿರ್ಣಯಕ್ಕೆ ಬಿಟ್ಟದ್ದು.

● ಇಂಥ ಸಮಯದಲ್ಲಿ ಬಿಡ್ಡಿನ ಮೊತ್ತವನ್ನು ಹೆಚ್ಚಿಸುವ ಅಥವಾ ಬಿಡ್‌ನ ವಿಧಾನವನ್ನು ಬದಲಾಯಿಸುವ ಅಧಿಕಾರವನ್ನು ಅಧಿಕೃತ ಅಧಿಕಾರಿಯವರು ಹೊಂದಿರುತ್ತಾರೆ. ● ಬಿಡ್‌ದಾರರು ಮಾತ್ರ ಹರಾಜಿನಲ್ಲಿ ಭಾಗವಹಿಸತಕ್ಕದ್ದು.

● ಸಾಲಗಾರರಿಗೆ ಮಾರಾಟದ ನೋಟೀಸ್ ನೀಡಲಾದ ದಿನಾಂಕ: 18-02-2025

● ಇಚ್ಛಿಸುವ ಬಿಡ್‌ದಾರರು ಆಸ್ತಿಯನ್ನು ಪರಿವೀಕ್ಷಿಸಲು ಮತ್ತು ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ: ಎಂ. ಬಸವರಾಜ, ಪ್ರಧಾನವ್ಯವಸ್ಥಾಪಕರು, ಮೊಬೈಲ್ ನಂ. 98441 11012.

ಸಹಿ/-
ಅಧಿಕೃತ ಅಧಿಕಾರಿ
ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ದಾವಣಗೆರೆ.-577001

ದಿನಾಂಕ : 18-02-2025
ಸ್ಥಳ : ದಾವಣಗೆರೆ


# ನೀರು ಕೊಡಿ, ಆಗದಿದ್ದರೆ ಪರಿಹಾರ ಕೊಡಿಸಿ

(1ನೇ ಪುಟದಿಂದ) ಇದ್ದರೆ ಸಾಲದು, ಕಾರ್ಯರೂಪಕ್ಕೆ ಬರಬೇಕು. ಅಕ್ರಮ ಪಂಪ್‌ಸೆಟ್‌ಗಳ ತೆರವು ಮಾಡಲು ದಾವಣಗೆರೆ ಹಾಗೂ ಶಿವಮೊಗ್ಗ ಜಿಲ್ಲಾಡಳಿತಗಳು ಕೂಡಲೇ ಕ್ರಮಕೈಗೊಳ್ಳುವಂತೆ ಆಗ್ರಹಿಸಿದರು.

ಹರಿಹರ ತಾಲ್ಲೂಕು ಗ್ರಾಮಾಂತರ ಬಿಜೆಪಿ ಅಧ್ಯಕ್ಷ ಹಿಂಡಸಟ್ಟಿ ಲಿಂಗರಾಜ್ ಮಾತನಾಡಿ, ಭದ್ರಾ ಎಸ್‌ಇ ಮತ್ತು ಕಾರ್ಯನಿರ್ವಾಹಕ ಇಂಜಿನಿಯರ್ ಅವರು 3-4 ದಿನ ಇಲ್ಲಿಯೇ ಇದ್ದು ನೀರಿನ ನಿರ್ವಹಣೆ ಮಾಡಬೇಕೆಂದು ಒತ್ತಾಯಿಸಿದಾಗ ರೈತರೂ ಧ್ವನಿಗೂಡಿಸಿದರು. ಎಪಿಎಂಸಿ ಮಾಜಿ ಅಧ್ಯಕ್ಷ ಜಿ. ಮಂಜುನಾಥ್ ಪಟೇಲ್ ಮಾತನಾಡಿ, ಅಚ್ಚುಕಟ್ಟಿನಲ್ಲಿ ಅಡಿಕೆ ತೋಟಗಳು ಹೆಚ್ಚಾಗುತ್ತಿದ್ದು, ಭತ್ತ ನಾಟಿ ಕಡಿಮೆಯಾಗುತ್ತಿದೆ. ಕಡಿಮೆ ಇರುವ ನಾಟಿ ಪ್ರದೇಶಕ್ಕೂ ನೀರು ತಲುಪಿಸದ ಮೇಲಾಧಿಕಾರಿಗಳ ನಿರ್ಲಕ್ಷ್ಯತನವನ್ನು ಖಂಡಿಸಿದರು.

ಭದ್ರಾ ಅಚ್ಚುಕಟ್ಟು ವ್ಯಾಪ್ತಿಯ ನೀರು ಬಳಕೆದಾರರ ಸಹಕಾರ ಸಂಘಗಳ ಮಹಾಮಂಡಳದ ಅಧ್ಯಕ್ಷ ವೈ. ದ್ಯಾವಪ್ಪರೆಡ್ಡಿ ಮಾತನಾಡಿ, ಕೊಮಾರನಹಳ್ಳಿ ಬಳಿ ನಿತ್ಯ 4.8 ಗೇಜ್ ಇರುವಂತೆ ನೋಡಿಕೊಂಡರೆ ಕೊನೆ ಭಾಗಕ್ಕೆ ನೀರು ತಲುಪುತ್ತದೆ ಎಂದು ಇಂಜಿನಿಯರ್‌ಗಳಿಗೆ ತಿಳಿಸಿದರು.

ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್ ಮಾತನಾಡಿ, ಇನ್ನೂ ನಾಟಿ ಮಾಡದ ಕಾಲುವೆಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ನೀರು ಹರಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು. ಭದ್ರಾ ಕಾಡಾ ಅಧ್ಯಕ್ಷರು ಕೊನೆ ಭಾಗಕ್ಕೆ ಭೇಟಿ ನೀಡಿ, ಪರಿಸ್ಥಿತಿ ಅವಲೋಕಿಸಬೇಕೆಂದರು.

ಹೊಳೆಸಿರಿಗೆರೆ ಗ್ರಾ.ಪಂ. ಅಧ್ಯಕ್ಷ ಪ್ರಭು, ಭಾನುವಳ್ಳಿಯ ಜೆ. ಗುತ್ಯೆಪ್ಪ, ಹೆಚ್.ಕೆ. ನಾರಾಯಣಪ್ಪ, ಕುಣೆಬೆಳಕೆರೆಯ ಭೋವಿ ಅಂಜಿನಪ್ಪ, ನಂದಿತಾವರೆಯ ಟಿ.ಜಿ.ಬಸವರಾಜ್, ಕಮಲಾಪುರದ ಷಣ್ಮುಖಪ್ಪ ಅವರುಗಳು ಮಾತನಾಡಿ, ಮೇಲ್ಭಾಗದಲ್ಲಿ ಎಲ್ಲಾ ಗೇಟುಗಳು ಓಪನ್ ಇರುತ್ತವೆ. ಹಾಗಾಗಿ ನಮಗೆ ನೀರು ಬರುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.


ಎಲ್ಲರ ಮಾತುಗಳನ್ನು ಸಮಾಧಾನದಿಂದಲೇ ಆಲಿಸಿದ ಭದ್ರಾ ಎಸ್‌ಇ ರವಿಚಂದ್ರನ್ ಅವರು ಕೊನೆಯಲ್ಲಿ ಮಾತನಾಡಿ, ಆರ್‌ಇನಲ್ಲಿ ಮಲೇಬೆನ್ನೂರು ವಿಭಾಗಕ್ಕೆ 700 ಕ್ಯೂಸೆಕ್ಸ್ ನೀರು ಹರಿಸಬೇಕು. ಆದರೆ ನಾವು 900 ಕ್ಯೂಸೆಕ್ಸ್ ನೀರು ಹರಿಸುತ್ತಿದ್ದೇವೆ. ನೀರಿನ ಕೊರತೆ ಇಲ್ಲ. ಅಕ್ರಮ ಪಂಪ್‌ಸೆಟ್ ಗಳಿಂದಾಗಿ ನೀರು ಸಮರ್ಪಕವಾಗಿ ಕೊನೆ ಭಾಗಕ್ಕೆ ಹೋಗುತ್ತಿಲ್ಲ. ನೀರಿನ ಕಳ್ಳತನ ನಿಲ್ಲಿಸದ ಹೊರತು ಕೊನೆ ಭಾಗಕ್ಕೆ ನೀರು ಹರಿಸುವುದು ಕಷ್ಟ ಎಂಬುದನ್ನು ನಾವು ಒಪ್ಪಿಕೊಳ್ಳುತ್ತೇವೆ. ಈ ಬಗ್ಗೆ ಕ್ರಮಕೈಗೊಳ್ಳಲು ಜಿಲ್ಲಾಡಳಿತದ ಸಹಕಾರ ಅಗತ್ಯವಾಗಿದೆ. ಹಾಗಾಗಿ ಈ ದಿನವೇ ದಾವಣಗೆರೆಗೆ ತೆರಳಿ ಡಿಸಿ ಅವರೊಂದಿಗೆ ಚರ್ಚಿಸಿ, ಅಕ್ರಮ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕವನ್ನು ಕಡಿತ ಮಾಡಿಸುತ್ತೇವೆ. ಎಫ್‌ಐಆರ್ ಹಾಕಿಸುವ ಬಗ್ಗೆಯೂ ಗಮನಹರಿಸುತ್ತೇವೆ. ಏನಾದರೂ ಮಾಡಿ ಕೊನೆಭಾಗದ ರೈತರು ನಾಟಿ ಮಾಡಲು ನೀರು ತಲುಪಿಸುವ ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆ. ಒಂದು ವೇಳೆ ನೀರು ತಲುಪದೇ ರೈತರಿಗೆ ತೊಂದರೆ ಆದರೆ ಆ ಬಗ್ಗೆಯೂ ಸರ್ಕಾರಕ್ಕೆ ವರದಿ ಸಲ್ಲಿಸುತ್ತೇವೆ ಎಂದು ರವಿಚಂದ್ರನ್ ರೈತರಿಗೆ ಭರವಸೆ ನೀಡಿದರು.

ಯಲವಟ್ಟಿ ಗ್ರಾ.ಪಂ. ಮಾಜಿ ಅಧ್ಯಕ್ಷ ರಮೇಶ್, ಗಂಗಾಧರ್, ಮಲೇಬೆನ್ನೂರಿನ ಬಿ. ವೀರಯ್ಯ, ಕೆ.ಪಿ. ಗಂಗಾಧರ್, ಪಿ.ಹೆಚ್. ಶಿವಕುಮಾರ್, ನಂದಿತಾವರೆ ಗದಿಗೆಪ್ಪ, ಪ್ರಭಾರ ಕಾರ್ಯಪಾಲಕ ಇಂಜಿನಿಯರ್ ಮಂಜುನಾಥ್, ಎಇಇ ಗಳಾದ ಧನಂಜಯ, ಕೃಷ್ಣಮೂರ್ತಿ, ಎಎಸ್‌ಐ ಶ್ರೀನಿವಾಸ್ ಸೇರಿದಂತೆ ನೂರಾರು ರೈತರು ಈ ವೇಳೆ ಹಾಜರಿದ್ದರು.

**ಡಿಸಿ ಕಚೇರಿಗೆ ಭೇಟಿ:** ಸಭೆಯ ನಂತರ ನಂದಿಗಾವಿ ಶ್ರೀನಿವಾಸ್, ಚಂದ್ರಶೇಖರ್ ಪೂಜಾರ್, ವೈ. ದ್ಯಾವಪ್ಪ ರೆಡ್ಡಿ, ಭಾನುವಳ್ಳಿ ಗುತ್ತೆಪ್ಪ, ನಾರಾಯಣಪ್ಪ, ಸಿರಿಗೆರೆ ರುದ್ರಪ್ಪ, ಪಾಲಾಕ್ಷಪ್ಪ ಮತ್ತಿತರರು ಭದ್ರಾ ಎಸ್‌ಇ ರವಿಚಂದ್ರನ್ ಅವರೊಂದಿಗೆ ಜಿಲ್ಲಾಧಿಕಾರಿಗಳ ಕಚೇರಿಗೆ ತೆರಳಿ ಎಡಿಸಿ ಲೋಕೇಶ್ ಅವರನ್ನು ಭೇಟಿ ಮಾಡಿ ಅಕ್ರಮ ಪಂಪ್‌ಸೆಟ್‌ಗಳಿಗೆ ಇರುವ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸುವಂತೆ ಮನವಿ ಮಾಡಿದ್ದಾರೆ.

ರೈತರ ಮನವಿಗೆ ಸ್ಪಂದಿಸಿದ ಎಡಿಸಿ ಅವರು ಇವತ್ತು ರಾತ್ರಿಯಿಂದಲೇ ವಿದ್ಯುತ್ ಸಂಪರ್ಕ ಕಡಿತಗೊಳಿಸಲು ಬೆಸ್ಕಾಂ ಇಂಜಿನಿಯರ್‌ಗಳಿಗೆ ಸೂಚಿಸಿದರೆಂದು ವೈ. ದ್ಯಾವಪ್ಪ ರೆಡ್ಡಿ ಅವರು 'ಜನತಾವಾಣಿ'ಗೆ ತಿಳಿಸಿದರು.

**ಭದ್ರಾ ಕಾಡಾ ಅಧ್ಯಕ್ಷರನ್ನು ಹುಡುಕಿಕೊಡಿ :** ಭದ್ರಾ ಕಾಡಾ ಅಧ್ಯಕ್ಷರಾದ ಡಾ. ಅಂಶುಮಂತ್ ಅವರನ್ನು ತಕ್ಷಣವೇ ಹುಡುಕಿಕೊಡುವಂತೆ ಭದ್ರಾ ಅಚ್ಚುಕಟ್ಟಿನ ಕೊನೆ ಭಾಗದ ರೈತರು ಮಂಗಳವಾರ ಮಲೇಬೆನ್ನೂರು ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.



ಅಚ್ಚುಕಟ್ಟಿನ ಕೊನೆ ಭಾಗದ ರೈತರಿಗೆ ನೀರು ಬರುತ್ತಿಲ್ಲ ಎಂದು ಕಳೆದ ಇಪ್ಪತ್ತು ದಿನಗಳಿಂದ ಪ್ರತಿಭಟನೆಗಳನ್ನು ಮಾಡುತ್ತಿದ್ದರೂ ಸಹ ಭದ್ರಾ ಕಾಡಾ ಅಧ್ಯಕ್ಷರು ಇತ್ತ ಸುಳಿದಿರುವುದಿಲ್ಲ ಮತ್ತು ಫೋನ್ ಸಂಪರ್ಕಕ್ಕೂ ಸಿಗದಿರುವ ಕಾರಣ ಅವರನ್ನು ಹುಡುಕಿಕೊಡುವಂತೆ ಹೊಳೆಸಿರಿಗೆರೆ, ಭಾನುವಳ್ಳಿ, ಕಮಲಾಪುರ, ಲಕ್ಕಶೆಟ್ಟಿಹಳ್ಳಿ, ಪಾಳ್ಯ, ಕೆ.ಎನ್.ಹಳ್ಳಿ ಹಾಗೂ ಮತ್ತಿತರೆ ಗ್ರಾಮಗಳ ರೈತರು ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

## ಅನ್ನಭಾಗ್ಯ, ಗೃಹಲಕ್ಷ್ಮಿ ಬಾಕಿ ಹಣ ಈ ತಿಂಗಳಲ್ಲೇ ಬಿಡುಗಡೆ : ಡಿಕೆಶಿ

(1ನೇ ಪುಟದಿಂದ) ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸರ್ಕಾರಕ್ಕೆ ಹಣದ ಸಮಸ್ಯೆ ಇಲ್ಲ, ಆರ್ಥಿಕವಾಗಿ ನಾವು ಬಲಿಷ್ಠವಾಗಿದ್ದೇವೆ, ಅನ್ನಭಾಗ್ಯ ಯೋಜನೆಯಡಿ ಜನರಿಗೆ ತಲುಪಬೇಕಾದ ಅಕ್ಕಿ ತಲುಪುತ್ತಿದೆ. ಈ ವಿಚಾರದಲ್ಲಿ ಜನಸಾಮಾನ್ಯರಿಗೆ ಅಸಮಾಧಾನ ಇಲ್ಲ, ಜನರು ಸಂತೋಷವಾಗಿದ್ದಾರೆ, ನಮ್ಮ ಮೇಲೆ ನಂಬಿಕೆ ಇದೆ, ವಿರೋಧ ಪಕ್ಷಗಳು ಮಾತ್ರ ಆರೋಪ ಮಾಡುತ್ತಿವೆ, ಮಾಧ್ಯಮಗಳು ಅದನ್ನು ಬಿತ್ತರಿಸುತ್ತಿವೆ ಎಂದರು.



## ಎಸ್‌ಜೆಎಂ ಶಾಲೆಯಲ್ಲಿ ಗುಣಮಟ್ಟದ ಶಿಕ್ಷಣ : ಗಣ್ಯರ ಶ್ಲಾಘನೆ

ದಾವಣಗೆರೆ, ಫೆ. 18- ನಿಟುವಳ್ಳಿಯ ಎಸ್‌ಜೆಎಂ ಶಾಲೆಯಲ್ಲಿ ಕಡಿಮೆ ಶುಲ್ಕದಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣ ನೀಡಲಾಗುತ್ತಿರುವುದು ಶ್ಲಾಘನೀಯ ಎಂದು ಮಹಾಪೌರ ಕೆ. ಚಮನ್‌ಸಾಬ್ ಹೇಳಿದರು.

ಎಸ್‌ಜೆಎಂ ಪಬ್ಲಿಕ್ ಶಾಲೆಯ 20ನೇ ವರ್ಷದ ವಾರ್ಷಿಕೋತ್ಸವ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಉಪಸ್ಥಿತರಿದ್ದು ಅವರು ಮಾತನಾಡಿದರು. ಕಾರ್ಯಕ್ರಮವನ್ನು ಉದ್ಘಾಟಿಸಿದ ದೂಡಾ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ಮಾತನಾಡಿ, ಈ ಶಾಲೆಯ ಆಡಳಿತ ಮಂಡಳಿ ಸಿಎ ಸೈಟಿಗೆ ಬೇಡಿಕೆ ಇಟ್ಟಿದ್ದು, ಸಿಎ ಸೈಟನ್ನು ಕೊಡಿಸಲು ಸೂಕ್ತ ಕ್ರಮ ಕೈಗೊಳ್ಳುವುದಾಗಿ ಆಶ್ವಾಸನೆ ನೀಡಿದರು.

ನಗರಸಭೆ ಮಾಜಿ ಅಧ್ಯಕ್ಷ ಆರ್.ಎಲ್. ನಾಗಭೂಷಣ್ ಮಾತನಾಡಿ, ಸಂಸ್ಥೆಯ ಕಾರ್ಯದರ್ಶಿ ಡಿ. ಮಹೇಶ್ವರಪ್ಪ ಅವರ ಶ್ರೀಮತಿ ಪುಷ್ಪಾ ಅವರು ತುಂಬಾ ಕಷ್ಟದಿಂದ ಸಂಸ್ಥೆಯನ್ನು ಬೆಳೆಸಿಕೊಂಡು ಬಂದಿದ್ದಾರೆ. ಇವರ ಸಹಾಯಕ್ಕೆ ಸದಾ ಬೆಂಬಲವಾಗಿ ನಿಲ್ಲುತ್ತೇನೆ ಎಂದರು.

ಉಪ ಮಹಾಪೌರ ಸೋಗಿ ಶಾಂತಕುಮಾರ್ ಮಾತನಾಡಿ, ಸ್ಪರ್ಧಾತ್ಮಕ ಕಾಲವಾದ ಇಂದು ದೊಡ್ಡ ದೊಡ್ಡ ಶಾಲೆಗಳ ಮಧ್ಯೆ ಈ ಶಾಲೆಯ ಶಿಕ್ಷಣ ಸೇವೆ ತುಂಬಾ ಸಮಾಜಮುಖಿ ಕೆಲಸವಾಗಿದೆ. ಸಂಸ್ಥೆ ಇನ್ನು ದೊಡ್ಡದಾಗಿ ಬೆಳೆದು ಹೆಚ್ಚಿನ ಪ್ರತಿಭಾವಂತ ವಿದ್ಯಾರ್ಥಿಗಳು ಸಂಸ್ಥೆಯಿಂದ ಹೊರಬರಲಿ ಎಂದು ಆಶಿಸಿದರು.

ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆ ಸದಸ್ಯರಾದ ರೇಣುಕಾ ಶ್ರೀನಿವಾಸ ಅವರ ಪತಿ ಶ್ರೀನಿವಾಸ ಉಪಸ್ಥಿತರಿದ್ದು ಮಾತನಾಡಿದರು.

ವೇದಿಕೆಯ ಮೇಲೆ ರಾಜೇಶ್ ಹುಲಿಕಟ್ಟಿ, ಶ್ರೀಮತಿ ಪುಷ್ಪಾ ಉಪಸ್ಥಿತರಿದ್ದರು.ಮಂಗಳ ಗೌರಮ್ಮ ಪ್ರಾರ್ಥಿಸಿದರು. ಕೆ.ಎಸ್. ಕೊಟ್ರೇಶ್ ಸ್ವಾಗತಿಸಿದರು. ಸಿದ್ದೇಶ್ ನಿರೂಪಿಸಿದರು.

# ಕೃಷಿಗೆ 7, ಕೈಗಾರಿಕೆಗೆ 24 ತಾಸು ವಿದ್ಯುತ್

(1ನೇ ಪುಟದಿಂದ) ಉಪಯೋಗಿಸುವ ಯುನಿಟ್‌ಗಳನ್ನಾಧರಿಸಿ ಹೆಚ್ಚುವರಿಯಾಗಿ ಶೇ 10 ರಷ್ಟು ಸೇರಿಸಿ ಬಳಕೆಯ ಯುನಿಟ್ ನಿಗದಿಯಾಗುತ್ತದೆ. ಆದರೆ 200 ಯುನಿಟ್ ನಂತರ 1 ಯುನಿಟ್ ಹೆಚ್ಚಾದರೂ ವಿದ್ಯುತ್ ದರದಂತೆ ಬಿಲ್ ಪಾವತಿಸಬೇಕಾಗುತ್ತದೆ ಎಂದರು.

ದಾವಣಗೆರೆ ಜಿಲ್ಲೆಯಲ್ಲಿ ಗೃಹಜ್ಯೋತಿ ಯೋಜನೆಯಡಿ ನೋಂದಣಿಯಾದ 433897 ಆರ್.ಆರ್.ಸಂಖ್ಯೆಗಳಿದ್ದು ವಿದ್ಯುತ್ ಸಂಪರ್ಕ ಪಡೆದ ಸ್ಥಾವರಗಳಲ್ಲಿ ಶೇ 88.93 ರಷ್ಟು ಗೃಹಜ್ಯೋತಿಯಲ್ಲಿವೆ. ಈ ಸ್ಥಾವರಗಳಿಗೆ 2023 ರ ಆಗಸ್ಟ್ ನಿಂದ 2024 ರ ಡಿಸೆಂಬರ್ ಅಂತ್ಯದವರೆಗೆ 309 ಕೋಟಿಯಷ್ಟು ಹಣವನ್ನು ಗ್ರಾಹಕರಿಗೆ ಸಬ್ಸಿಡಿ ನೀಡಿದ್ದು ಸರ್ಕಾರ ಇದನ್ನು ಭರಿಸಿದೆ ಎಂದರು.

ದಾವಣಗೆರೆ ಜಿಲ್ಲೆ ಆನಗೋಡು, ಮಾಯಕೊಂಡ ಭಾಗದಲ್ಲಿ 3 ಅಥವಾ 4 ಗಂಟೆಗಳ ಕಾಲ ಮಾತ್ರ ಕೃಷಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ನೀಡಲಾಗುತ್ತದೆ ಎಂದು ಶಾಸಕರಾದ ಕೆ.ಎಸ್.ಬಸವಂತಪ್ಪ ಪ್ರಸ್ತಾಪಿಸಿದಾಗ ಎಲ್ಲಾ ರೈತರಿಗೂ ದಿನದಲ್ಲಿ 7 ಗಂಟೆಗಳ ಕಾಲ ವಿದ್ಯುತ್ ನೀಡುವುದು ಸರ್ಕಾರದ ನೀತಿಯಾಗಿದ್ದು ಅದರಂತೆ ಬೆಸ್ಕಾಂ ಕ್ರಮ ಕೈಗೊಳ್ಳಬೇಕು. ಓವರ್ ಲೋಡಿಂಗ್ ಆದರೆ ಅದನ್ನು ಬೇರೆಡೆ ವರ್ಗಾಯಿಸಿ 7 ಗಂಟೆ ಕೃಷಿ ಪಂಪ್‌ಸೆಟ್‌ಗೆ ವಿದ್ಯುತ್ ನೀಡಲೇಬೇಕೆಂದು ಸೂಚನೆ ನೀಡಿದರು.

ಕುಸುಮ್ ಬಿ ಯೋಜನೆಯಡಿ ರೈತರ ಪಂಪ್‌ಸೆಟ್‌ಗಳಿಗೆ ಸೋಲಾರ್ ವಿದ್ಯುತ್ ಸಂಪರ್ಕ ಕಲ್ಪಿಸುವುದಾಗಿದೆ. 7.5 ಹೆಚ್‌ಪಿ ವರೆಗೆ ಅವಕಾಶ ಇದ್ದು ರೈತರು ಶೇ 20 ರಷ್ಟು ವಂತಿಗೆಯನ್ನು ಕಟ್ಟಬೇಕು. ಕೇಂದ್ರ ಶೇ 30 ಹಾಗೂ ರಾಜ್ಯ ಶೇ 50 ರಷ್ಟು ಸಹಾಯಧನ ಘಟಕ ವೆಚ್ಚಕ್ಕೆ ನೀಡಲಿದೆ. ಮತ್ತು ಕುಸುಮ್-ಸಿ ಯೋಜನೆಯಡಿ ಖಾಸಗಿ ಹಾಗೂ ಸರ್ಕಾರಿ ಜಮೀನುಗಳಲ್ಲಿ ಸೋಲಾರ್ ವಿದ್ಯುತ್ ಉತ್ಪಾದನೆ ಮಾಡುವ ಮೂಲಕ ಗ್ರಿಡ್‌ಗೆ ಪೂರೈಕೆ ಮಾಡುವುದಾಗಿದೆ. ರೈತರು ಸೋಲಾರ್ ಪಂಪ್‌ಸೆಟ್ ಅಳವಡಿಕೆಗೆ ಮುಂದೆ ಬಂದಲ್ಲಿ ಹೆಚ್ಚು ಅನುಕೂಲವಾಗಲಿದೆ ಎಂದರು.

ಸಭೆಯಲ್ಲಿ ಶಾಸಕರಾದ ಕೆ.ಎಸ್.ಬಸವಂತಪ್ಪ, ಲತಾ ಮಲ್ಲಿಕಾರ್ಜುನ್, ಬಿ.ದೇವೇಂದ್ರಪ್ಪ, ಕೆಪಿಟಿಸಿಎಲ್ ಎಂಡಿ ಪಂಕಜ್‌ಕುಮಾರ್ ಪಾಂಡೆ, ಬೆಸ್ಕಾಂ ಎಂಡಿ ಡಾ; ಶಿವಶಂಕರ್ ಎನ್, ಜಿಲ್ಲಾ ಪಂಚಾಯತ್ ಸಿಇಒ ಸುರೇಶ್ ಬಿ.ಇಟ್ನಾಳ್, ಅಪರ ಜಿಲ್ಲಾಧಿಕಾರಿ ಪಿ. ಎನ್.ಲೋಕೇಶ್, ಬೆಸ್ಕಾಂ ಅಧೀಕ್ಷಕ ಇಂಜಿನಿಯರ್ ಪಾಟೀಲ್ ಹಾಗೂ ಬೆಸ್ಕಾಂ, ಕೆಪಿಟಿಸಿಎಲ್ ಅಧಿಕಾರಿಗಳು ಉಪಸ್ಥಿತರಿದ್ದರು.

### ಶೇ.10ರಷ್ಟು ವಿದ್ಯುತ್ ಬೇಡಿಕೆ ಹೆಚ್ಚಳ

(1ನೇ ಪುಟದಿಂದ) ಬೆಳೆಯುತ್ತಿದ್ದು ವಿದ್ಯುತ್ ಬೇಡಿಕೆ 18500 ಮೆ.ವ್ಯಾ. ಇದೆ. ಸೋಲಾರ್ ಆಧಾರಿತ ಪಂಪ್ ಅಳವಡಿಸಿ ನೀರಾವರಿ ಮಾಡಿಕೊಳ್ಳಲು ಪ್ರೋತ್ಸಾಹಿಸಲಾಗುತ್ತಿದೆ ಎಂದರು.

ಯಾವುದೇ ವಿದ್ಯುತ್ ವಿತರಣಾ ಕಂಪನಿಗಳು ನಷ್ಟದಲ್ಲಿಲ್ಲ. ಆದರೆ, ಸರ್ಕಾರಿ ಕಚೇರಿ, ಪಂಚಾಯಿತಿಗಳಿಂದ ಬರಬೇಕಾದ ವಿದ್ಯುತ್ ಬಿಲ್ ಬಾಕಿ ಎಲ್ಲವೂ ಬಂದರೆ ಉತ್ತಮ ಲಾಭದತ್ತ ಮರಳಲಿವೆ ಎಂದು ಹೇಳಿದರು.

ಕುಸುಮ್ ಸಿ ಯೋಜನೆಯಡಿ 3000 ಮೆ.ವ್ಯಾಟ್ ವಿದ್ಯುತ್ ಉತ್ಪಾದನೆಗೆ ಕ್ರಮವಹಿಸಲಾಗುವುದು. ಮುಂದಿನ ಎರಡ್ಮೂರು ತಿಂಗಳಲ್ಲಿ ರಾಜ್ಯದ 60-70 ಕಡೆಗಳಲ್ಲಿ 200ಮೆ.ವ್ಯಾ. ವರೆಗಿನ ಉತ್ಪಾದನಾ ಘಟಕ ಮಾಡಲಾಗುತ್ತಿದೆ. ಈಗಾಗಲೇ ಶಿರಾ, ಹೊಸದುರ್ಗದಲ್ಲಿ ಆರಂಭ ಮಾಡಲಾಗಿದೆ ಎಂದು ತಿಳಿಸಿದರು.

### ವಿದ್ಯುತ್ ಬಳಕೆ ಹೆಚ್ಚಾದಂತೆ ಆರ್ಥಿಕ ಸ್ಥಿತಿ ಸುಧಾರಣೆ

ವಿದ್ಯುತ್ ಬಳಕೆ ಹೆಚ್ಚಾದಂತೆ ರಾಜ್ಯದ ಆರ್ಥಿಕ ಸ್ಥಿತಿಯೂ ಸುಧಾರಣೆಯಾಗುತ್ತದೆ. ದುರಾದೃಷ್ಟವಶಾತ್ ಜಿಎಸ್‌ಟಿ ಬಂದ ಮೇಲೆ ಆ ಆದಾಯ ರಾಜ್ಯಕ್ಕೆ ಸಿಗುತ್ತಿಲ್ಲ ಎಂದು ಸಚಿವ ಜಾರ್ಜ್ ಹೇಳಿದರು.

ನಾವು ನಾಲ್ಕು ಲಕ್ಷ ಕೋಟಿ ಜಿಎಸ್‌ಟಿ ಕಟ್ಟಿದರೆ, ಕೇಂದ್ರದಿಂದ ಬರೋದು 60,000 ಕೋಟಿ ಮಾತ್ರ. ಇದರಿಂದಲೂ ನಮಗೆ ತೊಂದರೆಯಾಗಿದೆ. ಇದನ್ನೇ ಮುಖ್ಯಮಂತ್ರಿಯವರೂ ಸಹ ನಮ್ಮ ಪಾಲು ನಮಗೆ ಸರಿಯಾಗಿ ಕೊಡಬೇಕು ಎಂದು ಹೇಳಿದ್ದಾರೆ. ಚಿನ್ನದ ಮೊಟ್ಟೆ ಇಡುವ ಕೋಳಿಯನ್ನು ಒಮ್ಮೆಲೆ ಕೊಂದರೆ ಮುಂದೆ ಮೊಟ್ಟೆಯೇ ಸಿಗಲ್ಲ. ಇದನ್ನು ಕೇಂದ್ರ ಅರ್ಥ ಮಾಡಿಕೊಳ್ಳಬೇಕು ಎಂದರು.

### ಪಂಪ್‌ಸೆಟ್‌ಗಳಿಗೆ ಶೀಘ್ರ ಸಂಪರ್ಕಕ್ಕೆ ಕ್ರಮ

ಕೃಷಿ ಪಂಪ್‌ಸೆಟ್‌ಗಳಿಗೆ 2004 ರಿಂದಲೂ ಅಕ್ರಮ-ಸಕ್ರಮ ಎಂಬ ಕಾರ್ಯ ಕ್ರಮದಡಿ ಅನಧಿಕೃತ ಸಂಪರ್ಕವನ್ನು ಸಕ್ರಮ ಮಾಡುತ್ತಾ ಬರಲಾಗಿದೆ. ಬಾಕಿ ಇರುವ 4946 ಪಂಪ್‌ಸೆಟ್‌ಗಳಿಗೆ ಮೂಲಭೂತ ಸೌಕರ್ಯ ಕಲ್ಪಿಸಲು ಟೆಂಡರ್ ಕರೆಯಲಾಗಿದೆ. ರೈತರು ಸ್ವಂತವಾಗಿ ಮೂಲ ಸೌಕರ್ಯ ಮಾಡಿಕೊಂಡು ಕೃಷಿ ಪಂಪ್‌ಸೆಟ್‌ಗಳಿಗೆ ತಕ್ಷಣವೇ ಸಂಪರ್ಕ ಪಡೆಯಲು ಹಾಗೂ ಇಲಾಖೆಯಿಂದ ಮೂಲಭೂತ ಸೌಕರ್ಯಕ್ಕಾಗಿ ಸರತಿಯಲ್ಲಿ ಕಾಯುವ ಎರಡು ಅವಕಾಶಗಳನ್ನು ಮಾಡಿಕೊಟ್ಟಲ್ಲಿ ಸ್ವಂತವಾಗಿ ಮಾಡಿಕೊಳ್ಳುವ ರೈತರಿಗೆ ಅನುಕೂಲವಾಗುತ್ತದೆ ಎಂಬ ಚಿಂತನೆ ಮಾಡಲಾಗಿದೆ ಎಂದು ಇಂಧನ ಸಚಿವರು ಹೇಳಿದರು.

# ಮಾರ್ಚ್ 8 ರಂದು ಜಿಲ್ಲೆಯಲ್ಲಿ ಲೋಕ ಅದಾಲತ್

## ಲೋಕ ಅದಾಲತ್ ಸದುಪಯೋಗ ಪಡೆದುಕೊಳ್ಳಲು ಸಾರ್ವಜನಿಕರಿಗೆ ಜಿಲ್ಲಾ ನ್ಯಾಯಾಧೀಶರಾದ ರಾಜೇಶ್ವರಿ ಹೆಗಡೆ ಕರೆ

ದಾವಣಗೆರೆ, ಫೆ. 18 - ಬರುವ ಮಾರ್ಚ್ 8 ರಂದು ನಡೆಯುವ ಲೋಕ ಅದಾಲತ್‌ನಲ್ಲಿ ನ್ಯಾಯಾಲಯದಲ್ಲಿ ಬಾಕಿ ಇರುವ, ರಾಜೀ ಆಗಬಹುದಾದ ಎಲ್ಲಾ ರೀತಿಯ ವ್ಯಾಜ್ಯಗಳನ್ನು ಬಗೆಹರಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಶ್ರೀಮತಿ ರಾಜೇಶ್ವರಿ ಎನ್. ಹೆಗಡೆ ತಿಳಿಸಿದರು.

ನಗರದ ಜಿಲ್ಲಾ ನ್ಯಾಯಾಲಯಗಳ ಸಂಕೀರ್ಣದಲ್ಲಿನ ವಕೀಲರ ಸಭಾಂಗಣದಲ್ಲಿ ಮಂಗಳವಾರ ಆಯೋಜಿಸಲಾಗಿದ್ದ ಪೂರ್ವಭಾವಿ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿ, ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ ಮತ್ತು ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರಿಗಳ ಆದೇಶದ ಮೇರೆಗೆ ಜಿಲ್ಲೆಯ ಎಲ್ಲಾ ನ್ಯಾಯಾಲಯಗಳಲ್ಲಿ ಮಾರ್ಚ್ 8 ರಂದು ರಾಷ್ಟ್ರೀಯ ಲೋಕ ಅದಾಲತ್ ಆಯೋಜಿಸಲಾಗಿದೆ ಎಂದರು.

ಸಿವಿಲ್ ವ್ಯಾಜ್ಯ, ಮೋಟಾರ್ ವಾಹನ ಅಪಘಾತ ಪರಿಹಾರದ ಪ್ರಕರಣಗಳು, ಭೂ ಸ್ವಾಧೀನ ಪ್ರಕರಣಗಳು, ವಿದ್ಯುತ್ ಮಂಡಳಿ ಮುಂತಾದ ಸ್ಥಳೀಯ ಸಂಸ್ಥೆಗಳ ಪರ ಮತ್ತು ವಿರುದ್ಧ ದಾಖಲಾದ ಪ್ರಕರಣಗಳು, ಬ್ಯಾಂಕ್, ಸಹಕಾರಿ ಸಂಘ, ಖಾಸಗಿ ವ್ಯಕ್ತಿಗಳ ನಡುವಿನ ಚೆಕ್ ಅಮಾನ್ಯ, ಹಣ ವಸೂಲಾತಿ ಪ್ರಕರಣಗಳಿಗೆ ಸಂಬಂಧಿಸಿದ ವ್ಯಾಜ್ಯಗಳು, ವೈವಾಹಿಕ ಪ್ರಕರಣಗಳು ವಿವಾಹ ವಿಚ್ಛೇದನ ಹೊರತುಪಡಿಸಿ ಇತರೆ ವ್ಯಾಜ್ಯಗಳನ್ನು ಬಗೆಹರಿಸಿಕೊಳ್ಳಬಹುದೆಂದರು.

ಜಿಲ್ಲಾ ಗ್ರಾಹಕರ ವೇದಿಕೆಯಲ್ಲಿನ ಪ್ರಕರಣಗಳು, ಕಾರ್ಮಿಕ ನಷ್ಟ ಪರಿಹಾರ ಪ್ರಕರಣಗಳು, ಕಾನೂನಿನಲ್ಲಿ ರಾಜೀ ಆಗಬಹುದಾದ ಎಲ್ಲಾ ತರಹದ ಕ್ರಿಮಿನಲ್ ಪ್ರಕರಣಗಳನ್ನು ಹಾಗೂ ವ್ಯಾಜ್ಯ ಪೂರ್ವ ಪ್ರಕರಣಗಳನ್ನು ಬಗೆಹರಿಸಿಕೊಳ್ಳಲು ಅವಕಾಶ ಕಲ್ಪಿಸಲಾಗುವುದು. ಸಿವಿಲ್ ವ್ಯಾಜ್ಯಗಳಲ್ಲಿ ಪಕ್ಷಗಾರರು ಲೋಕ್ ಅದಾಲತ್‌ನಲ್ಲಿ ರಾಜಿಯಾದರೆ ಪಕ್ಷಗಾರರು ಸರ್ಕಾರಕ್ಕೆ ಪಾವತಿಸಿರುವ ನ್ಯಾಯಾಲಯದ ಶುಲ್ಕವನ್ನು ವಾಪಸ್ಸು ಕೊಡಲು ಅವಕಾಶವಿದೆ ಎಂದು ತಿಳಿಸಿದರು.




1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಎಂ.ಹೆಚ್. ಅಣ್ಣಯ್ಯನವರ್ ಮಾತನಾಡಿ, ಲೋಕ್ ಅದಾಲತ್‌ನ ಮೂಲಕ ಸಾರ್ವಜನಿಕರಿಗೆ ಶೀಘ್ರ ಮತ್ತು ಕಡಿಮೆ ಖರ್ಚಿನಲ್ಲಿ ನ್ಯಾಯ ಒದಗಿಸುವಲ್ಲಿ ವಕೀಲರ ಪಾತ್ರ ಬಹು ಮುಖ್ಯವಾಗಿದೆ. ವಕೀಲರು ನ್ಯಾಯಾಲಯಕ್ಕೆ ಬರುವ ಕಕ್ಷಿದಾರರಿಗೆ ಅತ್ಯುತ್ತಮ ಮಾರ್ಗಗಳನ್ನು ನೀಡಬೇಕೆಂದು ಕರೆ ನೀಡಿದರು.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾವೀರ ಮ. ಕರೆಣ್ಣವರ ಮಾತನಾಡಿ, ಲೋಕ್ ಆದಾಲತ್‌ನಲ್ಲಿ ಉಭಯ ಪಕ್ಷಗಾರರು ಪರಸ್ಪರ ಒಪ್ಪಿದಲ್ಲಿ ಮಾತ್ರ ರಾಜೀ ಮಾಡಿಕೊಳ್ಳಬಹುದು. ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಆಶಯದಂತೆ ಲೋಕ್ ಆದಾಲತ್ ಮುಖಾಂತರ ಪ್ರಕರಣಗಳನ್ನು ಇತ್ಯರ್ಥ ಪಡಿಸಲು ಲೋಕ್‌ಆದಾಲತ್ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವಂತೆ ಸಾರ್ವಜನಿಕರು ವಿಶೇಷವಾಗಿ ಕಕ್ಷಿಗಾರರು ಹೆಚ್ಚಿನ ಸಂಖ್ಯೆಯಲ್ಲಿ ಲೋಕ ಅದಾಲತ್ ಅನ್ನು ಸದುಪಯೋಗ ಪಡಿಸಿಕೊಳ್ಳಬೇಕೆಂದರು.

ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್. ಹೆಚ್. ಅರುಣ ಕುಮಾರ್ ಮಾತನಾಡಿ, ದಾವಣಗೆರೆ ಜಿಲ್ಲೆಯ ವಕೀಲರು ತಮ್ಮ ಬಳಿ ಬರುವ ಕಕ್ಷಿಗಾರರಿಗೆ ಸರ್ವತೋಮುಖ ಅಭಿವೃದ್ಧಿಗಾಗಿ ಪ್ರಯತ್ನ ಮಾಡುತ್ತಾ ಬಂದಿದ್ದು, ಈ ಬಗ್ಗೆ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದಿಂದ ಪ್ರಶಂಸನೀಯ ಪತ್ರಗಳು ಕೂಡ ಬಂದಿವೆ ಎಂದು ನೆನಪಿಸಿದರು.

ಸಮಾಜಕ್ಕೆ ಒಳ್ಳೆಯ ಸಂದೇಶಗಳನ್ನು ಕೊಡುವ ಮತ್ತು ಸಾರ್ವಜನಿಕರಿಗೆ ಉಪಯೋಗವಾಗುವ ಲೋಕ್ ಅದಾಲತ್ ಮತ್ತು ಕಾನೂನು ಸೇವೆಗಳ ಪ್ರಕ್ರಿಯೆಗಳಲ್ಲಿ ವಕೀಲರು ಯಾವುದೇ ಹಿಂಜರಿಕೆ ಇಲ್ಲದೆ ಭಾಗವಹಿಸುತ್ತಾರೆಂದು ಎಲ್ಲಾ ವಕೀಲರ ಪರವಾಗಿ ಮಾತನಾಡಿದರು.

ಸಭೆಯಲ್ಲಿ ದಾವಣಗೆರೆ ಘಟಕದ ನ್ಯಾಯಾಧೀಶರು, ವಕೀಲರ ಸಂಘದ ಎಲ್ಲಾ ಪದಾಧಿಕಾರಿಗಳು, ಹಿರಿಯ ಮತ್ತು ಕಿರಿಯ ಹಾಗೂ ಮಹಿಳಾ ನ್ಯಾಯವಾದಿಗಳು ಭಾಗವಹಿಸಿದ್ದರು.

ಕಾರ್ಯದರ್ಶಿ ಎಸ್. ಬಸವರಾಜ್ ನಿರೂಪಿಸಿದರೆ, ಉಪಾಧ್ಯಕ್ಷ ಜಿ.ಕೆ. ಬಸವರಾಜ್ ಸ್ವಾಗತಿಸಿದರು.



# ಹರ್ಡೇಕರ್ ಮಂಜಪ್ಪ ಜಯಂತಿ ಸರ್ಕಾರದಿಂದ ಆಚರಿಸುವಂತಾಗಲಿ

**ವಿರಕ್ತ ಮಠದ ಶ್ರೀ ಬಸವಪ್ರಭು ಸ್ವಾಮೀಜಿ**

ದಾವಣಗೆರೆ, ಫೆ. 18- ಹೋರಾಟಗಾರರೂ, ದಾವಣಗೆರೆಯ ಮೊದಲ ಪತ್ರಕರ್ತರಾಗಿ ಸರಳ ಜೀವನ ನಡೆಸಿದ ಕರ್ನಾಟಕದ ಗಾಂಧಿ ಹರ್ಡೇಕರ್ ಮಂಜಪ್ಪ ಅವರ ಜಯಂತಿಯನ್ನು ಸರ್ಕಾರದಿಂದಲೇ ಆಚರಣೆ ಮಾಡಬೇಕು ಎಂದು ವಿರಕ್ತಮಠದ ಡಾ. ಶ್ರೀ ಬಸವಪ್ರಭು ಸ್ವಾಮೀಜಿ ಅಭಿಪ್ರಾಯಪಟ್ಟರು.

ಬಸವ ಬಳಗ, ಜಾಗತಿಕ ಲಿಂಗಾಯತ ಮಹಾಸಭಾ, ಜಿಲ್ಲಾ ಶರಣ ಸಾಹಿತ್ಯ ಪರಿಷತ್, ಕದಳಿ ಮಹಿಳಾ ವೇದಿಕೆ, ವಿರಕ್ತಮಠ, ಬಸವ ಕಲಾಲೋಕದ ಸಹಯೋಗದಲ್ಲಿ ಆಯೋಜಿಸಿದ್ದ ಕರ್ನಾಟಕದ ಗಾಂಧಿ ಹರ್ಡೇಕರ್ ಮಂಜಪ್ಪ ಅವರ ಜಯಂತಿ ಕಾರ್ಯಕ್ರಮದಲ್ಲಿ ಹರ್ಡೇಕರ್ ಮಂಜಪ್ಪ ಅವರ ಪುತ್ಥಳಿಗೆ ಪುಷ್ಪಾರ್ಚನೆ ನೆರವೇರಿಸಿ ಅವರು ಮಾತನಾಡಿದರು.

ಪ್ರತಿ ವರ್ಷ ಮಹಾತ್ಮರ, ದಾರ್ಶನಿಕರ ಜಯಂತಿಯನ್ನು ಸರ್ಕಾರದ ವತಿಯಿಂದ ಆಚರಣೆ ಮಾಡಲಾಗುತ್ತಿದೆ. ಅದರಂತೆ ಕರ್ನಾಟಕ ಗಾಂಧಿ ಎನಿಸಿಕೊಂಡ ಮತ್ತು ಹೋರಾಟಗಾರರೂ ಆದ ಹರ್ಡೇಕರ್ ಮಂಜಪ್ಪ ಅವರ ಜಯಂತಿ ಸಹ ಸರ್ಕಾರದಿಂದಲೇ ಆಚರಿಸುವಂತೆ ಎಲ್ಲರೂ ನಿಯೋಗದ ಮೂಲಕ ಮುಖ್ಯಮಂತ್ರಿ ಅವರನ್ನು ಭೇಟಿ ಮಾಡಿ ಒತ್ತಾಯಿಸಬೇಕೆಂದರು.

ಹರ್ಡೇಕರ್ ಮಂಜಪ್ಪ ಅವರ ಜೀವನದ ಆದರ್ಶಗಳು, ವಿಚಾರಧಾರೆಗಳನ್ನು ಮಕ್ಕಳಿಗೆ ಮತ್ತು ಯುವ ಜನರಿಗೆ ತಿಳಿಸುವ ನಿಟ್ಟಿನಲ್ಲಿ ಪಠ್ಯದಲ್ಲಿ ಅಳವಡಿಸುವ ಅಗತ್ಯವಿದೆ. ಯುವಕರೇ ದೇಶದ ಶಕ್ತಿಯಾಗಿರುವ ಕಾರಣ ಅವರಿಂದಲೇ ಆಚಾರ- ವಿಚಾರಗಳು ಉಳಿಯುವಂತಹದ್ದು ಎಂದು ಹೇಳಿದರು.

1913 ರಲ್ಲಿ ಮೊದಲ ಬಾರಿಗೆ ನಗರದ ವಿರಕ್ತಮಠದಲ್ಲಿ ಬಸವ ಜಯಂತಿಗೆ ಚಾಲನೆ ನೀಡಲಾಗಿದ್ದು, ಅಂದು ಪ್ರಾರಂಭವಾದ ಬಸವ ಜಯಂತಿಯನ್ನು ದೇಶ, ವಿದೇಶಗಳಲ್ಲೂ ಆಚರಿಸುತ್ತಾ ಬರಲಾಗುತ್ತಿದೆ ಎಂದರು.

ಇದೇ ವೇಳೆ ಬಾಗಲಕೋಟೆಯ ಮಹಾ ಮಲ್ಲಪ್ಪ ಪಟ್ಟಣಶೆಟ್ಟಿ ಹರ್ಡೇಕರ್ ಮಂಜಪ್ಪ ಅವರನ್ನು ಕುರಿತು ಮಾತನಾಡಿದರು. ಮಹಾನಗರ ಪಾಲಿಕೆ ಉಪ ಮೇಯರ್ ಸೋಗಿ ಶಾಂತಕುಮಾರ್, ಬಸವ ಬಳಗದ ಅಧ್ಯಕ್ಷ ಹುಚ್ಚಪ್ಪ ಮೇಷ್ಟ್ರು, ಜಾಗತಿಕ ಲಿಂಗಾಯತ ಮಹಾಸಭಾದ ಆವರಗೆರೆ ರುದ್ರಮುನಿ, ವಿರಕ್ತಮಠದ ಕಾರ್ಯದರ್ಶಿ ಕಣ್ವಕುಪ್ಪಿ ಮುರುಗೇಶಪ್ಪ, ಶರಣ ಸಾಹಿತ್ಯ ಪರಿಷತ್ ಸೇರಿದಂತೆ ಇತರೆ ಸಂಘಟನೆಗಳ ಪದಾಧಿಕಾರಿಗಳಾದ ಮಹಾಂತೇಶ್ ಅಗಡಿ, ಶಶಿಧರ ಬಸಾಪುರ, ಗೋಪನಾಳ್ ರುದ್ರೇಗೌಡ, ಕೆ.ಬಿ. ಪರಮೇಶ್ವರಪ್ಪ ಕಕ್ಕರಗೊಳ್ಳ, ಶಿವಾನಂದ ಗುರೂಜಿ, ಲಂಬಿ ಮುರುಗೇಶ್, ಚನ್ನಬಸವ ಶೀಲವಂತ್, ವೀಣಾ ಮಂಜುನಾಥ್, ಭುವನೇಶ್ವರಿ ತಾಯಿ, ಶಿವಬಸಮ್ಮ, ಕುಸುಮಾ ಲೋಕೇಶ್, ಗಾಯತ್ರಿ ವಸ್ತ್ರದ್ ಸೇರಿದಂತೆ, ಅನೇಕರಿದ್ದರು.

# ನಗರದಲ್ಲಿ ಇಂದು ಕೊಟ್ಟೂರು ಪಾದಯಾತ್ರಿಗಳಿಗೆ ಬೀಳ್ಕೊಡುಗೆ



ಕೊಟ್ಟೂರು ಗುರುಬಸವ ರಾಜೇಂದ್ರ ಸ್ವಾಮಿ ಪಾದಯಾತ್ರೆ ಟ್ರಸ್ಟ್ ವತಿಯಿಂದ ಇಂದು ಮತ್ತು ನಾಳೆ 46ನೇ ವರ್ಷದ ಸಮಗ್ರ ಪಾದಯಾತ್ರೆ ಬೀಳ್ಕೊಡುವ ಸಮಾರಂಭ ಹಾಗೂ '27ನೇ ವರ್ಷದ ಔಷಧೋಪಚಾರ ಸೇವೆಯ ಸಮಾರೋಪ' ನಡೆಯಲಿದೆ.

ಇಂದು ಸಂಜೆ 5 ಗಂಟೆಗೆ ಗುರು ಶಿವಯೋಗಿ ಬಕ್ಕೇಶ್ವರ ಮಹಾಸ್ವಾಮಿ ದೇವಸ್ಥಾನ ಆವರಣದಲ್ಲಿ ಪಾದಯಾತ್ರೆ ಬೀಳ್ಕೊಡುವ ಸಮಾರಂಭ ನಡೆಯಲಿದೆ. ಹೆಬ್ಬಾಳು ವಿರಕ್ತ ಮಠದ ರುದ್ರೇಶ್ವರ ಶ್ರೀಗಳು, ವಿರಕ್ತ ಮಠದ ಡಾ. ಬಸವಪ್ರಭು ಸ್ವಾಮೀಜಿ, ಅಯ್ಯನಹಳ್ಳಿ ರಂಭಾಪುರಿ ಶಾಖಾ ಮಠದ ಮಹೇಶ್ವರ ಶಿವಾಚಾರ್ಯ ಶ್ರೀ, ಕೊಟ್ಟೂರು ಹಿರೇಮಠದ ಶಿವಪ್ರಕಾಶ ಸ್ವಾಮೀಜಿ ಹಾಗೂ ಕೋಣಂದೂರು ಬೃಹನ್ಮಠದ ಪಂಡಿತಾರಾಧ್ಯ ಶಿವಾ ಚಾರ್ಯ ಶ್ರೀಗಳು ಸಾನಿಧ್ಯ ವಹಿಸುವರು. ಟ್ರಸ್ಟಿನ ಗೌರವಾಧ್ಯಕ್ಷ ಡಾ.ಅಥಣಿ ಎಸ್. ವೀರಣ್ಣ, ಶಾಸಕ ಶಾಮನೂರು ಶಿವಶಂಕರಪ್ಪ, ಎಸ್.ಎಸ್. ಮಲ್ಲಿಕಾರ್ಜುನ್ ಹಾಗೂ ಡಾ. ಪ್ರಭಾ ಮಲ್ಲಿಕಾರ್ಜುನ್, ಜಿ.ಎಂ. ಗಂಗಾಧರ ಸ್ವಾಮಿ ಭಾಗವಹಿಸುವರು.

ನಾಳೆ ಗುರುವಾರ ಸಂಜೆ 5 ಗಂಟೆಗೆ ಅರಸೀಕೆರೆ ಕೋಲಶಾಂತೇಶ್ವರ ವಿರಕ್ತಮಠದಲ್ಲಿ '27ನೇ ವರ್ಷದ ಔಷಧೋಪಚಾರ ಸೇವೆಯ ಸಮಾರೋಪ' ನಡೆಯಲಿದ್ದು, ಕೋಲಶಾಂತೇಶ್ವರ ವಿರಕ್ತ ಮಠದ ಶಾಂತಲಿಂಗ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸುವರು.

ಪಾದಯಾತ್ರೆ ಟ್ರಸ್ಟಿನ ಗೌರವಾಧ್ಯಕ್ಷ ಡಾ.ಅಥಣಿ ಎಸ್. ವೀರಣ್ಣ, ಜಿ.ಎ. ಗಂಗಾಧರ ಸ್ವಾಮಿ, ಜಿ.ಪಿ. ರವಿ ಪ್ರಸಾದ್, ಡಾ.ಕೆ. ಸಿದ್ದಪ್ಪ, ಎಂ.ಎಸ್. ಗೀತಾ, ಎಸ್. ಆರ್. ಪ್ರಸನ್ನ ಕುಮಾರ್, ಡಾ.ಬಿ.ಯು. ಯೋಗೇಂದ್ರ ಕುಮಾರ್ ಪಾಲ್ಗೊಳ್ಳಲಿದ್ದಾರೆ.

# ಮಹಿಳಾ ಸೇವಾ ಸಮಾಜ ಶಾಲೆಯಲ್ಲಿ ವಿಕಾಸ ಕಾರ್ಯಕ್ರಮ



ದಾವಣಗೆರೆ, ಫೆ. 18- ಡಾ. ಹೆಚ್. ಎಫ್.ಕಟ್ಟೀಮನಿ ಪ್ರೌಢಶಿಕ್ಷಣ ಪ್ರತಿಷ್ಠಾನ, ಅಪರ ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಧಾರವಾಡ ಹಾಗೂ ಇದರ ದಾವಣಗೆರೆ ಘಟಕ ಮತ್ತು ಮಹಿಳಾ ಸೇವಾ ಸಮಾಜ ಪ್ರೌಢಶಾಲೆಯ ಸಂಯುಕ್ತಾಶ್ರಯದಲ್ಲಿ ವಿಶಿಷ್ಟ ಶಾಲಾ ಕಾರ್ಯಕ್ರಮದಡಿಯಲ್ಲಿ ವಿದ್ಯಾರ್ಥಿಗಳ ಸದಭಿರುಚಿ ವಿಕಾಸ ಕಾರ್ಯಕ್ರಮ ಚಟುವಟಿಕೆಗಳ ಸಮಾರೋಪ ಸಮಾರಂಭವನ್ನು ಮಹಿಳಾ ಸೇವಾ ಸಮಾಜ ಪ್ರೌಢಶಾಲೆಯಲ್ಲಿ ನಡೆಸಲಾಯಿತು. ಸಂಸ್ಥೆಯ ಕಾರ್ಯದರ್ಶಿ ಶ್ರೀಮತಿ ನೀಲಗುಂದ ಜಯಮ್ಮ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಮಕ್ಕಳ ತಜ್ಞ ಡಾ. ಸಿ.ಆರ್. ಬಾಣಾಪುರ ಮಠ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಮುಖ್ಯ ಅತಿಥಿಗಳಾಗಿ ಎಸ್ಎಸ್ಐಎಂಎಸ್ ಮಕ್ಕಳ ವಿಭಾಗದ ಪ್ರಾಧ್ಯಾಪಕರಾದ ಡಾ. ಲತಾ ಜಿ.ಎಸ್. ಮಾತನಾಡಿದರು.

ಬೂಸ್ನೂರು ಪ್ರಕಾಶ್ ಸ್ವಾಗತಿಸಿದರು. ಎಸ್.ಪಿ. ರಾಜಪ್ಪ ಕಾರ್ಯಕ್ರಮ ನಿರೂಪಿಸಿದರು. ಶ್ರೀಮತಿ ಜ್ಯೋತಿ ಟಿ. ವಂದಿಸಿದರು.

ಮುಖ್ಯೋಪಾಧ್ಯಾಯರಾದ ಆರ್. ದಾಕ್ಷಾಯಣಮ್ಮ ಹಾಗೂ ಮಹಿಳಾ ಸೇವಾ ಸಮಾಜದ ಎಲ್ಲಾ ನಿರ್ದೇಶಕರು ಉಪಸ್ಥಿತರಿದ್ದರು.

## ಮಾರ್ಚ್ 12ರಂದು ರೇಣುಕಾಚಾರ್ಯ ಜಯಂತಿ

ಬಾಳೆಹೊನ್ನೂರು, ಫೆ. 18 - ಶ್ರೀ ಜಗದ್ಗುರು ರಂಭಾಪುರಿ ವೀರಸಿಂಹಾಸನ ಮಹಾಸಂಸ್ಥಾನ ಪೀಠದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗ ಮಾನೋತ್ಸವ ಹಾಗೂ ಕ್ಷೇತ್ರನಾಥ ಶ್ರೀ ವೀರಭದ್ರಸ್ವಾಮಿ ಮಹಾರಥೋತ್ಸವದ ಅಂಗವಾಗಿ ಬರುವ ಮಾರ್ಚ್ 11 ರಿಂದ 14ರವರೆಗೆ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.


# ಮೈಸೂರು ಮುಕ್ತ ವಿವಿ ಕುಲ ಸಚಿವ ಡಾ.ಹೆಚ್. ವಿಶ್ವನಾಥ್‌ಗೆ ಪ್ರಶಸ್ತಿ



ದಾವಣಗೆರೆ, ಫೆ. 18 - ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಸಚಿವ ಡಾ.ಹೆಚ್. ವಿಶ್ವನಾಥ್ ಅವರು ಕನ್ನಡ ಪ್ರಭ - ಏಷ್ಯಾನೆಟ್ ಸುವರ್ಣ ನ್ಯೂಸ್ ಸಂಸ್ಥೆ ವತಿಯಿಂದ ನೀಡಲಾಗುವ ಸುವರ್ಣ ಕನ್ನಡಿಗ - 2025 ವಾರ್ಷಿಕ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಡಾ.ಹೆಚ್. ವಿಶ್ವನಾಥ್ ಅವರ ಶೈಕ್ಷಣಿಕ ಕ್ಷೇತ್ರದ ಅಪಾರ ಸಾಧನೆ ಮತ್ತು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲ ಸಚಿವ (ಪರೀಕ್ಷಾಂಗ) ಸ್ಥಾನದಲ್ಲಿನ ಶೈಕ್ಷಣಿಕ ಸಾಧನೆಯನ್ನು ಪರಿಗಣಿಸಿ ಈ ಪ್ರಶಸ್ತಿ ನೀಡಲಾಗಿದ್ದು, ಬೆಂಗಳೂರಿನ ತಾಜ್ ಪಂಚತಾರಾ ಹೋಟೆಲ್‌ನಲ್ಲಿ ಇಂದು ಸಂಜೆ ನಡೆದ ವರ್ಣರಂಜಿತ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಯಿತು.

# ನಾಳೆ ಸರ್ಕಾರಿ ನೌಕರರ ಸಮಾವೇಶ



ದಾವಣಗೆರೆ, ಫೆ. 18- ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ದಿಂದ ನಾಡಿದ್ದು ದಿನಾಂಕ 20ರಂದು ಬೆಳಿಗ್ಗೆ 11.30ಕ್ಕೆ ಬೆಂಗಳೂರಿನ ತ್ರಿಪುರ ವಾಸಿನಿ ಅರಮನೆ ಆವರಣದಲ್ಲಿ ಸಂಘದ ಚುನಾಯಿತ ನಿರ್ದೇಶಕರು ಹಾಗೂ ಪದಾಧಿಕಾರಿಗಳ ಸಮಾವೇಶ ಮತ್ತು ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದೆ.

ಸಮಾವೇಶವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಲಿದ್ದು, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮುಖ್ಯ ಅತಿಥಿಯಾಗಿ ಉಪಸ್ಥಿತರಿರುವರು. ಅಧ್ಯಕ್ಷತೆಯನ್ನು ರಾಜ್ಯ ಅಧ್ಯಕ್ಷ ಸಿ. ಎಸ್. ಷಡಕ್ಷರಿ ಅವರು ವಹಿಸಲಿದ್ದು, ಅಂದು ಬೆಳಿಗ್ಗೆ 10 ಗಂಟೆಗೆ ಲೋಕಾಯುಕ್ತ ನ್ಯಾಯಮೂರ್ತಿ ಬಿ. ಎಸ್. ಪಾಟೀಲ್ ಆಡಳಿತದಲ್ಲಿ ದಕ್ಷತೆ, ಪಾರದಕ್ಷತೆ, ಪ್ರಾಮಾಣಿಕತೆ ಕುರಿತು ಉಪನ್ಯಾಸ ನೀಡಲಿದ್ದಾರೆ.

ಸಾರ್ವಜನಿಕ ಸೇವೆಯಲ್ಲಿ ನೌಕರರ ಪಾತ್ರದ ಕುರಿತು ಸರ್ಕಾರದ ಮುಖ್ಯ ಕಾರ್ಯದರ್ಶಿ ಶ್ರೀಮತಿ ಶಾಲಿನಿ ರಜನೀಶ್ ಉಪನ್ಯಾಸ ನೀಡಲಿದ್ದಾರೆ. ಮಾಹಿತಿ ಹಕ್ಕು ಅಧಿನಿಯಮ ಪರಿಹಾರ ಕುರಿತು ರಾಜ್ಯ ಮಾಹಿತಿ ಆಯೋಗ ಕಲಬುರ್ಗಿ ಪೀಠದ ಆಯುಕ್ತ ರವೀಂದ್ರನಾಥ್ ತಾಕಪ್ಪ ಉಪನ್ಯಾಸ ನೀಡಲಿದ್ದಾರೆ ಎಂದು ಸಂಘದ ದಾವಣಗೆರೆ ಜಿಲ್ಲಾ ಅಧ್ಯಕ್ಷ ವೀರೇಶ್ ಎಸ್. ಒಡೇನಪುರ ತಿಳಿಸಿದ್ದಾರೆ.

# ಇನ್ನರ್‌ವ್ಹೀಲ್‌ನಿಂದ ಮೊಬೈಲ್ ಬಳಕೆಯ ಜಾಗೃತಿ ಕಾರ್ಯಕ್ರಮ




ದಾವಣಗೆರೆ, ಫೆ. 18- ನಗರದ ಇನ್ನರ್‌ವ್ಹೀಲ್ ಸಂಸ್ಥೆಯ ವತಿಯಿಂದ ಜಿ.ಎಂ. ನರ್ಸರಿ, ಪಿಇಎಸ್ ಹಿರಿಯ ಪ್ರಾಥಮಿಕ ಶಾಲೆ ಹಾಗೂ ಅಥಣಿ ಪ್ರೌಢಶಾಲೆ ಆವರಣದಲ್ಲಿ ಮೊಬೈಲ್ ಬಳಕೆಯ ಜಾಗೃತ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಮುಖ್ಯ ಅತಿಥಿಗಳಾಗಿ ಆಯುರ್ವೇದ ಡಾ. ಪಿ.ಎಂ. ರಾಜೇಶ್ವರಿ ಆಗಮಿಸಿ ಮಾತನಾಡಿ, ಮಾನವ ಎಲ್ಲಾ ಅಂಗಗಳಲ್ಲಿ ಕಣ್ಣು ಬಹಳ ಮುಖ್ಯವಾಗಿದ್ದು, ಕಣ್ಣಿನ ರಕ್ಷಣೆ ನಮ್ಮೆಲ್ಲರ ಜವಾಬ್ದಾರಿಯಾಗಿರುತ್ತದೆ. ಜ್ಞಾನದ ಜೊತೆಗೆ ದೈಹಿಕ ಮತ್ತು ಮಾನಸಿಕ ಆರೋಗ್ಯ ಸಹ ಬಹಳ ಮುಖ್ಯ. ಮೊಬೈಲ್ ಬಳಸುವಲ್ಲಿ ಪೋಷಕರು ಒಂದು ರೀತಿ ಕಾರಣ ಎಂದು ತಿಳಿಸಿದರು.

ಮೊಬೈಲ್ ಬಳಕೆಯಿಂದ ಮನಸ್ಸಿನ ಮೇಲೆ, ಕಣ್ಣಿನ ಮೇಲೆ ಹೇಗೆ ಪರಿಣಾಮ ಬೀರುತ್ತದೆ ಎಂದು ಡಾ. ರಾಜೇಶ್ವರಿ ತಿಳಿಸಿದರು.

ಶ್ರೀಮತಿ ಪ್ರೇಮ ಮಹೇಶ್ವರಪ್ಪ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿ ಭಾಗ್ಯ ವೀರಣ್ಣ, ಶ್ರೀ ವಿನಾಯಕ ಎಜುಕೇಷನ್ ಟ್ರಸ್ಟ್‌ನ ಸದಸ್ಯ ಅಥಣಿ ಪ್ರಶಾಂತ್, ಶಾಲೆ ಮುಖ್ಯೋಪಾಧ್ಯಾಯರಾದ ದಿತಾ ಡಿ. ಮೆನನ್ ಮತ್ತು ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಛತ್ರಪತಿ ಶಿವಾಜಿ



ಮಧ್ಯಕಾಲೀನ  
ಭಾರತ  
ಇತಿಹಾಸದ ಧ್ರುವ  
ತಾರೆ  
ಹೈಂದವಿ ರಾಜ್ಯದ  
ದೊರೆ  
ವೀರಮಾತೆ ಜೀಜಾಬಾಯಿಯ ಸುತ  
ಅಷ್ಟ ಮಂತ್ರಿಮಂಡಲದ ಪಿತ

ಗೆರಿಲ್ಲಾ ಯುದ್ಧ ತಂತ್ರದ ರೂವಾರಿ  
ಶತ್ರುಗಳ ವಿರುದ್ಧ ರಣಭೇರಿ  
ಸರ್ವಧರ್ಮದ ಹೃದಯ ಸಾಮ್ರಾಟ  
ಅಚ್ಚಳಿಯದೇ ಉಳಿದಿದೆ ಚರಿತ್ರೆಯ  
ಪುಟ

ಮರಾಠ ಸಾಮ್ರಾಜ್ಯದ ಸ್ಥಾಪಕ  
ಮಾವಳಿ ಜನಾಂಗದ ನಾಯಕ  
ಭಾರತದ ನೌಕಾ ಸೇನೆಯ ಅಧಿಪತಿ  
ವೈರಿಗಳ ಎದೆ ಬಗಿದ ಛತ್ರಪತಿ

ಭಾರತದ ಚರಿತೆಯಲ್ಲಿ ಅನನ್ಯ ವ್ಯಕ್ತಿತ್ವ  
ಕತ್ತರಿಸುವ ಖಡ್ಗದಲ್ಲೂ ಮಾತೆಯ  
ಮಾತೃತ್ವ  
ಕತ್ತಲೆಯ ಬೆಳಗಲು ಬಂದ ಹಣತೆ  
ಧೈರ್ಯ,ಶೌರ್ಯ,ಸತ್ಯವೇ ಬದುಕಿನ  
ಘನತೆ.

**ಬಸವರಾಜ.ಕರುವಿನ, ಬಸವನಾಳು**

# ನಗರದಲ್ಲಿ ಇಂದಿನಿಂದ ಕೃಷಿ ಉತ್ಸವ

ದಾವಣಗೆರೆ, ಫೆ. 18- 'ಸುಸ್ಥಿರ ಕಡೆಗೆ ನಮ್ಮ ನಡಿಗೆ' ಎಂಬ ಧ್ಯೇಯ ದೊಂದಿಗೆ ಜಿಲ್ಲೆಯಲ್ಲಿ ಹಸಿರೋತ್ಸವ ಫೋರಂ ವತಿಯಿಂದ ಬಾಲಕರ ಸರ್ಕಾರಿ ಪ್ರೌಢಶಾಲಾ ಮೈದಾನದಲ್ಲಿ ನಾಳೆ ದಿನಾಂಕ 19 ರಿಂದ 23 ರವರೆಗೆ ಬೃಹತ್ ಕೃಷಿ ಉತ್ಸವ ನಡೆಯಲಿದೆ ಎಂದು ಕೃಷಿ ವಿಜ್ಞಾನಿ ಪ್ರೇಮ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಕೃಷಿ ಉತ್ಸವದಲ್ಲಿ ಕರ್ನಾಟಕ ರಾಜ್ಯ ತೋಟಗಾರಿಕೆ ಮತ್ತು ಕೃಷಿ ಇಲಾಖೆಗಳ ಸಂಪೂರ್ಣ ಸಹಯೋಗ ಮತ್ತು ಎಲ್ಲಾ ಕೃಷಿ ಸಂಬಂಧಿತ ಇಲಾಖೆಗಳ ಸಹಕಾರ ದೊರಕುತ್ತಿದ್ದು, ಈ ಕೃಷಿ ಉತ್ಸವವನ್ನು ಬೃಹತ್ ಕೃಷಿ ಮೇಳ ಎಂದು ಕರೆದರೆ ತಪ್ಪಾಗಲಾರದು ಎಂದರು.

ಈ ಉತ್ಸವದಲ್ಲಿ 300 ಕ್ಕೂ ಹೆಚ್ಚು ಮಳಿಗೆಗಳನ್ನು ತೆರೆಯಲಾಗುತ್ತಿದೆ ಎಂದು ಅವರು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ನೀತಾ ರೈನಾ, ಆರತಿ ಉಪಸ್ಥಿತರಿದ್ದರು.

## ತ್ರಿವೇಣಿ ಸಂಗಮದಲ್ಲಿ ರಾಘುವೇಂದ್ರ ಗುರೂಜಿ



ದಾವಣಗೆರೆ, ಫೆ.18- ಪ್ರಯಾಗ್‌ರಾಜ್‌ನ ತ್ರಿವೇಣಿ ಸಂಗಮದಲ್ಲಿ ನಡೆಯುತ್ತಿರುವ ಮಹಾಕುಂಬಮೇಳದಲ್ಲಿ ಕಳೆದ ಮೌನಿ ಅಮಾವಾಸ್ಯೆಯಂದು ನಗರದ ಆದರ್ಶ ಯೋಗ ಪ್ರತಿಷ್ಠಾನದ ಯೋಗಗುರು ರಾಘುವೇಂದ್ರ ಗುರೂಜಿ ಅವರು ಶಿಕ್ಷಕ ವೀರಭದ್ರಸ್ವಾಮಿ ಮತ್ತು ಮಹಾಂತೇಶ್ ಅವರ ಜೊತೆಗೂಡಿ ಭಾಗವಹಿಸಿ, ಪವಿತ್ರ ಸ್ನಾನ ಮಾಡಿ ಪೂಜೆ ಸಲ್ಲಿಸಿದರು.

# ಪರವಾನಗಿ ರಹಿತ ತಂಬಾಕು ಬೆಳೆ ಮಾರಾಟಕ್ಕೆ ಅವಕಾಶಕ್ಕೆ ನಿರ್ಧಾರ

ಬೆಂಗಳೂರು,ಫೆ.18- ರಾಜ್ಯದ ವಿವಿಧ ಭಾಗಗಳಲ್ಲಿ ಬೆಳೆಯಲಾದ ಪರವಾನಗಿ ರಹಿತ ತಂಬಾಕು ಬೆಳೆ ಮಾರಾಟಕ್ಕೆ ಅವಕಾಶ ನೀಡುವ ಹಾಗೂ ಬೆಳೆಗಾರರಿಗೆ ವಿಧಿಸಲಾಗುತ್ತಿದ್ದ ದಂಡ ಮನ್ನಾ ಮಾಡಲು ಕೇಂದ್ರ ಸರ್ಕಾರ ನಿರ್ಧರಿಸಿದೆ.

ಕಳೆದ ಮೇ, ಜುಲೈನಲ್ಲಿ ಅತಿವೃಷ್ಟಿಯಿಂದಾಗಿ ರಾಜ್ಯದಲ್ಲಿ ಬೆಳೆಯುವ ಎಫ್‌ಸಿವಿ ತಂಬಾಕು ಬೆಳೆ ಇಳುವರಿ ಗಣನೀಯವಾಗಿ ಕುಸಿದು ಎಲೆಗಳ ಗುಣಮಟ್ಟಕ್ಕೆ ಹಾನಿಯಾಗಿ ಬೆಳೆಗಾರರು ಭಾರೀ ನಷ್ಟಕ್ಕೆ ತುತ್ತಾಗಿದ್ದು, ಕೇಂದ್ರ ಸರ್ಕಾರ ನೆರವಿಗೆ ಧಾವಿಸಿರುವುದರಿಂದ ಸಾವಿರಾರು ಬೆಳೆಗಾರರಿಗೆ ಅನುಕೂಲವಾಗಲಿದೆ. ಎಫ್‌ಸಿವಿ ತಂಬಾಕು ರಾಜ್ಯದ 53,325 ಹೆಕ್ಟೇರ್‌ನಲ್ಲಿ ಬೆಳೆಯಲಾಗುತ್ತಿದ್ದು, 40,487 ನೋಂದಾಯಿತ ಹಾಗೂ 12,838 ಪರವಾನಗಿ ರಹಿತ ಬೆಳೆಗಾರರಿದ್ದಾರೆ.

# ರೈತರಿಗೆ 7 ಗಂಟೆಗಿಂತ ಹೆಚ್ಚು ವಿದ್ಯುತ್ ಸಂಪರ್ಕ ಕಲ್ಪಿಸಲು ಸಿದ್ದತೆ

## ಕುಸುಮ್ 'ಸಿ' ಯೋಜನೆಯಡಿ ಹೆಚ್ಚು ವಿದ್ಯುತ್ ಉತ್ಪಾದನೆ : ಇಂಧನ ಸಚಿವ ಕೆ.ಜೆ. ಜಾರ್ಜ್

ದಾವಣಗೆರೆ, ಫೆ. 18 - ರಾಜ್ಯದ ರೈತರಿಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ರೈತರಿಗೆ ಈಗಿರುವ 7 ಗಂಟೆಗಿಂತ ಹೆಚ್ಚು ವಿದ್ಯುತ್ ಸಂಪರ್ಕ ಕಲ್ಪಿಸಲು ಸಿದ್ದತೆ ನಡೆಸಲಾಗುತ್ತಿದೆ ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ಅವರು ತಿಳಿಸಿದರು.

ಇಲ್ಲಿನ ಜಿಲ್ಲಾ ಕಾಂಗ್ರೆಸ್ ಕಛೇರಿಗೆ ಇಂದು ಭೇಟಿ ನೀಡಿ ಪಕ್ಷದ ಕಾರ್ಯಕರ್ತರನ್ನುದ್ದೇಶಿಸಿ ಮಾತನಾಡಿದ ಅವರು, ಕುಸುಮ್ ಸಿ ಮೂಲಕ ಹೆಚ್ಚಿನ ವಿದ್ಯುತ್ ಉತ್ಪಾದನೆಗೆ ಅಗತ್ಯ ಕ್ರಮ ಕೈಗೊಳ್ಳಲಾಗಿದ್ದು, ಇದರಿಂದ ರೈತರಿಗೆ ಈಗಿರುವ 7 ಗಂಟೆಗಿಂತ ಹೆಚ್ಚು ವಿದ್ಯುತ್ ಸಂಪರ್ಕ ಕಲ್ಪಿಸಲಾಗುವುದು ಎಂದರು.



ಅದೇ ರೀತಿ ರೈತರು ಹೊಲಗಳಲ್ಲಿ ನಿರ್ಮಿಸಿರುವ ಮನೆಗಳಿಗೂ ಸಹ ನಿರಂತರ ಜ್ಯೋತಿ ಮೂಲಕ ಸಿಂಗಲ್ ಫೇಸ್ ವಿದ್ಯುತ್ ಸೌಲಭ್ಯ ನೀಡಲಾಗುತ್ತಿದ್ದು, ಇದನ್ನು ರೈತರು ಸದ್ಬಳಕೆ ಮಾಡಿಕೊಳ್ಳಬೇಕು. ಯಾವುದೇ ಕಾರಣಕ್ಕೂ ಮೋಟಾರ್‌ಗೆ ಬಳಸಿಕೊಳ್ಳಬಾರದೆಂದು ಅವರು ಶೀಘ್ರದಲ್ಲೇ 4 ಲಕ್ಷಕ್ಕೂ ಹೆಚ್ಚು ಅಕ್ರಮವಾಗಿ ವಿದ್ಯುತ್ ಸಂಪರ್ಕವನ್ನು ಪಡೆದಿರುವವರಿಗೆ ಸಕ್ರಮಗೊಳಿಸಲಾಗುವುದು ಎಂದರು.

ಪಾವಗಡ ಬಳಿ ಈಗಾಗಲೇ 10 ಸಾವಿರ ಎಕರೆಯಲ್ಲಿ ಸೋಲಾರ್ ಸಿಸ್ಟಮ್ ಮೂಲಕ ವಿದ್ಯುತ್ ಉತ್ಪಾದಿಸಲಾಗುತ್ತಿದ್ದು, ಇನ್ನು 10 ಸಾವಿರ ಎಕರೆಯಲ್ಲಿ ವಿದ್ಯುತ್ ಉತ್ಪಾದನೆಗೆ ಈಗಾಗಲೇ ಕ್ರಮ ಕೈಗೊಂಡಿದ್ದು ರೈತರು ಸಹ ಮುಂದೆ ಬಂದಿದ್ದಾರೆ ಎಂದು ತಿಳಿಸಿದ ಅವರು ರೈತರಾಗಲೀ, ಸಾರ್ವಜನಿಕರಾಗಲೀ ಅಕ್ರಮ ವಿದ್ಯುತ್ ಬಳಸಿಕೊಳ್ಳಬಾರದೆಂದು ಎಚ್ಚರಿಕೆ ನೀಡಿದರು.

ನಾನು ಕಾಂಗ್ರೆಸ್ ಪಕ್ಷದ ವಿದ್ಯಾರ್ಥಿ, ಯುವ ಕಾಂಗ್ರೆಸ್ ಕಾರ್ಯಕರ್ತನಾಗಿ ಪಕ್ಷದಲ್ಲಿ ಸೇವೆ ಸಲ್ಲಿಸುತ್ತಾ ಬಂದಿದ್ದು, ಕಾಂಗ್ರೆಸ್ ಪಕ್ಷದ ಆಡಳಿತದಲ್ಲಿ ಸಚಿವನಾಗಿ ಅನೇಕ ಖಾತೆಗಳ ಜವಾಬ್ದಾರಿ ಹೊತ್ತಿದ್ದೇನೆ.

ಕಾಂಗ್ರೆಸ್ ಇತಿಹಾಸವೆಂದರೆ ದೇಶದ ಇತಿಹಾಸವಾಗಿದ್ದು, ಪಕ್ಷ ನಿಷ್ಠೆಯಿಂದ ಕಾರ್ಯನಿರ್ವಹಿಸುವಂತೆ ಕಾರ್ಯಕರ್ತರಿಗೆ ಸಚಿವ ಜಾರ್ಜ್ ಕರೆ ನೀಡಿದರು.

ಕಾಂಗ್ರೆಸ್ ಜಿಲ್ಲಾಧ್ಯಕ್ಷ ಹೆಚ್.ಬಿ. ಮಂಜಪ್ಪ, ಕೆಪಿಸಿಸಿ ಸದಸ್ಯ ಮುದೇಗೌಡ್ರು ಗಿರೀಶ್, ಮಹಿಳಾ ಕಾಂಗ್ರೆಸ್ ಜಿಲ್ಲಾಧ್ಯಕ್ಷೆ ಶ್ರೀಮತಿ ಅನಿತಾಬಾಯಿ ಮಾಲತೇಶ್, ಕೊಡಪಾನ ದಾದಾಪೀರ್ ಮಾತನಾಡಿದರು.

ಈ ಸಂದರ್ಭದಲ್ಲಿ ಮಹಾಪೌರ ಕೆ.ಚಮನ್ ಸಾಬ್, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಡಿ. ಬಸವರಾಜ್, ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಎಸ್. ಮಲ್ಲಿಕಾರ್ಜುನ್, ಜಿಲ್ಲಾ ಕಾಂಗ್ರೆಸ್ ಸಾಮಾಜಿಕ ನ್ಯಾಯ ಸಮಿತಿ ಅಧ್ಯಕ್ಷ ಎಸ್. ಪರಮೇಶ್, ಹರಿಹರದ ನಂದಿಗಾವಿ ಶ್ರೀನಿವಾಸ್, ಡಿಸಿಸಿ ಬ್ಯಾಂಕ್ ನಿರ್ದೇಶಕ ಸುರೇಂದ್ರ, ಸಾಗರ್ ಎಲ್.ಹೆಚ್., ಕಾಂಗ್ರೆಸ್ ಅಧ್ಯಕ್ಷ ಅಯೂಬ್, ಸುಭಾನ್ ಸಾಬ್ ಹಾಗೂ ಇತರರಿದ್ದರು.

ANVAYA
ಅನ್ವಯ ಆಯುರ್ವೇದ ಮತ್ತು ಪಂಚಕರ್ಮ ತರಬೇತಿ ಸಂಸ್ಥೆ
#1288, ಹಂಜಿ ನಿಲಯ, 8ನೇ ಕ್ರಾಸ್, ತರಳಬಾಳು ಬಡಾವಣೆ, ದಾವಣಗೆರೆ.
ಎಸ್.ಎಸ್.ಎಲ್.ಸಿ./ಪಿಯುಸಿ ನಂತರ ಮುಂದಿನ ಜೀವನದಾರಿ ಏನು? ಎಂಬ ಪ್ರಶ್ನೆಗೆ ನಮ್ಮಲ್ಲಿದೆ ಉತ್ತರ.
ನಮ್ಮ ಸಂಸ್ಥೆಯಿಂದ 6/8 ತಿಂಗಳಲ್ಲಿ ತರಬೇತಿ ಕೊಟ್ಟು,
ಭಾರತ ಸರ್ಕಾರದಿಂದ ಮಾನ್ಯತೆ ಪಡೆದ ಸರ್ಟಿಫಿಕೇಟ್ ಕೊಡಿಸಿ,
ಆಕರ್ಷಕ ಸಂಬಳ, ವಸತಿ ದೊರಕಲು ನಾವೇ ಸಹಕಾರಿಯಾಗುತ್ತೇವೆ.
ಮಾರ್ಚ್ 31ರೊಳಗೆ ಪ್ರವೇಶ ಪಡೆದರೆ ಅತ್ಯಾಕರ್ಷಕ ರಿಯಾಯಿತಿ ಇರುತ್ತದೆ.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: ☎ 90711 39666

## ಪಿಂಚಣಿ : ಜೀವಿತ ಪ್ರಮಾಣ ಪತ್ರ ಸಲ್ಲಿಕೆ

ದಾವಣಗೆರೆ, ಫೆ.18- ಕಾರ್ಮಿಕರ ಭವಿಷ್ಯ ನಿಧಿ ಸಂಘಟನೆಯ ಪಿಂಚಣಿ ಯೋಜನೆಯಡಿ ಶಿವಮೊಗ್ಗ ಮತ್ತು ದಾವಣಗೆರೆ ಜಿಲ್ಲೆಯ ಪಿಂಚಣಿದಾರರು ಪಿಂಚಣಿ ಪಡೆಯುತ್ತಿದ್ದು, ಇದರಲ್ಲಿ 5577 ಪಿಂಚಣಿದಾರರು ಇದುವರೆಗೆ ತಮ್ಮ ಜೀವಿತ ಪ್ರಮಾಣ ಪತ್ರವನ್ನು ಸಲ್ಲಿಸಿರುವುದಿಲ್ಲ. ಪಿಂಚಣಿದಾರರು ಜೀವಿತ ಪ್ರಮಾಣ ಪತ್ರವನ್ನು ಅಂಚೆ ಕಚೇರಿಯಲ್ಲಿ ಅಥವಾ ಬ್ಯಾಂಕ್‌ನಲ್ಲಿ ಸಲ್ಲಿಸಬಹುದು. ಅಥವಾ ತಮ್ಮ ಆಂಡ್ರಾಯ್ಡ್ ಮೊಬೈಲ್ ಫೋನ್ ಮೂಲಕ ಫೇಸ್ ಅಂಥೆಂಟಿಕೇಶನ್ ಟೆಕ್ನಾಲಜಿಯನ್ನು ಅಳವಡಿಸಿಕೊಂಡು ಜೀವಿತ ಪ್ರಮಾಣ ಪತ್ರವನ್ನು ಸಲ್ಲಿಸಬಹುದೆಂದು ಕ್ಷೇತ್ರಿಯ ಭವಿಷ್ಯ ನಿಧಿ ಆಯುಕ್ತರು ತಿಳಿಸಿದ್ದಾರೆ.

## ನಗರದಲ್ಲಿ ಇಂದು ಛತ್ರಪತಿ ಶಿವಾಜಿ ಜಯಂತಿ

ದಾವಣಗೆರೆ ಜಿಲ್ಲಾಡಳಿತದ ವತಿಯಿಂದ ಇಂದು ಛತ್ರಪತಿ ಶಿವಾಜಿ ಜಯಂತಿ ಹಾಗೂ ನಾಳೆ ಗುರುವಾರ ಸಂತ ಕವಿ ಸರ್ವಜ್ಞ ಜಯಂತಿಯನ್ನು ಬೆಳಿಗ್ಗೆ 11 ಗಂಟೆಗೆ ಜಿಲ್ಲಾಡಳಿತ ಭವನದಲ್ಲಿ ಆಯೋಜಿಸಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ರವಿಚಂದ್ರ ತಿಳಿಸಿದ್ದಾರೆ.

## ಆವರಗೊಳ್ಳದಲ್ಲಿ ಇಂದು

ದಾವಣಗೆರೆ ಸಮೀಪದ ಆವರಗೊಳ್ಳ ಗ್ರಾಮದ ಶ್ರೀ ವೀರಭದ್ರೇಶ್ವರ ಸ್ವಾಮಿಯ ರಥೋತ್ಸವದ ಪ್ರಯುಕ್ತ ಇಂದು ಬೆಳಿಗ್ಗೆ 8 ಗಂಟೆಗೆ ಉಯ್ಯಾಲೆ ಮಂಟಪದಿಂದ ಸ್ವಾಮಿಯ ಗುಗ್ಗಳದೊಂದಿಗೆ ರೇವಣಸಿದ್ದೇಶ್ವರ ಹಾಗೂ ಬೀರಲಿಂಗೇಶ್ವರ ಸ್ವಾಮಿಗಳೊಂದಿಗೆ ದೇವಸ್ಥಾನಕ್ಕೆ ಬಂದು ಸೇರುವುದು.

ನಾಳೆ ಗುರುವಾರ ಕಂಕಣ ವಿಸರ್ಜನೆ ನಡೆಯಲಿದೆ.

## ಮಹಾ ಕುಂಭಮೇಳದ ಅವಧಿ ವಿಸ್ತರಣೆ ಇಲ್ಲ

ಮಹಾಕುಂಭ ನಗರ, ಫೆ. 18 - ಮಹಾ ಕುಂಭ ಮೇಳದ ಅವಧಿಯನ್ನು ವಿಸ್ತರಿಸಲಾಗು ವುದು ಎಂಬ ಸಾಮಾಜಿಕ ಮಾಧ್ಯಮಗಳ ಗಾಳಿ ಸುದ್ದಿಗಳನ್ನು ತಳ್ಳಿ ಹಾಕಿರುವ ಪ್ರಯಾಗ್‌ರಾಜ್ ಜಿಲ್ಲಾಧಿಕಾರಿ ರವೀಂದ್ರ ಮಂದಾರ್, ಈ ಹಿಂದೆ ನಿಗದಿಯಾದಂತೆ ಫೆಬ್ರವರಿ 26ರಂದು ಕುಂಭಮೇಳಕ್ಕೆ ತೆರೆ ಬೀಳಲಿದೆ ಎಂದಿದ್ದಾರೆ. ಮುಹೂರ್ತ ಆಧರಿಸಿ ಕುಂಭಮೇಳದ ಅವಧಿಯನ್ನು ನಿಗದಿಪಡಿಸಲಾಗಿರುತ್ತದೆ. ಅವಧಿ ವಿಸ್ತರಿಸುವ ಯಾವುದೇ ಪ್ರಸ್ತಾವನೆ ಇಲ್ಲ ಎಂದವರು ಹೇಳಿದ್ದಾರೆ. ಕುಂಭಮೇಳಕ್ಕೆ ದೊಡ್ಡ ಪ್ರಮಾಣದಲ್ಲಿ ಜನರು ಬರುತ್ತಿರುವ ಹಿನ್ನೆಲೆಯಲ್ಲಿ ಅವಧಿ ವಿಸ್ತರಣೆ ಮಾಡಲಾಗುತ್ತದೆ ಎಂದು ಸಾಮಾಜಿಕ ಮಾಧ್ಯಮಗಳಲ್ಲಿ ಗಾಳಿ ಸುದ್ದಿ ಹರಡಲಾಗಿತ್ತು.



## ಶ್ರೀಮತಿ ವನಜಾಕ್ಷಮ್ಮ ನಿಧನ

ದಾವಣಗೆರೆ ಸಿಟಿ, 2ನೇ ಮೇನ್, 3ನೇ ಕ್ರಾಸ್, ವಿಜಯನಗರ ಬಡಾವಣೆ, ಕೊಂಡಜ್ಜಿ ರಸ್ತೆ ವಾಸಿ ದಿ. ವೀರಯ್ಯ ಕೊಂಡಜ್ಜಿ ಮಠ ಅವರ ಧರ್ಮಪತ್ನಿ

**ಶ್ರೀಮತಿ ವನಜಾಕ್ಷಮ್ಮ**

ಇವರು ದಿನಾಂಕ : 18.2.2025ರ ಮಂಗಳವಾರ ರಾತ್ರಿ 8 ಗಂಟೆಗೆ ನಿಧನರಾದರು. ಮೃತರಿಗೆ 93 ವರ್ಷ ವಯಸ್ಸಾಗಿತ್ತು. ಮೂವರು ಪುತ್ರರು, ಮೂವರು ಪುತ್ರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 19.2.2025ರ ಬುಧವಾರ ಮಧ್ಯಾಹ್ನ 1 ಗಂಟೆಗೆ ಬೂದಾಳ್ ರಸ್ತೆಯ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ : ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಬಂಧು-ಬಳಗ

## ಹನ್ನೊಂದನೇ ವರ್ಷದ ಪುಣ್ಯಸ್ಮರಣೆ



**ಲಿಂ॥ ಸಿ.ಎಸ್. ಸಿದ್ಧಬಸಯ್ಯನವರು,** ಮುಡೇನಹಳ್ಳಿ

ಲಿಂಗೈಕ್ಯ : 19.02.2014

ನೀವು ನಮ್ಮನ್ನಗಲಿ ಇಂದಿಗೆ ಹನ್ನೊಂದು ವರ್ಷಗಳಾದವು
ನಿಮ್ಮ ನೆನಪು ನಮ್ಮಲ್ಲಿ ಸದಾ ಹಚ್ಚಹಸಿರಾಗಿದೆ. ಸದಾ ನಿಮ್ಮ ನೆನಪಿನಲ್ಲಿರುವ,
ಧರ್ಮಪತ್ನಿ : ಶ್ರೀಮತಿ ಶಾರದಮ್ಮ ಸಿ.ಎಸ್. ಸಿದ್ಧಬಸಯ್ಯ
ಶ್ರೀಮತಿ, ಶ್ರೀ ಸಿ.ಎಸ್. ಮರುಳಸಿದ್ಧಯ್ಯ ಮತ್ತು ಸಹೋದರರು, ಅಗಸನಕಟ್ಟೆ
ಶ್ರೀಮತಿ ಲತಾ, ಶ್ರೀ ಸಿ.ಎಸ್. ನಾಗರಾಜಯ್ಯ,
ಶ್ರೀಮತಿ ಗೀತಾ, ಶ್ರೀ ಸಿ.ಎಸ್. ವಸಂತಯ್ಯ
ಶ್ರೀಮತಿ ಮಮತ, ಶ್ರೀ ಸಿ.ಎಸ್. ಸಿದ್ದೇಶ್
ಮೊಮ್ಮಕ್ಕಳಾದ : ಯಶವಂತ್, ಯೋಗೇಶ್, ಆಕಾಶ್, ನಿವೇದಿತಾ, ನೂತನ್, ಕಾರ್ತಿಕ್ ಹಾಗೂ ಬಂಧು-ಮಿತ್ರರು, ಮುಡೇನಹಳ್ಳಿ.
ಮುಡೇನಹಳ್ಳಿ ಮತ್ತು ಅಗಸನಕಟ್ಟೆ ಗ್ರಾಮಸ್ಥರು

**ಶ್ರೀ ವಿಶ್ವಬಂಧು ಪ್ರಾವಿಜನ್ ಸ್ಟೋರ್**
ಕೆ.ಆರ್.ಮಾರ್ಕೆಟ್, ದಾವಣಗೆರೆ. ಮೊ : 99807-28126

## ಹೃತ್ಪೂರ್ವಕ ಕೃತಜ್ಞತೆಗಳು



ಶ್ರೀ ಡಿ. ತಿರುಪತಿ
ಅಧ್ಯಕ್ಷರು,
ಎಸ್‌ಡಿಎಂಸಿ ಅಧ್ಯಕ್ಷರು, ಕಾಡಜ್ಜಿ

ಕಾಡಜ್ಜಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಅಧ್ಯಕ್ಷರಾಗಿ **ಶ್ರೀ ಡಿ.ತಿರುಪತಿ** ಹಾಗೂ ಉಪಾಧ್ಯಕ್ಷರಾಗಿ **ಶ್ರೀ ಗುತ್ತೂರು ಪರಸಪ್ಪ** ಅವರುಗಳನ್ನು ಅವಿರೋಧವಾಗಿ ಆಯ್ಕೆ ಮಾಡಿರುವುದಕ್ಕೆ ಹೃತ್ಪೂರ್ವಕ ಕೃತಜ್ಞತೆಗಳು.
ಹಾಗೂ ಚುನಾವಣಾಧಿಕಾರಿಯಾದ **ಶ್ರೀ ಸತೀಶ್ ನಾಯ್ಕ್ ಎಲ್.** ಹಾಗೂ ಸಿಇಓ **ಜಿ. ಶಿವಕುಮಾರ್** ಇವರಿಗೂ ಕೃತಜ್ಞತೆಗಳು...



ಶ್ರೀ ಗುತ್ತೂರು ಪರಸಪ್ಪ
ಉಪಾಧ್ಯಕ್ಷರು,
ಕಾಡಜ್ಜಿ



ಸತೀಶ್ ನಾಯ್ಕ್ ಎಲ್.
ಚುನಾವಣಾಧಿಕಾರಿ



ಹೆಚ್. ಕುಬೇಂದ್ರಪ್ಪ
ನಿರ್ದೇಶಕರು, ಕಾಡಜ್ಜಿ



ಹನುಮಂತಪ್ಪ ಬಣಕಾರ್
ನಿರ್ದೇಶಕರು, ಕಾಡಜ್ಜಿ



ಕೆ.ಎನ್. ನಂಜುಂಡೇಶ್ವರ
ನಿರ್ದೇಶಕರು, ಕಾಡಜ್ಜಿ



ಎನ್.ಬಿ. ಶೇಖರಪ್ಪ
ನಿರ್ದೇಶಕರು, ನಾಗರಕಟ್ಟೆ



ಡಿ.ಎಸ್. ಪ್ರಭುದೇವ
ನಿರ್ದೇಶಕರು, ಕಾಡಜ್ಜಿ



ಹಿದಾಯತ್‌ವುಲ್ಲಾ
ನಿರ್ದೇಶಕರು, ಕಾಡಜ್ಜಿ



ಬಿ.ವಿ. ಬಸವರಾಜಪ್ಪ
ನಿರ್ದೇಶಕರು, ಕಾಡಜ್ಜಿ



ಶ್ರೀಮತಿ ಹೆಚ್.ಎನ್. ಜ್ಯೋತಿ
ನಿರ್ದೇಶಕರು, ಕಾಡಜ್ಜಿ



ಶ್ರೀಮತಿ ಪಿ.ಎಸ್. ವನಜಾಕ್ಷಮ್ಮ
ನಿರ್ದೇಶಕರು, ಕಾಡಜ್ಜಿ



ವಿ.ಎನ್.ಮಂಜುನಾಥ
ನಿರ್ದೇಶಕರು, ಕಾಡಜ್ಜಿ



ಅಭಿಲಾಶ್ ಜಿ.ವಿ.
ಕ್ಷೇತ್ರಾಧಿಕಾರಿಗಳು, ದಾವಣಗೆರೆ.

ದಿನಾಂಕ :17.02.2025 ರಂದು ನಡೆದ ಚುನಾವಣೆಯಲ್ಲಿ ಕಾಡಜ್ಜಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಹಾಗೂ ನಿರ್ದೇಶಕರನ್ನಾಗಿ ಅವಿರೋಧವಾಗಿ ಆಯ್ಕೆ ಮಾಡಲು ಸಹಕರಿಸಿದ ಕಾಡಜ್ಜಿ ಹಾಗೂ ನಾಗರಕಟ್ಟೆ ಗ್ರಾಮದ ಎಲ್ಲಾ ಹಿರಿಯರಿಗೂ ಹಾಗೂ ಸರ್ವ ಸದಸ್ಯರಿಗೂ ಮತ್ತು ಗ್ರಾಮ ಪಂಚಾಯಿತಿ ಸದಸ್ಯರಿಗೂ
**ಹೃದಯ ಪೂರ್ವಕ ಕೃತಜ್ಞತೆಗಳು.**

## ಅಭಿನಂದನೆಗಳು




ಸುವರ್ಣ ವಾಹಿನಿಯ
**'2025ರ ಸುವರ್ಣ ಕನ್ನಡಿಗ'**
ಪ್ರಶಸ್ತಿಗೆ ಭಾಜನರಾಗಿರುವ
ಗ್ಲೋಬಲ್ ಟ್ರೇಡರ್ಸ್ ಮತ್ತು
ಗ್ಲೋಬಲ್ ಗೋಲ್ಡ್ ಫಿಂಚ್ ಮಾಲೀಕರೂ
ಮತ್ತು ನಮ್ಮ ಆತ್ಮೀಯ ಮಿತ್ರರಾದ
**ಶ್ರೀ ಸುನೀಲ್‌ಕುಮಾರ್ ಬಿ.ಜೆ.**
ಅವರಿಗೆ
ಹೃದಯಪೂರ್ವಕ ಅಭಿನಂದನೆಗಳು.

- ಸದಾನಂದ ಸ್ವಾಮಿ ಎಸ್. ಮಠದ್, ವಿನಾಯಕ ಪೇಂಟ್ಸ್
- ಈಚಘಟ್ಟ ಬಸವರಾಜ್, ಆಡಿಟರ್
- ತಿಪ್ಪೇಶ್ ಜಿ.ವಿ. ಸಿಟಿ ಎಲೆಕ್ಟ್ರಾನಿಕ್ಸ್
- ವಿಜಯ್‌ಕುಮಾರ್, ಟ್ರಾನ್ಸ್‌ಪೋರ್ಟ್
- ರಾಜಾಸಾಬ್ ವೈ.ಎನ್. ಚಲನಚಿತ್ರ ವಿತರಕರು ಮತ್ತು ನಟರು
- ಸತೀಶ್ ಚಂದ್ರ, ಟ್ರಾನ್ಸ್‌ಪೋರ್ಟ್
- ದೊಡ್ಡಬಸಪ್ಪ, ಆಟೋ ಗ್ಯಾರೇಜ್
- ಮಾಲತೇಶ್ ಎಂ.ಆರ್. (ಮಾಲಿ)
- ಪ್ರಭು, ಕ್ಯೂ ಸ್ಪೋರ್ಟ್ಸ್
- ಆನಂದ್, ಶ್ರೀ ಗಂಧ ಗಿಫ್ಟ್ಸ್
- ಹರೀಶ್
- ಸಿಂಗರ್ ಬಸವರಾಜ್, ಆಡಿಟರ್
- ಜಗದೀಶ್, ಆಡಿಟರ್

**ಸ್ಪಂದನ ಗೆಳೆಯರ ಬಳಗ**

ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ

ಪೋಷಕರಾಗುವ ಈ ಸಮಯ ಸುಗಮವಾಗಿರಲು ನಿಮ್ಮ ನಂಬಿಕೆ ನಮ್ಮ ಮೇಲಿರಲಿ

ನಂಜಪ್ಪ ಹಾಸ್ಪಿಟಲ್ಸ್

ಪ್ರಸೂತಿ ಮತ್ತು ಸ್ತ್ರೀರೋಗ ಚಿಕಿತ್ಸಾ ಸೇವೆಗಳು ಈಗ ನಂಜಪ್ಪ ಆಸ್ಪತ್ರೆಯಲ್ಲಿ

ಸೇವೆಗಳು :
- ಗರ್ಭಾವಸ್ಥೆಯ ಆರೈಕೆ
- ಪ್ರಸವಪೂರ್ವ ಮತ್ತು ನಂತರದ ಆರೈಕೆ
- ನೋವು ರಹಿತ ಹೆರಿಗೆ ಸೇವೆಗಳು
- ಹೆಚ್ಚಿನ ಅಪಾಯದ ಗರ್ಭಧಾರಣೆಯ ನಿರ್ವಹಣೆ ಸೇರಿದಂತೆ ಪ್ರಸೂತಿಶಾಸ್ತ್ರ
- ಲ್ಯಾಪರೊಸ್ಕೋಪಿ ಸ್ತ್ರೀರೋಗ ಶಸ್ತ್ರಚಿಕಿತ್ಸೆ

C 94
M 61
Y 22
K 4


ಅಪಾಯಿಂಟ್ಮೆಂಟ್‌ಗಾಗಿ ಕರೆ ಮಾಡಿ
08192-260111/260222

ಆರೋಗ್ಯ ಸಲಹೆಗಳಿಗಾಗಿ ಸ್ಕ್ಯಾನ್ ಮಾಡಿ ಫಾಲೋ ಮಾಡಿ

ಮಾಗನೂರು ಬಸಪ್ಪ ರಸ್ತೆ, ತರಳಬಾಳು ಲೇಔಟ್, ದಾವಣಗೆರೆ



## ದೋಭಿಘಾಟ್‌ಗೆ ವಿದ್ಯುತ್ ಲಾಂಡ್ರಿ ಮಿಷನ್ ಅಳವಡಿಸಿ ಮಡಿವಾಳ ಸಮಾಜಕ್ಕೆ ಅನುಕೂಲ ಮಾಡಿಕೊಟ್ಟ ಸಚಿವರಾದ ಶ್ರೀಯುತ ಎಸ್. ಎಸ್.ಮಲ್ಲಿಕಾರ್ಜುನ್ ಅವರಿಗೆ ಕೃತಜ್ಞತೆಗಳು











ದಾವಣಗೆರೆ ಜಿಲ್ಲಾ ಪಂಚಾಯತ್ ಸಮೀಪ ಇರುವ ರಾಷ್ಟ್ರೀಯ ಹೆದ್ದಾರಿ ಬೈಪಾಸ್ ರಸ್ತೆಯಲ್ಲಿರುವ ದೋಬಿಘಾಟ್‌ಗೆ ಸುಮಾರು 1ಕೋಟಿ ರೂಪಾಯಿಗಳ ವೆಚ್ಚದಲ್ಲಿ ವಿದ್ಯುತ್ ಲಾಂಡ್ರಿಗೆ ಮಿಷನ್ ಆಳವಡಿಸಿ ಮಡಿವಾಳ ಸಮಾಜಕ್ಕೆ ಅನುಕೂಲ ಮಾಡಿಕೊಟ್ಟ ಸಚಿವರಾದ **ಶ್ರೀಯುತ ಎಸ್. ಎಸ್.ಮಲ್ಲಿಕಾರ್ಜುನ್** ಅವರಿಗೆ ಕೃತಜ್ಞತೆಗಳು.

ಲಾಂಡ್ರಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಕಾಮಗಾರಿಯ ಉದ್ಘಾಟನಾ ಸಮಾರಂಭಕ್ಕೆ ಆಗಮಿಸುತ್ತಿರುವ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಶಾಸಕರಾದ **ಡಾ. ಶಾಮನೂರು ಶಿವಶಂಕರಪ್ಪ** ಅವರಿಗೆ ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ, ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವರಾದ **ಶ್ರೀಯುತ ಎಸ್. ಎಸ್.ಮಲ್ಲಿಕಾರ್ಜುನ್** ಅವರಿಗೆ, ದಾವಣಗೆರೆ ಲೋಕಸಭಾ ಸದಸ್ಯರಾದ **ಶ್ರೀಮತಿ ಡಾ.ಪ್ರಭಾ ಮಲ್ಲಿಕಾರ್ಜುನ್** ಅವರಿಗೆ ಹಾರ್ದಿಕ ಸುಸ್ವಾಗತ.

ಸಮಾಜ ಬಾಂಧವರು ಸಮಾರಂಭಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಸಮಯಕ್ಕೆ ಸರಿಯಾಗಿ ಭಾಗವಹಿಸಲು ಕೋರಿದೆ.

ದಿನಾಂಕ: 19-02-2025ರ ಬುಧವಾರ ಮಧ್ಯಾಹ್ನ 3ಗಂಟೆಗೆ
ಸ್ಥಳ: ಚಾಮರಾಜ ಪೇಟೆಯ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಯ ಆವರಣ (ಹಳೇ ಹೆರಿಗೆ ಆಸ್ಪತ್ರೆ)

ಅಧ್ಯಕ್ಷರು ಹಾಗೂ ಪದಾಧಿಕಾರಿಗಳು
**ದಾವಣಗೆರೆ ಜಿಲ್ಲಾ ಮಡಿವಾಳ ಮಾಚಿದೇವ ಸಂಘ,**
17ನೇ ತಿರುವು, 1ನೇ ಮುಖ್ಯ ರಸ್ತೆ, ವಿನೋಬನಗರ, ದಾವಣಗೆರೆ.



## ಕಾಮಗಾರಿ ವೀಕ್ಷಣೆ, ಭೂಮಿ ಪೂಜೆ ಮತ್ತು ಉದ್ಘಾಟನಾ ಸಮಾರಂಭ

**ಸನ್ಮಾನ್ಯ ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್‌ರವರು,**
ಗಣಿ, ಭೂ ವಿಜ್ಞಾನ ತೋಟಗಾರಿಕೆ ಸಚಿವರು, ಜಿಲ್ಲಾ ಉಸ್ತುವಾರಿ ಸಚಿವರು, ದಾವಣಗೆರೆ ಇವರಿಂದ

**ದಿನಾಂಕ: 19-02-2025ನೇ ಬುಧವಾರ**



| | |
|---|---|
| 01 | ದೊಡ್ಡಬಾತಿಯಲ್ಲಿ ಹೊಸದಾಗಿ ನಿರ್ಮಿಸಿರುವ 40 ಎಂ.ಎಲ್.ಡಿ. ಸಾಮರ್ಥ್ಯದ ನೀರು ಶುದ್ಧೀಕರಣ ಘಟಕದ ಕಾಮಗಾರಿ ವೀಕ್ಷಣೆ (ಅಂದಾಜು ಮೊತ್ತ, 8300 ಲಕ್ಷಗಳು) ಸ್ಥಳ : ದೊಡ್ಡಬಾತಿ, ಸಮಯ: ಮಧ್ಯಾಹ್ನ: 2-30 ಗಂಟೆಗೆ |
| 02 | ಕೆ.ಆರ್.ಮಾರ್ಕೆಟ್‌ನಲ್ಲಿ ನಿರ್ಮಿಸಿರುವ ಹೊಸ ಕಟ್ಟಡಕ್ಕೆ ವಾಹನಗಳ ನಿಲುಗಡೆಗೆ ರ‍್ಯಾಂಪ್ ನಿರ್ಮಾಣದ ಕಾಮಗಾರಿಗೆ ಭೂಮಿ ಪೂಜೆ ಸಮಾರಂಭ (ಅಂದಾಜು ಮೊತ್ತ 280.00 ಲಕ್ಷಗಳು) |
| 03 | ವಾರ್ಡ್ ನಂ. 44 ರಲ್ಲಿ ವ್ಯಾಪ್ತಿಯಲ್ಲಿರುವ ಮಹಾಲಕ್ಷ್ಮೀ ಬಡಾವಣೆಯ ಮುಖ್ಯ ರಸ್ತೆಯನ್ನು ಸಿ.ಸಿ. ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ಸಮಾರಂಭ (ಅಂದಾಜು ಮೊತ್ತ 190.98ಲಕ್ಷಗಳು) |
| 04 | ದಾವಣಗೆರೆ ರಾಷ್ಟ್ರೀಯ ಹೆದ್ದಾರಿ ಬೈಪಾಸ್ ರಸ್ತೆಯಲ್ಲಿರುವ ದೊಬಿಘಾಟ್‌ಗೆ ವಿದ್ಯುತ್ ಲಾಂಡ್ರಿ ಮಿಷನ್ ಅಳವಡಿಸಿ, ವಿದ್ಯುತ್ ಸಂಪರ್ಕ ಕಲ್ಪಿಸುವ ಕಾಮಗಾರಿಯ ಉದ್ಘಾಟನಾ ಸಮಾರಂಭ (ಅಂದಾಜು ಮೊತ್ತ 100 ಲಕ್ಷಗಳು) ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಯ ಆವರಣದ ಒಳಗಡೆ, ಚಾಮರಾಜಪೇಟೆ ಸಮಯ: ಮಧ್ಯಾಹ್ನ: 3-00 ಗಂಟೆಗೆ |
| 05 | ಶ್ರೀಮತಿ ಇಂದಿರಾಗಾಂಧಿ ವಸತಿ ಶಾಲೆ, ನೂತನ ಶಾಲಾ ಕಟ್ಟಡದ ಉದ್ಘಾಟನಾ ಸಮಾರಂಭ (ಅಂದಾಜು ಮೊತ್ತ 2250 ಲಕ್ಷಗಳು) ಶಾಲಾ ಆವರಣ, ಅಣಜಿ ಗ್ರಾಮ, ದಾವಣಗೆರೆ ತಾಲ್ಲೂಕು ಸಮಯ : 3.30 ಗಂಟೆಗೆ |
| 06 | ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯದ ನೂತನ ಕಟ್ಟಡದ ಉದ್ಘಾಟನಾ ಸಮಾರಂಭ. ಪಲ್ಲಾಗಟ್ಟೆ, ಜಗಳೂರು ತಾಲ್ಲೂಕು, ದಾವಣಗೆರೆ ಜಿಲ್ಲೆ (ಅಂದಾಜು ಮೊತ್ತ 325ಲಕ್ಷಗಳು) |
| 07 | ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ, ನೂತನ ಶಾಲಾ ಕಟ್ಟಡದ ಉದ್ಘಾಟನಾ ಸಮಾರಂಭ ಸೊಕ್ಕೆ ಚಿಕ್ಕಬಂಟನಹಳ್ಳಿ, ಜಗಳೂರು ತಾಲ್ಲೂಕು, ದಾವಣಗೆರೆ ಜಿಲ್ಲೆ (ಅಂದಾಜು ಮೊತ್ತ 2250ಲಕ್ಷಗಳು) |
| 08 | ಡಾ॥ ಬಿ.ಆರ್. ಅಂಬೇಡ್ಕರ್ ವಸತಿ ಶಾಲೆ, ನೂತನ ಶಾಲಾ ಕಟ್ಟಡದ ಉದ್ಘಾಟನಾ ಸಮಾರಂಭ ಕಾಮಗೇತನಹಳ್ಳಿ, ಜಗಳೂರು ತಾಲ್ಲೂಕು, ದಾವಣಗೆರೆ ಜಿಲ್ಲೆ. (ಅಂದಾಜು ಮೊತ್ತ 2250 ಲಕ್ಷಗಳು) ಶಾಲಾ ಆವರಣ, ಕಾಮಗೇತನಹಳ್ಳಿ, ಜಗಳೂರು ತಾಲ್ಲೂಕು, ದಾವಣಗೆರೆ. ಜಿಲ್ಲೆ ಸಮಯ: ಮಧ್ಯಾಹ್ನ: 4-00 ಗಂಟೆಗೆ |

ಸದರಿ ಕಾಮಗಾರಿ ವೀಕ್ಷಣೆ, ಭೂಮಿ ಪೂಜೆ ಮತ್ತು ಉದ್ಘಾಟನಾ ಸಮಾರಂಭಗಳಿಗೆ ಆಗಮಿಸುತ್ತಿರುವ ಶಾಸಕರು, ಮಹಾನಗರ ಪಾಲಿಕೆಯ ಮಹಾಪೌರರು, ಉಪ ಮಹಾಪೌರರು, ಆಯುಕ್ತರು, ಸ್ಥಾಯಿ ಸಮಿತಿ ಅಧ್ಯಕ್ಷರುಗಳು, ಸದಸ್ಯರುಗಳಿಗೂ, ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಮಾಜಿ ಸದಸ್ಯರುಗಳಿಗೂ, ಗ್ರಾಮ ಪಂಚಾಯತಿ ಮಾಜಿ ಮತ್ತು ಹಾಲಿ ಸದಸ್ಯರುಗಳಿಗೂ, ಎಲ್ಲಾ ಅಧಿಕಾರಿ ವರ್ಗದವರಿಗೂ ಹಾಗೂ ಕಾಂಗ್ರೆಸ್ ಪಕ್ಷದ ಮುಖಂಡರುಗಳಿಗೂ, ಕಾರ್ಯಕರ್ತರಿಗೂ
**ಹೃದಯಪೂರ್ವಕ ಸ್ವಾಗತ,ಸುಸ್ವಾಗತ**

KA/SK/DVG-028/2024-2026. O/P @ B.V. Nagar P.O. JANATHAVANI - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas